ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನಾಟಕ ಪ್ರದರ್ಶನ
ಕಲಬುರಗಿ ನಾಟಕೋತ್ಸವದಲ್ಲಿ ಗುರುವಾರ ದೆಹಲಿಯ ತಂಡ ಪ್ರದರ್ಶಿಸಿದ ‘ಅಬೌಟ್ ರಾಮ್’ ನಾಟಕದ ದೃಶ್ಯ



ಪ್ರತಿಭಟನೆ
ಗೌರವ ಧನವನ್ನು ₹15 ಸಾವಿರಕ್ಕೆ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು


SAMSUNG
Galaxy S26 Series
Galaxy AI

ಶುಕ್ರವಾರ, ಫೆಬ್ರುವರಿ 27, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶೌರ್ಯ ಪ್ರದರ್ಶನ



ಪಂಜಾಬ್‌ನ ಪಠಾಣ್‌ಕೋಟ್‌ನ ಧ್ಯಾನ್ ಚಂದ್ ಕ್ರೀಡಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಸಾಮರ್ಥ್ಯ ಪ್ರದರ್ಶನ ಮತ್ತು ಪದಗ್ರಹಣ ಸಮಾರಂಭದಲ್ಲಿ ಸೇನೆಯ 'ಭೈರವ' ಬೆಟಾಲಿಯನ್ ಯೋಧರು ಶೌರ್ಯ ಪ್ರದರ್ಶಿಸಿದರು

ಪ್ರಸಿದ್ಧ ಮಿಂಚು



ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಅವರು ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಜಮ್ಮು ಕಾಶ್ಮೀರ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು


ನಾಡಿನ ಸರ್ವತೋಮುಖ ಬೆಳವಣಿಗೆಯನ್ನೇ ಜೀವನದ
ಗುರಿಯಾಗಿಸಿಕೊಂಡು ಹೋರಾಡಿದ
ಮುತ್ಸದ್ಧಿ ರಾಜಕಾರಣಿ
ತಳಮಟ್ಟದಿಂದ ಪಕ್ಷವನ್ನು ಕಟ್ಟಿ ಬೆಳೆಸಿದ
ಪಕ್ಷದ ನಿಷ್ಠಾವಂತ ಶಿಸ್ತಿನ ಸಿಪಾಯಿ
ರೈತರಿಗೆ, ಮಹಿಳೆಯರಿಗೆ, ದೀನ-ದಲಿತರಿಗೆ ನೆಮ್ಮದಿಯ ಬದುಕನ್ನು
ಕಲ್ಪಿಸಿಕೊಡುವಲ್ಲಿ ಹಗಲಿರುಳು ಶ್ರಮಿಸಿದ
ರೈತ ನಾಯಕ
ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಬಿಜೆಪಿ
ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ
ಸನ್ಮಾನ್ಯ ಶ್ರೀ
ಬಿ.ಎಸ್. ಯಡಿಯೂರಪ್ಪ
ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಸಂದೀಪ ಬಿ ರೆಡ್ಡಿ
ಅಧ್ಯಕ್ಷರು, - ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್
ಹಾಗೂ ಬಿಜೆಪಿ ಯುವ ಮುಖಂಡರು,
ಚಿಕ್ಕಬಳ್ಳಾಪುರ
ಅಲೋಕ್ ವಿಶ್ವನಾಥ್
ಯುವ ಬಿಜೆಪಿ ಮುಖಂಡರು
ಯಲಹಂಕ ವಿಧಾನಸಭಾ ಕ್ಷೇತ್ರ
ಚಿಕ್ಕಬಳ್ಳಾಪುರ ಜಿಲ್ಲೆಯ ಸಮಸ್ತ ನಾಗರೀಕ ಬಂಧುಗಳು.

prajavani.net prajavani
ಶುಕ್ರವಾರ, ಫೆಬ್ರುವರಿ 27, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 58 | ಪುಟ 20
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 82,248 | ನಿಫ್ಟಿ 25,496 | $/₹ 90.91 | ಚಿನ್ನ (Std. 10g) ₹1,66,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,82,200 (ಬೆಂಗಳೂರು)

ಭಾರತಕ್ಕೆ ಜಯ

ಭಾರತದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ (ಅಜೇಯ 50;23ಎ) ಅವರು ಗುರುವಾರ ಟಿ20 ವಿಶ್ವಕಪ್‌ನ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಮಿಂಚಿನ ಅರ್ಧಶತಕ ದಾಖಲಿಸಿದರು. ಭಾರತ 72 ರನ್‌ಗಳಿಂದ ಜಯ ಸಾಧಿಸಿತು



ಅಕ್ರಮ ಬಂಧನದಲ್ಲಿದ್ದ 18 ಕಾರ್ಮಿಕರ ರಕ್ಷಣೆ: ಇಬ್ಬರ ಬಂಧನ



ರಕ್ಷಣೆ ಮಾಡಿರುವ ಕಾರ್ಮಿಕರನ್ನು ಹಾಸನದ ಅಂಬೇಡ್ಕರ್ ಭವನದಲ್ಲಿ ಇರಿಸಲಾಗಿದೆ

ಪ್ರಜಾವಾಣಿ ವಾರ್ತೆ

ಹಳೇಬೀಡು (ಹಾಸನ): ಕೆಲಸಕ್ಕೆ ಕರೆದೊಯ್ದು ಕೂಲಿಯನ್ನು ಕೊಡದೇ ಹೋಬಳಿಯ ಚಟ್ನಹಳ್ಳಿ ಗ್ರಾಮದಲ್ಲಿ ಅಕ್ರಮ ಬಂಧನದಲ್ಲಿ ಇರಿಸಲಾಗಿದ್ದ 18 ಕಾರ್ಮಿಕರನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನಾಗರಾಜ್ ಮತ್ತು ಮೋಹನೇಶ್ ಎಂಬವರನ್ನು ಬಂಧಿಸಲಾಗಿದೆ.

ರೈಲು ನಿಲ್ದಾಣಗಳಲ್ಲಿ ಆಶ್ರಯವಿಲ್ಲದೆ ಇದ್ದ ಜನರನ್ನು ಗುರುತಿಸುತ್ತಿದ್ದ ಆರೋಪಿಗಳು, ಕೆಲಸ ಕೊಡಿಸುವುದಾಗಿ ಹೇಳಿ ಅವರನ್ನು ಕರೆ ತರುತ್ತಿದ್ದರು. ನಂತರ ಶುಂಠಿ ಕೃಷಿ ಕೆಲಸಕ್ಕೆ ಕರೆದೊಯ್ಯುತ್ತಿದ್ದರು. ಕೆಲಸ ಮುಗಿದ ಬಳಿಕ ಅವರಿಗೆ ಕೂಲಿ ನೀಡುತ್ತಿರಲಿಲ್ಲ ಮತ್ತು ಅವರನ್ನೆಲ್ಲ ಒಂದೇ ಜಾಗದಲ್ಲಿ ಬಂಧಿಸಿ ಇರಿಸುತ್ತಿದ್ದರು.

‘ಮೂಲಸೌಲಭ್ಯಗಳಿಲ್ಲದ ಒಂದೇ ಶೆಡ್‌ನಲ್ಲಿ ಎಲ್ಲರನ್ನೂ ಇರಿಸಲಾಗುತ್ತಿತ್ತು. ಬೆಳಿಗ್ಗೆ 7 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಬೇರೆಯವರ ಜಮೀನಿನಲ್ಲಿ ಕೆಲಸ ಮಾಡಿಸಿ, ರಾತ್ರಿ ಮತ್ತೆ ಶೆಡ್‌ಗೆ ತಂದು ಬಿಡುತ್ತಿದ್ದರು. ಹೊರಗಿನವರ ಸಂಪರ್ಕ ಸಿಗದಂತೆ ನಿಗಾವಹಿಸಿದ್ದರು’ ಎಂದು ರಕ್ಷಣೆಗೆ ಒಳಗಾದ ಕಾರ್ಮಿಕರೊಬ್ಬರು ತಿಳಿಸಿದರು.

ಕೇರಳ, ಒಡಿಶಾ, ಜಾರ್ಖಂಡ್, ಉತ್ತರ ಪ್ರದೇಶ ಸೇರಿದಂತೆ ಹೊರ ರಾಜ್ಯಗಳ ಕಾರ್ಮಿಕರು ಹಾಗೂ ರಾಜ್ಯದ ಹಾವೇರಿ, ವಿಜಯಪುರ, ಗದಗ ಸೇರಿದಂತೆ ಹಲವೆಡೆಗಳಿಂದ ಬಂದವರು ಇವರಲ್ಲಿದ್ದಾರೆ.

ಬೆಳಕಿಗೆ ಬಂದಿದ್ದು ಹೀಗೆ

ವಿಜಯಪುರ ಜಿಲ್ಲೆಯ ರಜತ್ ಎಂಬಾತ ಇಲ್ಲಿಂದ ತಪ್ಪಿಸಿಕೊಂಡು ಹೋಗಿದ್ದು, ತನ್ನ ಸ್ನೇಹಿತ ಈರಣ್ಣನನ್ನು ಬೇಲೂರಿನಲ್ಲಿ ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿದೆ ಎಂಬ ಮಾಹಿತಿ ಬಹಿರಂಗಪಡಿಸಿದ್ದ.

ಇದನ್ನು ಆಧರಿಸಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ನೇತೃತ್ವದಲ್ಲಿ ಪೊಲೀಸರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿದರು. ಈಗ ರಕ್ಷಿಸಿರುವ ಕಾರ್ಮಿಕರಿಗೆ ಹಾಸನದ ಅಂಬೇಡ್ಕರ್ ಭವನದಲ್ಲಿ ತಾತ್ಕಾಲಿಕ ಆಶ್ರಯ ನೀಡಲಾಗಿದ್ದು, ಅಗತ್ಯ ಸೌಲಭ್ಯ ಒದಗಿಸಲಾಗಿದೆ. ‘ಜೀತಪದ್ಧತಿ ನಿಷೇಧ ಕಾಯ್ದೆಯಡಿ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ. ‘ರಕ್ಷಿಸಲಾದ 18 ಮಂದಿಗೆ ಪುನರ್ವಸತಿ, ಆಹಾರ, ವೈದ್ಯಕೀಯ ನೆರವು ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

56,432 ಹುದ್ದೆಗೆ ನೇಮಕ

30 ದಿನದೊಳಗೆ ಪ್ರಕ್ರಿಯೆ • ಶೇ 50ರ ಮೀಸಲಾತಿಗೆ ಒಳಪಟ್ಟು ನೇಮಕಾತಿಗೆ ಸಚಿವ ಸಂಪುಟ ಸಭೆ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ 30 ದಿನದೊಳಗೆ ನೇರ ನೇಮಕಾತಿ ಪ್ರಕ್ರಿಯೆಯಡಿ 56,432 ಹುದ್ದೆಗಳನ್ನು ಭರ್ತಿ ಮಾಡುವ ಮಹತ್ವದ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.

ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆ ಖಾಲಿ ಉಳಿದಿದ್ದು, ನೇಮಕಾತಿ ಮಾಡದೇ ಯುವಕರಿಗೆ ವಂಚಿಸಲಾಗುತ್ತಿದೆ ಎಂದು ನಿರುದ್ಯೋಗಿಗಳು ಹಲವು ಹಂತದ ಹೋರಾಟ ನಡೆಸಿದ್ದರು. ಆ ಬೆನ್ನಲ್ಲೇ, ಸರ್ಕಾರ ಈ ನಿರ್ಣಯ ಕೈಗೊಂಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಆದರೆ, ಶೇ 50ರಷ್ಟು ಮೀಸಲಾತಿಯ ಮಿತಿಗೊಳಪಟ್ಟು ಎಲ್ಲ ನೇಮಕಾತಿ ಪ್ರಕ್ರಿಯೆ ನಡೆಸಲು ತೀರ್ಮಾನಿಸಲಾಗಿದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಹಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದಾಗಿ, ಎಲ್ಲ ನೇಮಕಾತಿ ಪ್ರಕ್ರಿಯೆಗಳಿಗೂ ತಡೆ ಬಿದ್ದಿತ್ತು.

ಇದಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ ‘ಕರ್ನಾಟಕ ಅನುಸೂಚಿತ ಜಾತಿಗಳ (ಉಪ-ವರ್ಗೀಕರಣ) ಮಸೂದೆ-2025’ ಅನ್ನು ರಾಜ್ಯ ಸರ್ಕಾರ ರೂಪಿಸಿತ್ತು.

▶7



2022ರಲ್ಲಿ ಇದ್ದ ಮೀಸಲಾತಿ ಪ್ರಮಾಣ(ಶೇಕಡಾವಾರು)

ಪರಿಶಿಷ್ಟ ಜಾತಿ	15
ಪರಿಶಿಷ್ಟ ಪಂಗಡ	3
ಹಿಂದುಳಿದ ವರ್ಗ	32
ಸಾಮಾನ್ಯ	50

ಗೋವಿಂದರಾವ್ ಸಮಿತಿ ಶಿಫಾರಸಿಗೆ ಅಸ್ತು

ಬೆಂಗಳೂರು: ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪರಿಹಾರ ಕಂಡುಕೊಳ್ಳಲು ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ.

ಸಮಿತಿಯ ಶಿಫಾರಸುಗಳನ್ನು ಸದ್ಯವೇ ಮಂಡಿಸಲಿರುವ ಬಜೆಟ್‌ನಲ್ಲಿ ಪರಿಗಣಿಸಲೂ ಸರ್ಕಾರ ನಿರ್ಧರಿಸಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಮುಂದಿನ ಐದು ವರ್ಷಗಳಲ್ಲಿ ಹೆಚ್ಚುವರಿಯಾಗಿ ₹43,914 ಕೋಟಿ ವಿನಿಯೋಗಿಸಬೇಕು. ಸರ್ಕಾರದ 11 ಇಲಾಖೆಗಳಿಗೆ ಹೆಚ್ಚುವರಿ ಹಣವನ್ನು ಹಂಚಿಕೆ ಮಾಡಿ, ಮೂಲ ಸೌಕರ್ಯ ಅಭಿವೃದ್ಧಿ, ಆರ್ಥಿಕ ಚಟುವಟಿಕೆಗಳು ಹಾಗೂ ಸುಸ್ಥಿರ ಬೆಳವಣಿಗೆಗೆ ವಿನಿಯೋಗಿಸಬೇಕು. ಹಿಂದುಳಿದಿರುವಿಕೆಯ ಸೂಚ್ಯಂಕವನ್ನು ಆಧರಿಸಿ ಆಯಾ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು. ಮುಖ್ಯಮಂತ್ರಿಗಳ ವಿವೇಚನಾ ಅನುದಾನವನ್ನು ಹೆಚ್ಚಿಸುವುದು, ಗುಣಮಟ್ಟದ ಶಿಕ್ಷಣ, ಕೌಶಲ ತರಬೇತಿ, ಆರೋಗ್ಯ ಸೇವೆಗಳ ಮೂಲಕ ಮಾನವ ಸಂಪನ್ಮೂಲವನ್ನು ಉತ್ತಮ ಪಡಿಸುವುದು, ಮುಂದಿನ ಐದು ವರ್ಷಗಳಲ್ಲಿ ₹30,000 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ವೃದ್ಧಿಸುವುದು, ಯೋಜನೆಗಳ ಜಾರಿಗೆ ಪೂರ್ವತಯಾರಿ ನಡೆಸುವುದು ಸೇರಿದಂತೆ ಹಲವು ಅಂಶಗಳನ್ನು ವರದಿ ಒಳಗೊಂಡಿದೆ.

‘ವೇಮುಲ’ ಮುಂದಿನ ಸಂಪುಟಕ್ಕೆ

ವಿಶ್ವವಿದ್ಯಾಲಯಗಳು ಹಾಗೂ ಕಾಲೇಜು ಕ್ಯಾಂಪಸ್‌ನಲ್ಲಿ ಜಾತಿ ಆಧಾರಿತ ಭೇದ ತಡೆಯಲು ರಾಜ್ಯ ಸರ್ಕಾರ ಸಿದ್ಧಪಡಿಸಿರುವ ‘ರೋಹಿತ್ ವೇಮುಲ ಮಸೂದೆ’ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅಪರಾಧ ತಡೆಗೆ ಸಿದ್ಧಪಡಿಸಿದ ‘ಇವ ನಮ್ಮವ-ಇವ ನಮ್ಮವ’ ಮಸೂದೆಗಳ ಕುರಿತು ಗೃಹ ಇಲಾಖೆ ಮೂಲಕ ಕೆಲ ಮಾಹಿತಿ ಪಡೆದು ಮುಂದಿನ ಸಂಪುಟದಲ್ಲಿ ಅಂತಿಮಗೊಳಿಸಲು ಸಭೆ ನಿರ್ಧರಿಸಿದೆ.

‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಅಧ್ಯಾಯಕ್ಕೆ ಎನ್‌ಸಿಇಆರ್‌ಟಿ ವಿರುದ್ಧ ‘ಸುಪ್ರೀಂ’ ಕಿಡಿ

ವಿವಾದಿತ ಪಠ್ಯಪುಸ್ತಕ ನಿಷೇಧ

ನವದೆಹಲಿ(ಪಿಟಿಐ): ಎನ್‌ಸಿಇಆರ್‌ಟಿಯಿಂದ ಪ್ರಕಟಿಸಿರುವ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಎಂಬ ಅಧ್ಯಾಯವನ್ನು ಒಳಗೊಂಡ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದ ಮರುಮುದ್ರಣ ಮಾಡುವುದು ಅಥವಾ ಡಿಜಿಟಲ್ ರೂಪದಲ್ಲಿ ಪ್ರಸಾರ ಮಾಡುವುದನ್ನು ನಿಷೇಧಿಸಿ ಸುಪ್ರೀಂ ಕೋರ್ಟ್ ಗುರುವಾರ ಆದೇಶಿಸಿದೆ.

ಪಠ್ಯಪುಸ್ತಕದ ಮುದ್ರಿತ ಹಾಗೂ ಡಿಜಿಟಲ್ ರೂಪದಲ್ಲಿರುವ ಎಲ್ಲ ಪ್ರತಿಗಳನ್ನು ತಕ್ಷಣವೇ ಜಪ್ತಿ ಮಾಡುವಂತೆ ಸೂಚಿಸಿದೆ. ಎನ್‌ಸಿಇಆರ್‌ಟಿ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿರುವ ಕೋರ್ಟ್, ‘ಈ ರೀತಿ ಬೇಜವಾಬ್ದಾರಿಯಿಂದ ನಡೆದುಕೊಂಡವರ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಏಕೆ ಜರುಗಿಸಬಾರದು’ ಎಂದು ಪ್ರಶ್ನಿಸಿದೆ.

ಪಠ್ಯಪುಸ್ತಕದಲ್ಲಿ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಎಂಬ ಅಧ್ಯಾಯ ಇರುವ ಕುರಿತು ಸುಪ್ರೀಂ ಕೋರ್ಟ್ ಬುಧವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ, ಪಠ್ಯಪುಸ್ತಕದಲ್ಲಿ ಈ ‘ಅಸಮರ್ಪಕ ವಿಷಯ’ಕ್ಕಾಗಿ ಎನ್‌ಸಿಇಆರ್‌ಟಿ ಕ್ಷಮೆ ಕೋರಿತ್ತು. ಸಂಬಂಧಪಟ್ಟ ಪ್ರಾಧಿಕಾರಗಳ ಜೊತೆ ಸಮಾಲೋಚನೆ ನಡೆಸಿ, ಪಠ್ಯಪುಸ್ತಕವನ್ನು ಮರುರಚನೆ ಮಾಡಲಾಗುವುದು ಎಂದೂ ಹೇಳಿತ್ತು.

ವಿಚಾರಣೆ ವೇಳೆ, ‘ನ್ಯಾಯಾಂಗಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಬಹಳ ಯೋಜಿಸಿಯೇ ಇಂತಹ ಸಂಚು ರೂಪಿಸಿರುವಂತೆ ಕಂಡುಬರುತ್ತಿದೆ. ಸಂಚು ರೂಪಿಸಿರುವವರು ಗುಂಡು ಹಾರಿಸಿದ್ದಾರೆ, ಈಗ ನ್ಯಾಯಾಂಗ ರಕ್ತ-ಸ್ರಾವದಿಂದ ಬಳಲುವಂತಾಗಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠ ಹೇಳಿದೆ.

▶11

‘ಸುಪ್ರೀಂ’ ಹೇಳಿದ್ದೇನು?




- ನ್ಯಾಯಾಂಗವನ್ನು ಅವಹೇಳನ ಮಾಡುವುದಕ್ಕಾಗಿ ಬಹಳ ಲೆಕ್ಕಾಚಾರದಿಂದಲೇ ಇಂತಹ ಸಂಚು ರೂಪಿಸಿರುವಂತೆ ಕಂಡುಬರುತ್ತಿದೆ. ಈ ಕುರಿತು ನ್ಯಾಯಾಲಯ ನೀಡಿರುವ ನಿರ್ದೇಶನಗಳನ್ನು ಪಾಲನೆ ಮಾಡದಿದ್ದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು
- ನ್ಯಾಯಾಂಗಕ್ಕೆ ಶಾಶ್ವತವಾದ ಕಳಂಕ ತರುವ ಇಂತಹ ಅನುಚಿತ ವರ್ತನೆಯನ್ನು ಕ್ರಿಮಿನಲ್ ನಿಂದನೆ ಎಂದೇ ಪರಿಗಣಿಸಲಾಗುವುದು. ಇಂತಹ ನಡೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಲ್ಲದೇ ಹೋದಲ್ಲಿ ಜನರು ನ್ಯಾಯಾಂಗದಲ್ಲಿ ಇಟ್ಟಿರುವ ನಂಬಿಕೆಗೆ ಧಕ್ಕೆಯಾಗುತ್ತದೆ
- ಎನ್‌ಸಿಇಆರ್‌ಟಿ, ಕೇಂದ್ರ ಹಾಗೂ ರಾಜ್ಯಗಳ ಶಿಕ್ಷಣ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಪಠ್ಯಪುಸ್ತಕದ ಎಲ್ಲ ಪ್ರತಿಗಳನ್ನು ಜಪ್ತಿ ಮಾಡಬೇಕು. ಸಾರ್ವಜನಿಕರಿಗೆ ಪಠ್ಯಪುಸ್ತಕಗಳು ಲಭ್ಯವಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು
- ಮುನ್ನೆಚ್ಚರಿಕೆ ಕ್ರಮವಾಗಿ, ಈ ಪಠ್ಯಪುಸ್ತಕದ ಮರುಮುದ್ರಣ ಅಥವಾ ಡಿಜಿಟಲ್ ವಿಧಾನದ ಮೂಲಕ ಮರುಹಂಚಿಕೆ ಮಾಡದಂತೆ ಸಂಪೂರ್ಣ ನಿಷೇಧ ಹೇರಲಾಗಿದೆ
- ಈ ಪಠ್ಯಪುಸ್ತಕದ ಮುದ್ರಿತ ಪ್ರತಿ ಅಥವಾ ಡಿಜಿಟಲ್ ಆವೃತ್ತಿಯ ವಿತರಣೆಗೆ ನಡೆಸುವ ಯತ್ನಗಳನ್ನು ನ್ಯಾಯಾಲಯದ ಆದೇಶದ ಉಲ್ಲಂಘನೆ ಎಂದೇ ಪರಿಗಣಿಸಿ, ಕ್ರಮ ಕೈಗೊಳ್ಳಲಾಗುವುದು
- ಎನ್‌ಸಿಇಆರ್‌ಟಿಯ 8ನೇ ತರಗತಿಯ ಈ ಪಠ್ಯಪುಸ್ತಕ ಕುರಿತು ಕೈಗೊಂಡಿರುವ ಕ್ರಮವು ನ್ಯಾಯಾಂಗ ಸೇರಿ ಯಾವುದೇ ಸಾರ್ವಜನಿಕ ಸಂಸ್ಥೆ ಕುರಿತ ನ್ಯಾಯಸಮ್ಮತ ಟೀಕೆ ಅಥವಾ ಪರಾಮರ್ಶೆಗೆ ಕಡಿವಾಣ ಹಾಕುವ ಉದ್ದೇಶ ಹೊಂದಿಲ್ಲ

‘ಪಠ್ಯಪುಸ್ತಕ ಮರುರಚನೆ’

8ನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ, ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಕುರಿತು ಅಧ್ಯಾಯವೊಂದನ್ನು ಪ್ರಕಟಿಸಿದ್ದಕ್ಕಾಗಿ ಎನ್‌ಸಿಇಆರ್‌ಟಿ ಬುಧವಾರ ಕ್ಷಮೆ ಕೋರಿದೆ.

‘ಪಠ್ಯಪುಸ್ತಕಗಳ ಪರಿಶೀಲನಾ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ. ಈ ವಿಚಾರದಲ್ಲಿ ರಚನಾತ್ಮಕ ಪ್ರತಿಕ್ರಿಯೆಗಳನ್ನು ಎನ್‌ಸಿಇಆರ್‌ಟಿ ಮುಕ್ತವಾಗಿ ಸ್ವಾಗತಿಸುತ್ತದೆ. ವ್ಯಾಪಕ ಸಮಾಲೋಚನೆಗಳ ಬಳಿಕ ಪಠ್ಯಪುಸ್ತಕವನ್ನು ಮರುರಚಿಸಿ, 2026-27ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದೆ.

▶11



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದ ಅರಣ್ಯ ಸಿದ್ದೇಶ್ವರ ಮತ್ತು ಮಲಕಾರಿ ಸಿದ್ದೇಶ್ವರ ಜಾತ್ರೆಯ ಕೊನೆಯ ದಿನ ಗುರುವಾರ, ಭಕ್ತರು ಭಂಡಾರದಲ್ಲಿ ಮಿಂದೆದ್ದರು ಚಿತ್ರ: ಚಂದ್ರಶೇಖರ ಎಸ್. ಚಿನಕೇಕರ

ನಾಳೆಯಿಂದ ದ್ವಿತೀಯ ಪಿಯು ಪರೀಕ್ಷೆ ಶುರು

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಫೆ.28ರಿಂದ ಆರಂಭ ಆಗಲಿದ್ದು, ಮೊದಲ ದಿನ ಕನ್ನಡ, ಅರೇಬಿಕ್ ಭಾಷಾ ಪರೀಕ್ಷೆಗಳು ನಡೆಯಲಿವೆ.

5,174 ಕಾಲೇಜುಗಳ 7.10 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ. ವಿಜ್ಞಾನ ವಿಷಯದಲ್ಲಿ 2.92 ಲಕ್ಷ, ವಾಣಿಜ್ಯದಲ್ಲಿ 2.11 ಲಕ್ಷ ಹಾಗೂ ಕಲಾ ವಿಭಾಗದಲ್ಲಿ 1.42 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ. 1,217 ಪರೀಕ್ಷಾ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿದ್ದು, ಪ್ರತಿ ಪರೀಕ್ಷಾ ಕೇಂದ್ರವೂ ಸಿ.ಸಿ.ಟಿ.ವಿ ಕ್ಯಾಮೆರಾ ಒಳಗೊಂಡಿದೆ. ವಿವಿಧ ಹಂತದ ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಚಟುವಟಿಕೆಗಳ ಮೇಲೆ ನಿಗಾವಹಿಸಲಿದ್ದು, ಪರೀಕ್ಷಾ ಕೇಂದ್ರದ ಹೊರಗೂ ಕಟ್ಟುನಿಟ್ಟಿನ ಕಣ್ಗಾವಲಿಗೆ ವ್ಯವಸ್ಥೆ ಮಾಡಲಾಗಿದೆ.

▶4B

ಚಿನಕುರುಳಿ ಪ್ರಕಾಶ್ ಶೆಟ್ಟಿ



ಭಾರತ-ಇಸ್ರೇಲ್: ಒಪ್ಪಂದಗಳಿಗೆ ಸಹಿ

ವ್ಯಾಪಾರ, ಕೃಷಿ, ಡಿಜಿಟಲ್ ಪಾವತಿ ಕುರಿತು ಒಡಂಬಡಿಕೆ

ಜೆರುಸಲೇಂ (ಪಿಟಿಐ): ಇಸ್ರೇಲ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಜತೆ ಮಹತ್ವದ ವಿಷಯಗಳ ಕುರಿತು ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಈ ವೇಳೆ ವ್ಯಾಪಾರ, ಕೃಷಿ, ಸೈಬರ್‌ಸ್ಪೇಸ್, ಡಿಜಿಟಲ್ ಪಾವತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಉಭಯ ದೇಶಗಳ ನಡುವೆ ಹಲವು ಒಪ್ಪಂದಗಳು ಏರ್ಪಟ್ಟವು. ಎರಡೂ ದೇಶಗಳು ವಿಶೇಷ ಕಾರ್ಯತಂತ್ರದ ಪಾಲುದಾರಿಕೆ ವೃದ್ಧಿಸುವ ಕುರಿತು ಬದ್ಧತೆ ತೋರಿದವು.

▶10



ನರೇಂದ್ರ ಮೋದಿ ಮತ್ತು ಬೆಂಜಮಿನ್ ನೆತನ್ಯಾಹು ಅವರು ಗುರುವಾರ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

‘ಮೋದಿಯವರು ನನಗೆ ಸ್ನೇಹಿತನಿಗಿಂತ ಹೆಚ್ಚು’

ನರೇಂದ್ರ ಮೋದಿ ಅವರನ್ನು ‘ಸ್ನೇಹಿತನಿಗಿಂತ ಹೆಚ್ಚು’ ಎಂದು ಬಣ್ಣಿಸಿದ ಬೆಂಜಮಿನ್ ನೆತನ್ಯಾಹು, 2023ರ ಅಕ್ಟೋಬರ್ 7ರಂದು ಹಮಾಸ್ ನಡೆಸಿದ ಭೀಕರ ದಾಳಿಯ ಬಳಿಕ ಇಸ್ರೇಲ್ ಪರವಾಗಿ ನಿಂತಿದ್ದಕ್ಕಾಗಿ ಮೋದಿ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದರು.

▶10

ದೈಹಿಕ ಸಾಮರ್ಥ್ಯಕ್ಕಾಗಿ ಹೊಸ ಮಾರ್ಗ • ರಾಜ್ಯದ ಆರು ಕಡೆ ಚಿಕಿತ್ಸೆ, ತರಬೇತಿ

ಬೊಜ್ಜು ಕರಗಿಸಲು ಪೊಲೀಸರಿಗೆ ಪಾಠ

• ಶಿವಪ್ರಸಾದ್ ರೈ

ಮೈಸೂರು: ಕೇಂದ್ರ ಸಶಸ್ತ್ರ ಪಡೆ ಹಾಗೂ ಪೊಲೀಸ್ ಸಿಬ್ಬಂದಿಯ ಬೊಜ್ಜಿನ ಸಮಸ್ಯೆ ನೀಗಿಸಲು ಕೇಂದ್ರ ಸರ್ಕಾರವು ಪ್ರಕೃತಿ ಚಿಕಿತ್ಸೆಯ ಮೊರೆ ಹೋಗಿದೆ.

ಕೇಂದ್ರದ ಆಯುಷ್ ಸಚಿವಾಲಯದಡಿ ಕಾರ್ಯ ನಿರ್ವಹಿಸುವ, ನವದೆಹಲಿಯ ಕೇಂದ್ರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸಂಶೋಧನಾ ಪರಿಷತ್ತು ಇದಕ್ಕಾಗಿ ವಿನೂತನ ಯೋಜನೆಯನ್ನು ರೂಪಿಸಿದೆ. ಪ್ರಕೃತಿ ಚಿಕಿತ್ಸೆ ಆಸ್ಪತ್ರೆಗಳಲ್ಲಿ ಸಿಬ್ಬಂದಿಗೆ ತರಬೇತಿ ನೀಡುವುದರ ಜೊತೆಗೆ ಬೊಜ್ಜು ನಿವಾರಣೆಯ ಕುರಿತ ಸಂಶೋಧನೆಯನ್ನೂ ನಡೆಸುತ್ತಿದೆ.

ಸಂಶೋಧನೆಗಾಗಿ ದೇಶದ 20 ಪ್ರಕೃತಿ ಚಿಕಿತ್ಸೆ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳನ್ನು ಆಯ್ಕೆ ಮಾಡಿದ್ದು, ₹1 ಲಕ್ಷ ಅನುದಾನ ನೀಡಲಾಗಿದೆ. ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜು, ಉಜಿರೆಯ ಎಸ್‌ಡಿಎಂ ಪ್ರಕೃತಿ ಚಿಕಿತ್ಸಾ ಕಾಲೇಜು, ಮೂಡಬಿದಿರೆಯ ಆಳ್ವಾಸ್ ಪ್ರಕೃತಿ ಚಿಕಿತ್ಸಾ ಕಾಲೇಜು, ದಾವಣಗೆರೆಯ ತಪೋವನ ಪ್ರಕೃತಿ ಚಿಕಿತ್ಸಾ ಕಾಲೇಜು ಮತ್ತು ಎಂಆರ್‌ಆರ್ ಪ್ರಕೃತಿ ಚಿಕಿತ್ಸಾ ಕಾಲೇಜು ಹಾಗೂ ಮಂಗಳೂರಿನ ಯೆನೆಪೋಯಾ ಕಾಲೇಜುಗಳು ಸಂಶೋಧನೆಗಾಗಿ ಆಯ್ಕೆಯಾಗಿರುವ ರಾಜ್ಯದ ಕಾಲೇಜುಗಳು.

ಇಳಿದ ತೂಕ: ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜಿನಲ್ಲಿ 30 ಪೊಲೀಸರಿಗೆ ಇದೇ ತಿಂಗಳು ಹಮ್ಮಿಕೊಂಡಿದ್ದ 18 ದಿನದ ಶಿಬಿರ ಮುಕ್ತಾಯವಾಗಿದ್ದು, ಕೆಲವರ ದೇಹ ತೂಕ 5ರಿಂದ 6 ಕೆ.ಜಿಯಷ್ಟು ಇಳಿದಿದೆ.

▶10


ಮುಖ್ಯಾಂಶಗಳು

- ಪೊಲೀಸರಿಗೆ ನಿತ್ಯ ಯೋಗಾಭ್ಯಾಸ
- ರಾಜ್ಯದ ಆರು ಕಾಲೇಜು ಆಯ್ಕೆ
- ಪ್ರಕೃತಿ ಚಿಕಿತ್ಸೆ ಆಸ್ಪತ್ರೆಗಳಲ್ಲಿ ತರಬೇತಿ

‘ಅಡ್ಡ ಪರಿಣಾಮ ಇರದು’

‘ಔಷಧಿಗಳನ್ನು ನೀಡದೆ ಆಹಾರ ಪದ್ಧತಿಯಲ್ಲಿ ಬದಲಾವಣೆ ತಂದಿದ್ದೇವೆ. ಪ್ರಕೃತಿ ಚಿಕಿತ್ಸೆಯಲ್ಲಿ ಅಡ್ಡ ಪರಿಣಾಮ ಇರುವುದಿಲ್ಲ. ಶಿಬಿರದಲ್ಲಿ ಭಾಗವಹಿಸಿದವರು 5-6 ಕೆ.ಜಿ ತೂಕ ಇಳಿಸಿಕೊಂಡಿದ್ದಾರೆ’ ಎಂದು ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜಿನ ಡಾ.ಎಸ್. ಸಂದೀಪ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪೊಲೀಸರಿಗಿರುವ ಕೆಲಸದ ಒತ್ತಡ, ಆಹಾರ ಪದ್ಧತಿಯಲ್ಲಿ ಅಶಿಸ್ತು, ಆಯಾಸ ಸ್ಥೂಲಕಾಯ ಸಮಸ್ಯೆ ಹೆಚ್ಚಲು ಕಾರಣ. ಅದರಿಂದ ಮಧುಮೇಹ, ಅಧಿಕ ರಕ್ತದೊತ್ತಡ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಆಸಕ್ತಿಯುಳ್ಳ ಪೊಲೀಸರು ಸಂಪರ್ಕಿಸಿದರೆ ಚಿಕಿತ್ಸೆ ನೀಡಲಾಗುವುದು’ ಎಂದರು.



ಹವಾಮಾನ ಮುನ್ಸೂಚನೆ: ನಗರದಲ್ಲಿ ಇಂದು ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

‘ಆಟೊ ಚಾಲಕರ ಅಭಿವೃದ್ಧಿಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಆಟೊ ಚಾಲಕರ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಬಜೆಟ್ ನಂತರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಿ.ಪ್ಯಾಕ್ ಹಾಗೂ ಸಿಜಿಐ ಸಹಯೋಗದಲ್ಲಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಆಟೊ ಚಾಲನಾ ಹಾಗೂ ಕೌಶಲ ಉಚಿತ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಹಿಳೆಯರು ಮತ್ತು ಲಿಂಗತ್ವ ಅಲ್ಪ ಸಂಖ್ಯಾತರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಉಚಿತ ಚಾಲನಾ ತರಬೇತಿ ನೀಡುತ್ತಿರುವುದು ಶ್ಲಾಘನೀಯ. ಸರ್ಕಾರದಿಂದಲೂ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು. ಬೆಂಗಳೂರಿನಲ್ಲಿ ಯಾವುದೇ ಜಾಗಕ್ಕೆ ತೆರಳಬೇಕಿದ್ದರೂ ಆಟೊ ಅನಿವಾರ್ಯವಾಗಿದ್ದು, ನಾಗರಿಕರ ಬೆನ್ನೆಲುಬಾಗಿ ನಿಂತಿದೆ. ಹೀಗಾಗಿ ಆಟೊ ಚಾಲಕರ ಸಮುದಾಯಕ್ಕೆ ಇನ್ನಷ್ಟು ಯೋಜನೆ ಹಾಗೂ ಸೌಲಭ್ಯ ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದೊಂದಿಗೆ ಚರ್ಚಿಸಿ, ರಾಜ್ಯ ಬಜೆಟ್ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಸಿಜಿಐ ಪ್ರತಿನಿಧಿ ಸುಧಾಕರ್ ಪೈ, ಶ್ರೀನಿವಾಸ ರಾಘವನ್, ಬಿ.ಪ್ಯಾಕ್ ಕಾರ್ಯಕ್ರಮ ಮುಖ್ಯಸ್ಥ ರಾಘವೇಂದ್ರ ಪೂಜಾರಿ ಎಚ್.ಎಸ್., ನಮ್ಮ ಸಾರಥಿ ಅಧ್ಯಕ್ಷ ಸಂಪತ್ ಮತ್ತು ದೇವಿಕಾ, ಪೀಸ್ ಆಟೊದ ಅಧ್ಯಕ್ಷ ರಘು ನಾರಾಯಣ ಗೌಡ ಉಪಸ್ಥಿತರಿದ್ದರು.



ಆಟೊ ಚಾಲನಾ ಹಾಗೂ ಕೌಶಲ ಉಚಿತ ತರಬೇತಿಗೆ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು

ನಿಮ್ಹಾನ್ಸ್: ವಸ್ತು ಪ್ರದರ್ಶನ 3–4ಕ್ಕೆ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ರಾಷ್ಟ್ರೀಯ ವಿಜ್ಞಾನದ ದಿನದ ಅಂಗವಾಗಿ ಮಾರ್ಚ್ 3 ಮತ್ತು 4 ರಂದು ನಿಮ್ಹಾನ್ಸ್ ಕನ್ವೆನ್ಶನ್ ಸೆಂಟರ್‌ನಲ್ಲಿ ಎರಡು ದಿನಗಳ ವಸ್ತು ಪ್ರದರ್ಶನ ಹಮ್ಮಿಕೊಂಡಿದೆ.

ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಈ ಪ್ರದರ್ಶನ ನಡೆಯಲಿದೆ. ಸಂವಾದ, ಮಾದರಿಗಳ ಪ್ರಾತ್ಯಕ್ಷಿಕೆ, ರಸಪ್ರಶ್ನೆ ಸ್ಪರ್ಧೆ, ಮನಸ್ಸಿನ ಆಟ ಸೇರಿ ವಿವಿಧ ಚಟುವಟಿಕೆ ಗಳನ್ನು ಈ ಪ್ರದರ್ಶನ ಒಳಗೊಳ್ಳಲಿದೆ. ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ವೈದ್ಯರು, ವಿಜ್ಞಾನಿಗಳು, ಸಂಶೋಧಕರು, ವೈದ್ಯಕೀಯ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಮಾನವನ ನೈಜ ಮಿದುಳು ಸ್ಪರ್ಶಿಸಬಹುದಾಗಿದೆ. ಪ್ರವೇಶ ಉಚಿತ ಇರಲಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.



65 ವಾರ್ಡ್‌ಗಳಲ್ಲಿ ಅಂತರ್ಜಲ ಕುಸಿತ

ಕೆರೆಗಳನ್ನು ತುಂಬಿಸಲು ಮುಂದಾದ ಜಲಮಂಡಳಿ

• ಉಮೇಶ ಭಟ್ಟ ಪಿ.ಎಚ್

ಬೆಂಗಳೂರು: ಬೇಸಿಗೆ ಆರಂಭದಲ್ಲಿಯೇ ನಗರದ 65 ವಾರ್ಡ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದನ್ನು ವಿಜ್ಞಾನಿಗಳು ಹಾಗೂ ತಜ್ಞರ ತಂಡ ಪತ್ತೆ ಮಾಡಿದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ವಿಜ್ಞಾನಿಗಳು ದತ್ತಾಂಶಗಳನ್ನು ಸಂಗ್ರಹಿಸಿದಾಗ ವಿಜಯನಗರ, ಶಿವಾಜಿನಗರ, ಚಾಮರಾಜಪೇಟೆ, ಕೆಂಗೇರಿ, ಕೋರಮಂಗಲ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅಂತರ್ಜಲ ಕುಸಿತ ಕಂಡಿರುವುದು ಪತ್ತೆಯಾಗಿದೆ.

ಕೇಂದ್ರ ಅಂತರ್ಜಲ ಸಂಸ್ಥೆ ಅಧಿಕಾರಿಗಳು, ಕರ್ನಾಟಕ ಅಂತರ್ಜಲ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರ ತಂಡವು ಮಾಹಿತಿ ಕಲೆ ಹಾಕಿದೆ. ಈ ಮಾಹಿತಿ ಆಧರಿಸಿ ಸಮಸ್ಯೆ ಇರುವ ಕಡೆಗಳಲ್ಲಿ ನೀರಿನ ಸಂಪರ್ಕ ಹೆಚ್ಚಿಸುವುದು ಸೇರಿದಂತೆ ತುರ್ತು ಕಾರ್ಯಕ್ರಮಗಳನ್ನು ರೂಪಿಸಲು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ತೀರ್ಮಾನಿಸಿದೆ.

ನೀರಿನ ಸಂಪರ್ಕಕ್ಕೆ ಅನುಮತಿ: ನಗರದಲ್ಲಿ 15 ಲಕ್ಷ ನೀರಿನ ಸಂಪರ್ಕಗಳನ್ನು ಕಲ್ಪಿಸಲಾಗಿದೆ. ಕಾವೇರಿ 5ನೇ ಹಂತದ ಯೋಜನೆ ಜಾರಿಯಾದ ನಂತರ ಅಕ್ರಮ ನೀರು ಬಳಕೆದಾರರನ್ನು ಪತ್ತೆ ಹಚ್ಚಿ ಸಂಪರ್ಕ ನೀಡಲು ಜಲಮಂಡಳಿ ಅಭಿಯಾನ ನಡೆಸಿದ್ದು, ಬೇಸಿಗೆಯಲ್ಲಿ ಇದನ್ನು ಇನ್ನಷ್ಟು ತೀವ್ರಗೊಳಿಸಲಿದೆ.

ಅಂತರ್ಜಲ ಸಮಸ್ಯೆ ಕಂಡು ಬಂದಿರುವ 65 ವಾರ್ಡ್‌ಗಳಲ್ಲಿ ಆದ್ಯತೆ ಮೇರೆಗೆ ನೀರಿನ ಸಂಪರ್ಕ ನೀಡಲಾಗುತ್ತದೆ. ಅಪಾರ್ಟ್‌ಮೆಂಟ್‌ಗಳಿಗೆ ತ್ವರಿತವಾಗಿ ನೀರಿನ ಸಂಪರ್ಕ ನೀಡುವಂತೆಯೂ ಸೂಚಿಸಲಾಗಿದೆ. ಈ ವಾರ್ಡ್‌ಗಳಲ್ಲಿ ನೀರಿನ ಸಂಪರ್ಕಕ್ಕೆ ಬೇಕಾದ ಕೊಳವೆ ಮಾರ್ಗ ಸರಿಯಾಗಿರುವುದನ್ನು ಖಚಿತಪಡಿಸಿಕೊಳ್ಳುವಂತೆಯೂ ಅಧಿಕಾರಿಗಳಿಗೆ ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಆದೇಶಿಸಿದ್ದಾರೆ.

‘ನಗರದ ಎಲ್ಲಾ ಪ್ರದೇಶಗಳಿಗೂ ಸಮರ್ಪಕ ರೀತಿಯಲ್ಲಿ ನೀರು ವಿತರಣೆಯಾಗಬೇಕು. ನೀರಿನ ಉಳಿತಾಯಕ್ಕಾಗಿ ಏರಿಯೇಟರ್‌ಗಳ ಅಳವಡಿಕೆಗೆ ಹೆಚ್ಚಿನ ಗಮನಹರಿಸಬೇಕು. ಕುಡಿಯುವ ನೀರನ್ನು ವಾಹನ ಶುದ್ಧೀಕರಣ, ತೋಟಗಾರಿಕೆ ಹಾಗೂ ಮನೆ ಅಂಗಳ ತೊಳೆಯಲು ಬಳಸಿದರೆ ದಂಡ ವಿಧಿಸಬೇಕು. ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಕಡ್ಡಾಯವಾಗಿ ಸಂಸ್ಕರಿಸಿದ ನೀರನ್ನೇ ಬಳಸುವಂತೆ ನಿಗಾವಹಿಸಬೇಕು’ ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ.

‘ಹಿಂದಿನ ವರ್ಷಗಳಲ್ಲಿ ಸಮಸ್ಯೆ ಎದುರಾದಾಗ 12 ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಿಸಲಾಗಿತ್ತು. ಈ ಬಾರಿ ಇನ್ನೂ ಎರಡು ಕೆರೆಗಳನ್ನು ಸೇರಿಸಿಕೊಂಡು ನೀರು ತುಂಬುವ ಕ್ರಿಯಾಯೋಜನೆ ರೂಪಿಸಲಾಗಿದೆ’ ಎಂದು ಜಲಮಂಡಳಿ ಅಧಿಕಾರಿ ತಿಳಿಸಿದರು.

ಜಲಮಂಡಳಿ ಕ್ರಮ ಏನು?

14	ಕೆರೆಗೆ ನೀರು ತುಂಬಿಸುವುದು
1,250	ಸಿಂಟೆಕ್ಸ್ ಟ್ಯಾಂಕ್ ಸ್ಥಾಪನೆ
117	ಟ್ಯಾಂಕರ್‌ಗಳಿಂದ ಮಂಡಳಿಯಿಂದ ನೀರು ಪೂರೈಕೆ
104	ಖಾಸಗಿ ಟ್ಯಾಂಕರ್‌ಗಳಿಂದ ನೀರು ಪೂರೈಕೆ
21	ಕಾವೇರಿ ಸಂಪರ್ಕ ಕೇಂದ್ರದಿಂದ ನಾಗರಿಕರಿಗೆ ಮಾಹಿತಿ
196	ಶುದ್ಧ ನೀರು ಘಟಕದಿಂದ ನೀರು ಪೂರೈಕೆ
47	ಕಾಮಗಾರಿಗಳಿಂದ ಬೇಸಿಗೆ ಸಮಸ್ಯೆ ನಿವಾರಣೆ
₹10.14	ಕೋಟಿ ಒಟ್ಟು ವೆಚ್ಚ



ಬೇಸಿಗೆ ವೇಳೆ ನೀರು ಸರಬರಾಜು ಸಂಬಂಧ ನಿರ್ವಹಣಾ ವಿಭಾಗದ ಸಭೆಯಲ್ಲಿ ಹಿರಿಯ ಅಧಿಕಾರಿಗಳು ನೀಡುವ ಕ್ರಿಯಾಯೋಜನೆಗಳ ಕುರಿತು ಚರ್ಚಿಸಲಾಗುತ್ತದೆ
ಡಾ.ರಾಮಪ್ರಸಾತ್ ಮನೋಹರ್, ಅಧ್ಯಕ್ಷ ಬೆಂಗಳೂರು ಜಲಮಂಡಳಿ

ಕುಸಿತ ಯಾವ ವಾರ್ಡ್‌ನಲ್ಲಿ?

ಜಕ್ಕೂರು, ದೊಡ್ಡಬೊಮ್ಮಸಂದ್ರ, ಶೆಟ್ಟಿಹಳ್ಳಿ, ಮಲ್ಲಸಂದ್ರ, ಟಿ.ದಾಸರಹಳ್ಳಿ, ಜಾಲಹಳ್ಳಿ, ಸಂಜಯನಗರ, ಹೆಬ್ಬಾಳ, ನಾಗವಾರ, ಹೊರಮಾವು, ರಾಮಮೂರ್ತಿನಗರ, ಕಮ್ಮನಹಳ್ಳಿ, ಕಾಡುಗೊಂಡನಹಳ್ಳಿ, ಕಾವಲ್ ಬೈರಸಂದ್ರ, ಮನೋರಾಯನಪಾಳ್ಯ, ದೊಡ್ಡಬಿದರಕಲ್ಲು, ಪೀಣ್ಯ ಕೈಗಾರಿಕಾ ಪ್ರದೇಶ, ನಂದಿನಿ ಲೇಔಟ್, ಜೆ.ಸಿ.ನಗರ, ಲಿಂಗರಾಜಪುರ, ಕೆ.ಆರ್. ಪುರ, ಎ.ನಾರಾಯಣಪುರ, ಕಾಡು ಮಲ್ಲೇಶ್ವರ, ಮಹಾಲಕ್ಷ್ಮಿಪುರ, ಶಕ್ತಿ ಗಣಪತಿ ನಗರ, ಶಂಕರಮಠ, ಗಾಯತ್ರಿನಗರ, ಹೊಯ್ಸಳನಗರ, ಶಿವಾಜಿನಗರ, ಗಾಂಧಿನಗರ, ದಯಾನಂದನಗರ, ಬಸವೇಶ್ವರನಗರ, ವೃಷಭಾವತಿ ನಗರ, ಅಗ್ರಹಾರ ದಾಸರಹಳ್ಳಿ, ಅಗರ, ಬಿನ್ನಿಪೇಟೆ, ಕೆಂಪಾಪುರ ಅಗ್ರಹಾರ, ವಿಜಯನಗರ, ಹೊಸಹಳ್ಳಿ, ಮಾರುತಿ ಮಂದಿರ, ಮೂಡಲಪಾಳ್ಯ, ನಾಗರಬಾವಿ, ನಾಯಂಡಹಳ್ಳಿ, ಭಲವಾದಿ ಪಾಳ್ಯ, ಚಾಮರಾಜಪೇಟೆ, ಸಿದ್ದಾಪುರ, ಕೋರಮಂಗಲ, ಶ್ರೀನಗರ, ಗಾಳಿ ಆಂಜನೇಯಸ್ವಾಮಿ ದೇವಸ್ಥಾನ, ದೀಪಾಂಜಲಿ ನಗರ, ಕೆಂಗೇರಿ, ಹೊಸಕೆರೆಹಳ್ಳಿ, ಗಿರಿನಗರ, ಕತ್ರಿಗುಪ್ಪೆ, ಕರಿಸಂದ್ರ, ಪಟ್ಟಾಭಿರಾಮನಗರ, ಗುರಪ್ಪನಪಾಳ್ಯ, ಮಡಿವಾಳ, ಬೊಮ್ಮನಹಳ್ಳಿ, ಬಿಟಿಎಂ ಲೇಔಟ್, ಸಾರಕ್ಕಿ, ಕುಮಾರಸ್ವಾಮಿ ಲೇಔಟ್, ಯಲಚೇನಹಳ್ಳಿ, ಗೊಟ್ಟಿಗೆರೆ, ಕೋಣನಕುಂಟೆ.

‘ಮೋದಿ ವಿಶ್ವ ಗುರು ಅಲ್ಲ, ವಿಷ ಗುರು’

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ವಿಶ್ವ ಗುರು ಅಲ್ಲ, ವಿಷ ಗುರು’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಗುರುವಾರ ಇಲ್ಲಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭಾರತ ಆರ್ಯರ ನಾಡು ಎಂದು ವಿಷ ಗುರು ಇಸ್ರೇಲ್‌ನಲ್ಲಿ ಹೇಳಿಕೆ ನೀಡಿದ್ದಾರೆ. ಉರ್ದು ಭಾಷೆ ಜನ್ಮ ತಾಳಿದ್ದು ಉತ್ತರ ಪ್ರದೇಶದ ಮೀರತ್‌ನಲ್ಲಿ ಎಂಬುದು ವಿಷ ಗುರುವಿಗೆ ಗೊತ್ತಿಲ್ಲ. ಉರ್ದು ನಮ್ಮ ಭಾಷೆ. ಅದಕ್ಕೂ ಬಣ್ಣ ಲೇಪ ಮಾಡಿದ್ದಾರೆ. ತರಕಾರಿಗೂ ಧರ್ಮ ಲೇಪ ಮಾಡಿದ್ದಾರೆ. ಉದ್ಯೋಗ ಇಲ್ಲದಿದ್ದಾಗ ಬಡಗಿ ಮಾಡುವ ಕೆಲಸದಂತಿದೆ ಪ್ರಧಾನಿ ಧೋರಣೆ’ ಎಂದು ವ್ಯಂಗ್ಯವಾಡಿದರು.

‘ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ನರೇಂದ್ರ ಮೋದಿ 2014ರಲ್ಲಿ ಭರವಸೆ ನೀಡಿದ್ದರು. 11 ವರ್ಷಗಳಲ್ಲಿ 22 ಕೋಟಿ ಉದ್ಯೋಗ ಕೊಡಬೇಕಿತ್ತು. ಆ ಬಗ್ಗೆ ಇಲ್ಲಿಯವರೆಗೂ ಚಕಾರ ಎತ್ತಿಲ್ಲ. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ನಡೆಸಿರುವ ಪ್ರತಿಭಟನೆಯನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ನಮ್ಮ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಮೊದಲು ಅವರು ವಿಷ ಗುರುವಿನ ಹತ್ತಿರ ಉದ್ಯೋಗ ಸೃಷ್ಟಿಸಲು ಹೇಳಲಿ’ ಎಂದರು.

‘ಕೇಂದ್ರ ಸರ್ಕಾರದಲ್ಲಿ 40 ಲಕ್ಷ ಹುದ್ದೆಗಳು ಖಾಲಿ ಇವೆ. ಗೃಹ, ರೈಲ್ವೆ ಹಾಗೂ ರಕ್ಷಣಾ ಇಲಾಖೆಗಳಲ್ಲಿ 9.79 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ದೇಶಭಕ್ತಿ ಹಾಗೂ ದೇಶಸೇವೆ ಎಂದು ಭಾಷಣ ಮಾಡುವ ಜನರು ಈ ಬಗ್ಗೆ ಕ್ರಮ ವಹಿಸುತ್ತಿಲ್ಲ’ ಎಂದು ಅವರು ಟೀಕಿಸಿದರು.

7 ವರ್ಷದ ಮಗುವಿನ ಅಂಗಾಂಗ ದಾನ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿದ್ದ ಕೆ.ಆರ್.ಪುರದ ಏಳು ವರ್ಷದ ಗಂಡು ಮಗುವಿನ ಅಂಗಾಂಗವನ್ನು ಪಾಲಕರು ದಾನ ಮಾಡಿದ್ದಾರೆ.

ಗಾಯಗೊಂಡಿದ್ದ ಮಗುವನ್ನು ಮಹದೇವಪುರದ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಏಳು ದಿನಗಳು ಮಕ್ಕಳ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಒದಗಿಸಲಾಗುತ್ತು. ಮಿದುಳಿಗೆ ಗಂಭೀರ ಗಾಯವಾಗಿದ್ದರಿಂದ, ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಂಡಿರಲಿಲ್ಲ. ಅಂತಿಮವಾಗಿ ಆಸ್ಪತ್ರೆಯ ಡಾ. ಗುರುದತ್ ಹಾಗೂ ಡಾ. ರಘುರಾಮ್ ಗೋಪಾಲಕೃಷ್ಣನ್ ಅವರನ್ನು ಒಳಗೊಂಡ ತಂಡ ಮಗುವಿನ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿತು. ‘ಕಣ್ಣುಗಳು, ಎರಡು ಮೂತ್ರಪಿಂಡಗಳು, ಯಕೃತ್ತು ಮತ್ತು ಹೃದಯದ ಕವಾಟಗಳನ್ನು ದಾನವಾಗಿ ಪಡೆದು, ನಾಲ್ವರಿಗೆ ಆರೋಗ್ಯ ಇಲಾಖೆಯ ಜೀವಸಾರ್ಥಕತೆ ಸಂಸ್ಥೆಯ ಮೂಲಕ ಒದಗಿಸಲಾಗಿದೆ’ ಎಂದು ಡಾ. ಗುರುದತ್ ಎ.ವಿ. ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ವ್ಯಾಪಾರದಲ್ಲಿ ಸುಸ್ಥಿರ ನಾವೀನ್ಯ’ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಶ್ರದ್ಧಾ ಕನ್ವರ್, ರವೀಂದ್ರ ಭಂಡಾರಿ, ಅಮಿತ್ ಆನಂದ್, ಆಯೋಜನೆ ಮತ್ತು ಸ್ಥಳ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಸಿಎಂಎಸ್ ಆವರಣ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 9

‘ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಬದುಕು ಬರಹ’ ಉಪನ್ಯಾಸ: ಟಿ. ಯಲ್ಲಪ್ಪ, ಅಧ್ಯಕ್ಷತೆ: ಅಪ್ಪಾರೆಡ್ಡಿ ಹರೀಶ್, ಅತಿಥಿಗಳು: ಎಚ್.ಜಿ. ಬಾಲಗೋಪಾಲ್, ಲಕ್ಷ್ಮೀ ಮನೋಹರ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಪದವಿ ಕಾಲೇಜು, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ ಎರಡನೇ ಹಂತ, ಬೆಳಿಗ್ಗೆ 10.30

ದೇವರಾಜ್ ಎನ್., ಅವರ ‘ಗಾಂಧಿ ಮತ್ತು ಪ್ರೇಮಚಂದ್’ ಪುಸ್ತಕ ಬಿಡುಗಡೆ: ಅತಿಥಿಗಳು: ಚನ್ನಪ್ಪ ಕಟ್ಟಿ, ಟಿ.ಜಿ. ಪ್ರಭಾಶಂಕರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಮಹಾವಿದ್ಯಾಲಯ, ಶೇಷಾದ್ರಿಪುರ, ಬೆಳಿಗ್ಗೆ 11

2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ತಜ್ಞ ಪ್ರಶಸ್ತಿ, 2024ನೇ ಸಾಲಿನ ಪುಸ್ತಕ ಬಹುಮಾನ ಪ್ರದಾನ ಸಮಾರಂಭ: ಶಿವರಾಜ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ಗೊಲ್ಲಹಳ್ಳಿ ಶಿವಪ್ರಸಾದ್, ಆರ್. ಸುನಂದಮ್ಮ, ಎಂ. ಶಿವರಾಜು, ಕದಲಗೆರೆ ಶಿವಣ್ಣಗೌಡ, ಆಯೋಜನೆ: ಕರ್ನಾಟಕ ಜಾನಪದ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

‘ವಿದ್ಯಾರ್ಥಿ ಜೀವನವನ್ನು ಅರ್ಥಮಾಡಿಕೊಳ್ಳಿ’ ಸಂವಾದ: ಅತಿಥಿ: ಅಕರಿಯಾ ಸುಜಿನ್ ಬಿ., ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಮಧ್ಯಾಹ್ನ 2

ಅಣಕು ನ್ಯಾಯಾಲಯ ಸ್ಪರ್ಧೆ: ಅತಿಥಿಗಳು: ಬಿ.ಎ. ಪಾಟೀಲ, ಪ್ರೀತಮ್ ಸುರಾನ, ಅಧ್ಯಕ್ಷತೆ: ಜೆ.ಎಂ. ಮಲ್ಲಿಕಾರ್ಜುನಯ್ಯ, ಆಯೋಜನೆ ಮತ್ತು ಸ್ಥಳ: ಕೆಎಲ್‌ಇ ಕಾನೂನು ಕಾಲೇಜು, ವಿಶ್ವೇಶ್ವರಯ್ಯ ಲೇಔಟ್, ಸಂಜೆ 4

‘ಅನುವಾದಕರಾಗಿ ಕೋಚೆ’ ಉಪನ್ಯಾಸ: ಟಿ.ಎಸ್. ದಕ್ಷಣಾಮೂರ್ತಿ, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

‘ಒಮ್ಮೆ ಹೆಣ್ಣಾಗು’ ನಾಟಕ ಪ್ರದರ್ಶನ: ರಚನೆ: ಬಾನು ಮುಷ್ತಾಕ್, ನಿರ್ದೇಶನ: ಸವಿತಾ ರಾಣಿ, ಆಯೋಜನೆ: ರಂಗಾಯಣ ಮೈಸೂರು, ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30



‘ಸೇವಂತಿ ಪ್ರಸಂಗ’ ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕಶ್ಯಪ್ ಕೆ.ಎಸ್., ಆಯೋಜನೆ: ರಂಗರಸಧಾರೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

‘ಶಾಂತಿ ಮತ್ತು ಪ್ರೀತಿಗಾಗಿ ನೃತ್ಯ’ ಪ್ರದರ್ಶನ: ಆಯೋಜನೆ: ಸಹಚಾರಿ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ ಮೊದಲನೇ ಹಂತ, ಸಂಜೆ 7

‘ಕಾಮಣ್ಣನ’ ಹಬ್ಬದ ಆಚರಣೆ: ರತಿ–ಮನ್ಮಥರ ಕಲ್ಯಾಣೋತ್ಸವ: ಆಯೋಜನೆ ಮತ್ತು ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಅಂಬೇಡ್ಕರ್ ನಿಗಮದ ವಿರುದ್ಧ ಸುಳ್ಳು ಆರೋಪ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಅವ್ಯವಹಾರಗಳು ನಡೆದಿಲ್ಲ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಸತ್ಯಭಾಮ ಸಿ. ಸ್ಪಷ್ಟನೆ ನೀಡಿದ್ದಾರೆ.

‘ನಿಗಮದಲ್ಲಿ ಹಗರಣಗಳನ್ನು ಮಾಡಿ ಅಂಬೇಡ್ಕರ್ ಹೆಸರಿಗೆ ವ್ಯವಸ್ಥಾಪಕ ನಿರ್ದೇಶಕರು ಮಸಿ ಬಳಿಯುತ್ತಿದ್ದಾರೆ’ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಆರೋಪಿಸಿದ್ದರು. ಇದಕ್ಕೆ ಸತ್ಯಭಾಮ ಅವರು ಸುದೀರ್ಘವಾದ ಸ್ಪಷ್ಟನೆ ನೀಡಿದ್ದಾರೆ. ಎಲ್ಲ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ವಿವರಣೆಯನ್ನು ಮೂರು ದಿನಗಳ ಒಳಗೆ ನೀಡುವಂತೆ ವೆಂಕಟಸ್ವಾಮಿ ಅವರಿಗೆ ಜ್ಞಾಪನ ಪತ್ರ ಕಳುಹಿಸಿದ್ದಾರೆ.

ಪ್ರಧಾನ ವ್ಯವಸ್ಥಾಪಕರಾದ ಸರಸ್ವತಿ ಅವರ ಮೇಲೆ ಮಾಡಿರುವ ಆರೋಪಗಳೂ ಸುಳ್ಳು. ಅಲ್ಲದೇ ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಶ್ರೀಧರ ಮೂರ್ತಿ ಅವರನ್ನು ಪೂರ್ವಾನುಮತಿ ಪಡೆಯದೇ ತರಾತುರಿಯಲ್ಲಿ ಬಿಡುಗಡೆ ಮಾಡಲಾಗಿದೆ ಎಂಬ ಆರೋಪ ಕೂಡ ಆಧಾರ ರಹಿತವಾಗಿದೆ. ಕರ್ತವ್ಯ ನಿರ್ಲಕ್ಷ್ಯ, ಬೇಜವಾಬ್ದಾರಿ ಮತ್ತು ವಿಳಂಬನೀತಿ ತೋರಿದ್ದರಿಂದ ಅವರನ್ನು ನಿಯಮಾನುಸಾರವಾಗಿ ನಿಯೋಜನೆಯಿಂದ ಮುಕ್ತಗೊಳಿಸಿ ಅವರನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲಾಗಿದೆ ಎಂದಿದ್ದಾರೆ.

ಹಣ ವರ್ಗಾವಣೆ ಮಾಡಲು ನಿರಾಕರಿಸಿದ್ದಕ್ಕಾಗಿ ಬೇರೆ ಕಾರಣ ನೀಡಿ ಲೆಕ್ಕ ಸಹಾಯಕ ಫಣಿರಾಜು ಅವರನ್ನು ಅಮಾನತು ಮಾಡಲಾಗಿದೆ ಎಂಬ ಆರೋಪವೂ ನಿರಾಧಾರ. ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿರುವುದರಿಂದ ಲೋಕಾಯುಕ್ತದ ಬಳ್ಳಾರಿ ಜಿಲ್ಲಾಧಿಕಾರಿಗಳ ಸೂಚನೆಯಂತೆ ಅಮಾನತು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅದೇ ಕಚೇರಿಯ ಪ್ರಧಾನ ವ್ಯವಸ್ಥಾಪಕ ಜಗದೀಶ್ ಎಸ್. ಹೆಬ್ಬಳ್ಳಿ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವುದು ಅಚ್ಚರಿಯ ಸಂಗತಿಯಲ್ಲ. ವ್ಯವಸ್ಥಾಪಕ ನಿರ್ದೇಶಕರ ಪೂರ್ವಾನುಮೋದನೆ ಪಡೆಯದೇ ಹಣಕಾಸು ವಿಭಾಗದ ಕಾರ್ಯನಿರ್ವಹಿಸಲು ಅಮಾನತಿನಲ್ಲಿರುವ ಫಣಿರಾಜ್ ಎಚ್. ಮತ್ತು ರೇವಣ್ಣ ಸಿದ್ದಪ್ಪ ಅವರಿಗೆ ಅನುಮತಿ ನೀಡಿದ್ದರು. ಅಮಾನತಿನಲ್ಲಿದ್ದ ಸಿಬ್ಬಂದಿ ಅನಧಿಕೃತವಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಅಲ್ಲದೇ ಕಚೇರಿಯ ಇತರ ಅಧಿಕಾರಿಗಳೂ ಇದಕ್ಕೆ ಸಾಕ್ಷಿಯಾಗಿರುವುದರಿಂದ ಅವರ ಸೇವೆಯನ್ನು ಮಾತೃ ಇಲಾಖೆಗೆ ವಾಪಸ್ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಇದೇ ರೀತಿ ಹಲವು ಆರೋಪಗಳಿಗೆ ವ್ಯವಸ್ಥಾಪಕ ನಿರ್ದೇಶಕರು ಉತ್ತರ ನೀಡಿದ್ದಾರೆ.

ಬಸ್ ನೌಕರರ ಧರಣಿ ಸತ್ಯಾಗ್ರಹ ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಾರ್ಚ್ 2ರಿಂದ ನಡೆಸಲು ಉದ್ದೇಶಿಸಲಾಗಿದ್ದ ಧರಣಿ ಸತ್ಯಾಗ್ರಹವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಮುಖಂಡರು, ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರ ಜೊತೆಗೆ ಮಾತುಕತೆ ನಡೆಸಿದ ಬಳಿಕ ಹಿಂತೆಗೆದುಕೊಂಡಿದ್ದಾರೆ.

‘38 ತಿಂಗಳ ಹಿಂಬಾಕಿ ನೀಡಬೇಕು. 2024ರ ಜನವರಿ 1ರಿಂದ ವೇತನ ಪರಿಷ್ಕರಿಸಬೇಕು’ ಎಂದು ಒತ್ತಾಯಿಸಿ ಮಾರ್ಚ್ 2ರಿಂದ ಪ್ರತಿದಿನ ಎರಡು ವಿಭಾಗಗಳ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಲು ಕ್ರಿಯಾ ಸಮಿತಿ ನೇತೃತ್ವದಲ್ಲಿ ನಿರ್ಧರಿಸಿದ್ದರು.

ಕ್ರಿಯಾಸಮಿತಿಯ ಮುಖಂಡರೊಂದಿಗೆ ಸಾರಿಗೆ ಸಚಿವರು ಗುರುವಾರ ಸಭೆ ನಡೆಸಿದರು. 38 ತಿಂಗಳಲ್ಲಿ 26 ತಿಂಗಳ ಹಿಂಬಾಕಿಯನ್ನು ನೀಡಲು ಈಗಾಗಲೇ ಒಪ್ಪಿಗೆ ನೀಡಲಾಗಿದೆ. ಉಳಿದ ಸಮಸ್ಯೆಗಳ ಬಗ್ಗೆ ಮಾರ್ಚ್ 2ರಂದು ಸಭೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದರು. ಹಾಗಾಗಿ ಧರಣಿ ಸತ್ಯಾಗ್ರಹವನ್ನು ವಾಪಸ್ ಪಡೆಯಲು ಜಂಟಿ ಕ್ರಿಯಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಮಿತಿಯ ಮುಖಂಡರು ತಿಳಿಸಿದ್ದಾರೆ. ಸಭೆಯಲ್ಲಿ ಮುಖಂಡರಾದ ವಿಜಯಭಾಸ್ಕರ್ ಡಿ.ಎ., ಬಿ. ಜಯದೇವರಾಜೇ ಅರಸ್, ಎಚ್.ಡಿ. ರೇವಪ್ಪ, ವೆಂಕಟರಮಣಪ್ಪ, ಎ. ಸೋಮಣ್ಣ, ಜಗದೀಶ್ ಎಚ್.ಆರ್., ಗಂಡಸಿ ಸದಾನಂದ ಸ್ವಾಮಿ ಉಪಸ್ಥಿತರಿದ್ದರು.

ಎಸ್‌ಟಿಆರ್‌ಆರ್: ಶೀಘ್ರ ಅನುಮೋದನೆ ನೀಡುವ ಸಾಧ್ಯತೆ

ಭೂ ಪರಿಹಾರ ಪ್ರಸ್ತಾವ ಸಂಪುಟಕ್ಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರಧಾನಿ ಹಾಗೂ ಗಡ್ಕರಿ ಅವರಿಗೆ ಪತ್ರ ಬರೆದಿದ್ದ ಎಚ್.ಡಿ. ಕುಮಾರಸ್ವಾಮಿ
- ‘ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ’

ನವದೆಹಲಿ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್‌ಆರ್) ಯೋಜನೆಯನ್ನು ಅನುಷ್ಠಾನಗೊಳಿಸುವ ಹಾಗೂ ಜಮೀನು ಕಳೆದುಕೊಂಡಿರುವ ರೈತರಿಗೆ ತ್ವರಿತವಾಗಿ ಪರಿಹಾರ ನೀಡುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಶೀಘ್ರ ಅನುಮೋದನೆ ನೀಡುವ ಸಾಧ್ಯತೆ ಇದೆ.

ಈ ಬಗ್ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದು ವಿನಂತಿಸಿದ್ದರು. ಅಲ್ಲದೆ, ಹಲವು ಬಾರಿ ನವದೆಹಲಿಯಲ್ಲಿ ಇಬ್ಬರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಈ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ತ್ವರಿತವಾಗಿ ಪರಿಹಾರ ಬಿಡುಗಡೆ ಮಾಡಲು ಸಚಿವ ಸಂಪುಟದ ಅನುಮೋದನೆ ಕೋರುವ ಕುರಿತು ಗಡ್ಕರಿ ಅವರಿಗೆ ಡಿಸೆಂಬರ್‌ನಲ್ಲಿ ಪತ್ರ ಬರೆದಿದ್ದರು.

ಈ ಮನವಿಗೆ ಸ್ಪಂದಿಸಿ ಫೆಬ್ರುವರಿ 23ರಂದು ಪತ್ರ ಬರೆದಿರುವ ಗಡ್ಕರಿ, ‘ನಿಮ್ಮ ಮನವಿಯನ್ನು, ಅದರ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ. ಭೂ ಪರಿಹಾರ ನೀಡುವ ಬಗ್ಗೆ ಸಂಪುಟದ ಅನುಮೋದನೆ ಅಗತ್ಯವಾಗಿದ್ದು, ಅದಕ್ಕಾಗಿ ತಮ್ಮ ಮನವಿ ಪತ್ರ ಹಾಗೂ ಅದಕ್ಕೆ ಸಂಬಂಧಿತ ಪ್ರಸ್ತಾವವನ್ನು ಪ್ರಧಾನಿಯವರ ಕಾರ್ಯಾಲಯಕ್ಕೆ ರವಾನಿಸಿದ್ದೇನೆ’ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಕುಮಾರಸ್ವಾಮಿ, ‘ಯೋಜನೆಯು ಅನುಮೋದನೆಗಾಗಿ ಪರಿಗಣನೆಯಲ್ಲಿದೆ. ಯೋಜನೆಯಲ್ಲಿ ಹೂಡಿಕೆಗೆ ಅನುಮೋದನೆ ನೀಡಿದ ನಂತರವೇ ಪರಿಹಾರ ವಿತರಣೆ ಪುನರಾರಂಭಿಸಬಹುದು ಎಂದು ಹೆದ್ದಾರಿ ಸಚಿವರು ಪತ್ರ ಮುಖೇನ ತಿಳಿಸಿದ್ದಾರೆ. ಹೀಗಾಗಿ ಜಮೀನು ಕಳೆದುಕೊಂಡಿರುವ ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ’ ಎಂದು ಸ್ಪಷ್ಟಪಡಿಸಿದರು.



ರಾಷ್ಟ್ರೀಯ ಹೆದ್ದಾರಿ 948ಎಗೆ ಸಂಪರ್ಕ ಕಲ್ಪಿಸುವ ನೆಲಮಂಗಲ ತಾಲ್ಲೂಕಿನ ಓಬಳಾಪುರದಿಂದ ರಾಮನಗರ ತಾಲ್ಲೂಕಿನ ಕುಣಗಾಲುವರೆಗೆ ಹಾಗೂ ರಾಮನಗರದ ಕುಣಗಾಲುವಿನಿಂದ ಹೊಸೂರು ತಾಲ್ಲೂಕಿನ ಎಸ್. ಮುದುಗದಪಲ್ಲಿವರೆಗೆ ಉಪನಗರ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸುವ ಹಾಗೂ ರೈತರಿಗೆ ಭೂ ಪರಿಹಾರ ನೀಡುವ ಬಗ್ಗೆ ಕುಮಾರಸ್ವಾಮಿ ಪತ್ರದಲ್ಲಿ ಉಲ್ಲೇಖಿಸಿದ್ದರು.

‘2021ರಲ್ಲಿಯೇ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ. ಆದರೆ, ಜಮೀನು ಕಳೆದುಕೊಂಡ ರೈತರಿಗೆ ಇನ್ನೂ ಪರಿಹಾರ ವಿತರಣೆ ಪೂರ್ಣಗೊಂಡಿಲ್ಲ, ಇದು ರೈತರಿಗೆ ತೀವ್ರ ತೊಂದರೆ ಉಂಟು ಮಾಡಿದೆ’ ಎಂದೂ ಅವರು ತಿಳಿಸಿದ್ದರು.

‘2023ರವರೆಗೆ ಈ ಎರಡು ವಿಭಾಗಗಳಲ್ಲಿ ₹216.92 ಕೋಟಿ ಹಾಗೂ ₹52.70 ಕೋಟಿ ಭೂ ಪರಿಹಾರ ವಿತರಣೆ ಮಾಡಲಾಗಿದೆ ಎಂಬ ಅಂಶವನ್ನು ಗಡ್ಕರಿ ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ’ ಎಂದು ಕುಮಾರಸ್ವಾಮಿ ಮಾಹಿತಿ ನೀಡಿದರು.

‘ನಿರ್ಭಿಡೆಯಿಂದ ದಾಖಲಿಸಿದ ಆತ್ಮಕಥೆ’

ಸಾಹಿತಿ ಸುಕನ್ಯಾ ಮಾರುತಿ ಬರಹಕ್ಕೆ ಹಂಪ ನಾಗರಾಜಯ್ಯ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆತ್ಮಕಥೆಗಳನ್ನು ಬರೆಯುವವರು ತಮ್ಮ ಬದುಕಿನ ಕೆಲವು ಘಟನೆಗಳನ್ನು ಮರೆಮಾಚಿದರೂ, ಸಾಹಿತಿ ಸುಕನ್ಯಾ ಮಾರುತಿ ತಮ್ಮ ಆತ್ಮಕಥೆಯಲ್ಲಿ ನಿರ್ಭಿಡೆಯಿಂದಲೇ ಎಲ್ಲವನ್ನೂ ದಾಖಲಿಸಿದ್ದಾರೆ’ ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ಪದ ಸಂಸ್ಥೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸುಕನ್ಯಾ ಮಾರುತಿ ಅವರ ಬದುಕು ಬರಹ, ಸಾಂಸ್ಕೃತಿಕ ಚಿಂತನೆ, ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಆತ್ಮಕಥೆ ಜನಾರ್ಪಣೆಗೊಳಿಸಿ ಮಾತನಾಡಿದರು.

‘ಸುಕನ್ಯಾ ಅವರು ದೇವದಾಸಿಯ ಮಗಳಾಗಿ ಆನಂತರ ನಿರಂತರವಾಗಿ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿ ಶಿಕ್ಷಣ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿ, ಹೋರಾಟಗಳ ಮೂಲಕ ಹಲವರಿಗೆ ಶಕ್ತಿ ತುಂಬುವ ಕೆಲಸ ಮಾಡಿದವರು. ತಳಮಳಗಳನ್ನು ಸಹಿಸಿಕೊಂಡು ಏನೂ ಆಗಿಯೇ ಇಲ್ಲ ಎನ್ನುವ ರೀತಿ ಬೆಳೆದಿದ್ದಾರೆ. ಇದೆಲ್ಲವನ್ನೂ ಆತ್ಮಕಥೆಯಲ್ಲಿ ಸಂಕೋಚವಿಲ್ಲದೇ ಪ್ರಸ್ತಾಪಿಸಿದ್ದಾರೆ. ಆಶ್ಚರ್ಯದ ಜತೆಗೆ ಸಂತೋಷವನ್ನೂ ಉಂಟು ಮಾಡುವ ವಿಶಿಷ್ಟ ಕೃತಿ’ ಎಂದು ತಿಳಿಸಿದರು.

‘ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ ನೀಡದೇ ನಿರ್ಬಂಧಿಸುತ್ತಲೇ ಆಕೆಯನ್ನು ದೇವತೆಗೆ ಹೋಲಿಸುವುದನ್ನು ಮನುಸ್ಮೃತಿಯಲ್ಲಿ ಉಲ್ಲೇಖಿಸಲಾಗಿದೆ. ಹಲವು ನಿರ್ಬಂಧಗಳ ನಡುವೆಯೂ ಸುಕನ್ಯಾ ಮಾರುತಿ ಅವರಂತಹ ಹಲವರು ಗಟ್ಟಿ ನಿಲುವುಗಳಿಂದ ಬದುಕಿನ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ’ ಎಂದರು.

ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ‘ದಂತಗೋಪುರಗಳಲ್ಲಿ ಕುಳಿತು ಸಮಾಜದ ಪರವಾಗಿ ಬರೆಯುವ ಹಲವು ಬರಹಗಾರರು, ಚಿಂತಕರ ನಡುವೆ ಸುಕನ್ಯಾ ಜನರೊಡನೆ ಬೆರೆಯುತ್ತಲೇ ಎಲ್ಲವನ್ನೂ ಗಟ್ಟಿಯಾಗಿ ಹೇಳುತ್ತಾ ಬಂದಿದ್ದಾರೆ.



ಹಂಪ ನಾಗರಾಜಯ್ಯ ಅವರು ಸುಕನ್ಯಾ ಮಾರುತಿ ಅವರನ್ನು ಸನ್ಮಾನಿಸಿದರು. ಪದ ಸಂಸ್ಥೆ ದೇವರಾಜ್, ಬಂಜಗೆರೆ ಜಯಪ್ರಕಾಶ್, ಲತೀಫ್ ಕುನ್ನಿಬಾವಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ದಲಿತ, ಬಂಡಾಯ, ಸಮಾಜವಾದಿ ಚಿಂತನೆಗಳು ಪ್ರಬಲಗೊಂಡ ನಂತರ ವಿಭಿನ್ನ ಹಿನ್ನೆಲೆಯವರಿಗೂ ಎಲ್ಲೆಡೆ ಪ್ರಾತಿನಿಧ್ಯ ದೊರೆಯುವ ಸನ್ನಿವೇಶ ನಿರ್ಮಾಣವಾಗಿದೆ’ ಎಂದರು.

‘ಕರ್ನಾಟಕ ವಿಮೋಚನಾ ರಂಗವನ್ನು ಕಟ್ಟಿದಾಗ ಕೆಲವರು ನಮ್ಮೊಂದಿಗೆ ಗುರುತಿಸಿಕೊಳ್ಳಲು ಹಿಂಜರಿದರೂ ಸುಕನ್ಯಾ ಅವರ ಬೆಂಬಲ ದೊರೆತಿತ್ತು. ವೃತ್ತಿ, ಸಾಮಾಜಿಕ ಬದುಕಿನಲ್ಲಿ ಹಲವಾರು ಕೋಟಲೆಗಳನ್ನು ಅನುಭವಿಸುತ್ತಲೇ ಧೃತಿಗೆಡದೇ ಹೋರಾಟಗಳೊಂದಿಗೆ ಗಟ್ಟಿಯಾಗಿ ನಿಂತ ಅವರ ಆತ್ಮಕಥೆಯ ಕುರಿತು ಹೆಚ್ಚು ಚರ್ಚೆಯಾಗಬೇಕು’ ಎಂದು ತಿಳಿಸಿದರು.

ಸಾಹಿತಿ ರಾಜಪ್ಪ ದಳವಾಯಿ, ವಿನಯಾ ಒಕ್ಕುಂದ, ಎನ್.ಕೆ.ಲೋಲಾಕ್ಷಿ, ಸಿದ್ದನಗೌಡ ಪಾಟೀಲ, ಆರ್.ಜಿ.ಹಳ್ಳಿ ನಾಗರಾಜ್, ಮಾವಳ್ಳಿ ಶಂಕರ್, ಬಸವರಾಜ ಸಬರದ ವಿಚಾರ ಮಂಡಿಸಿದರು. ಲೇಖಕಿ ಸುಕನ್ಯಾ ಮಾರುತಿ, ಬರಹಗಾರ ಲತೀಫ್ ಕುನ್ನಿಬಾವಿ, ಪದ ಸಂಸ್ಥೆಯ ದೇವರಾಜ್ ಉಪಸ್ಥಿತರಿದ್ದರು.

ಜಲಮಂಡಳಿ ಫೋನ್ ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಫೆ.27 ರ ಬೆಳಿಗ್ಗೆ 09.30 ರಿಂದ 10.30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವುದು ಸೇರಿದಂತೆ ಸಾರ್ವಜನಿಕರು ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಂಪರ್ಕಿಸಬಹುದಾದ ಸಂಖ್ಯೆ 080-22945119

ಲಾಂಛನ ಅನಾವರಣ



ಬೆಂಗಳೂರು ವಾಣಿಜ್ಯೋದ್ಯಮ ಮಹಾಸಂಘದ (ಬಿಸಿಐಸಿ) 50ನೇ ವರ್ಷಾಚರಣೆಯ ಲಾಂಛನವನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬೆಂಗಳೂರಿನಲ್ಲಿ ಗುರುವಾರ ಅನಾವರಣ ಮಾಡಿದರು. ಬಿಸಿಐಸಿ ಹಿರಿಯ ಉಪಾಧ್ಯಕ್ಷ ಕೆ. ರವಿ, ಅಧ್ಯಕ್ಷ ಪ್ರಶಾಂತ ಗೋಖಲೆ, ಉಪಾಧ್ಯಕ್ಷ ಡಾ. ಪ್ರಶಾಂತ್ ರೆಡ್ಡಿ ಇದ್ದಾರೆ

ಹಳದಿ ಮಾರ್ಗ: ಇಂದಿನಿಂದ 8ನೇ ರೈಲು ಸಂಚಾರ


ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಫೆ.27ರಿಂದ 8ನೇ ರೈಲು ಸಂಚರಿಸಲಿದೆ. ಸದ್ಯ 10 ನಿಮಿಷಕ್ಕೊಂದು ರೈಲು ಸಂಚರಿಸುತ್ತಿದ್ದು, ಈ ಅವಧಿ 9 ನಿಮಿಷಕ್ಕೆ ಇಳಿಯಲಿದೆ.

ಪಶ್ಚಿಮ ಬಂಗಾಳದ ಟಿಟಾಗಡ್ ರೈಲ್ ಸಿಸ್ಟಂ ಲಿಮಿಟೆಡ್ ಕಾರ್ಯಾಗಾರದಿಂದ ಜನವರಿ ಕೊನೇ ವಾರದಲ್ಲಿ ರವಾನೆಯಾಗಿದ್ದ ಎಂಟನೇ ರೈಲಿನ ಬೋಗಿಗಳು ಫೆಬ್ರುವರಿ ಮೊದಲ ವಾರದಲ್ಲಿ ಹೆಬ್ಬಗೋಡಿ ಮೆಟ್ರೊ ಡಿಪೊಗೆ ತಲುಪಿದ್ದವು. ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಪರೀಕ್ಷೆಗಳು ನಡೆದಿದ್ದವು. ಬಳಿಕ ರಾತ್ರಿ ವೇಳೆ ಪರೀಕ್ಷಾರ್ಥ ಸಂಚಾರ ನಡೆಸಲಾಗಿತ್ತು. 19.15 ಕಿ.ಮೀ. ದೂರದ ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವೆ ಆಗಸ್ಟ್ 11ಕ್ಕೆ ಆರಂಭವಾಗಿರುವ ಹಳದಿ ಮಾರ್ಗದಲ್ಲಿ ಸದ್ಯ ಏಳು ರೈಲುಗಳು ಸಂಚರಿಸುತ್ತಿದ್ದು, ದಟ್ಟಣೆ ಅವಧಿಯಲ್ಲಿ ಪ್ರತಿ 10 ನಿಮಿಷಕ್ಕೊಂದು ಟ್ರಿಪ್‌ನಂತೆ ಸಂಚರಿಸುತ್ತಿವೆ. ದಟ್ಟಣೆ ಅಲ್ಲದ ಅವಧಿಯಲ್ಲಿ 18 ನಿಮಿಷಗಳಿಗೊಂದು ರೈಲು ಸಂಚರಿಸುತ್ತಿತ್ತು. ಇನ್ನು ಮುಂದೆ 14 ನಿಮಿಷಕ್ಕೊಂದು ಟ್ರಿಪ್ ಇರಲಿದೆ.














ಅವಘಡ ನಿಯಂತ್ರಣ: ಸಮಿತಿಗೆ ಸೂಚನೆ

ಕುಂಬಾರಪೇಟೆಯಲ್ಲಿ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಪೇಟೆ ವ್ಯಾಪ್ತಿಯ ವಾಣಿಜ್ಯ ಪ್ರದೇಶಗಳಲ್ಲಿ ಅವಘಡಗಳು ಸಂಭವಿಸದಂತೆ ಹಾಗೂ ಅವುಗಳನ್ನು ನಿಯಂತ್ರಿಸಲು ಸಮಗ್ರ ವರದಿ ಸಿದ್ಧಪಡಿಸಲು ಸಮಿತಿ ರಚಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಚಿಕ್ಕಪೇಟೆ ವ್ಯಾಪ್ತಿಯ ಕುಂಬಾರ-ಪೇಟೆಯಲ್ಲಿ ಬುಧವಾರ ಬೆಂಕಿ ಅವಘಡ ಸಂಭವಿಸಿದ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಚಿಕ್ಕಪೇಟೆ ವ್ಯಾಪ್ತಿಯ ನಗರ್ತರ-ಪೇಟೆಯಲ್ಲಿ ಕಳೆದ ವರ್ಷವೂ ಬೆಂಕಿ ಅವಘಡ ಸಂಭವಿಸಿತ್ತು. ಇದೀಗ ಕುಂ-ಬಾರಪೇಟೆಯಲ್ಲಿ ಬೆಂಕಿ ಅವಘಡ ಸಂಭವಿಸಿರುವುದು, ಅವಘಡಕ್ಕೆ ಕಾರಣಗಳೇನು ಹಾಗೂ ಇಂತಹ ಘಟನೆಗಳನ್ನು ಯಾವ ರೀತಿಯಲ್ಲಿ ಪರಿ-ಣಾಮಕಾರಿಯಾಗಿ ನಿಯಂತ್ರಿಸಬಹುದು ಎಂಬುದರ ಕುರಿತು ಸಮಗ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಜಿಬಿಎ, ಕೇಂದ್ರ ನಗರ ಪಾಲಿಕೆ, ಅಗ್ನಿಶಾಮಕ ಹಾಗೂ ವಿದ್ಯುತ್ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲು ಸೂಚನೆ ನೀಡಿದರು.

ಬೆಂಕಿ ಅವಘಡಗಳನ್ನು ಪರಿಣಾ-ಮಕಾರಿಯಾಗಿ ತಡೆಗಟ್ಟಲು ಪ್ರಮುಖ ಸ್ಥಳಗಳಲ್ಲಿ 'ಹೈಡ್ರೆಂಟ್' ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಬೇಕು. ಇದರ ಜೊತೆಗೆ, ಮೇಲ್ವಿಚಾರಣೆಗೆ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಎಂದು ಆದೇಶಿಸಿದರು.

ಕುಂಬಾರಪೇಟೆಯ 'ಲಕ್ಷ್ಮಿ ಕಮರ್ಶಿಯಲ್ ಕಾಂಪ್ಲೆಕ್ಸ್'ನ ಮೂರನೇ ಅಂತಸ್ತಿನಲ್ಲಿ ಬುಧವಾರ ಬೆಳಿಗ್ಗೆ ಬೆಂಕಿ ಅವಘಡ ಸಂಭವಿಸಿದೆ. ಕಿರಿದಾದ ರಸ್ತೆ ಇರುವುದರಿಂದ ಅಗ್ನಿಶಾಮಕ ವಾಹನಗಳಿಗೆ ನೇರವಾಗಿ ಪ್ರವೇಶ ಸಾಧ್ಯವಾಗಲಿಲ್ಲ. ಸುಮಾರು 300 ಮೀಟರ್ ದೂರದಿಂದ ಪೈಪ್ ವ್ಯವಸ್ಥೆ ಮಾಡಿಕೊಂಡು ಬೆಂಕಿ ನಂದಿಸಲಾಯಿತು ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್, ಅಭಿವೃದ್ಧಿ ವಿಭಾಗದ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್, ಜಂಟಿ ಆಯುಕ್ತ ಹೇಮಂತ್ ಶರಣ್, ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ ಉಪಸ್ಥಿತರಿದ್ದರು.

ಶೌಚಾಲಯ ಸ್ವಚ್ಛವಾಗಿರಲಿ: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಶೇಕಡ 100ರಷ್ಟು ಸ್ವಚ್ಛವಾಗಿಡಬೇಕು ಎಂದು ಮಹೇಶ್ವರ್ ಸೂಚಿಸಿದರು.

ದಾಸಪ್ಪ ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯಗಳು, ಕಾರ್ಯನಿರ್ವಹಿಸುವ ವೈದ್ಯರು ಹಾಗೂ ಸಿಬ್ಬಂದಿ ವಿವರಗಳನ್ನು ಒಳಗೊಂಡ ಮಾಹಿತಿ ಫಲಕವನ್ನು ಅಳವಡಿಸಬೇಕು. ಆಸ್ಪತ್ರೆ ಆವರಣದಲ್ಲಿ ಎಲೆಗಳನ್ನು ಗೊಬ್ಬರವಾಗಿ ಪರಿವರ್ತಿಸ-ಬೇಕು. ಹಸಿರು ಕಟ್ಟಡ ನಿರ್ಮಾಣ ಹಾಗೂ ಬಹು ಅಂತಸ್ತಿನ ಕಾರು ಪಾರ್ಕಿಂಗ್ ನಿರ್ಮಾಣಕ್ಕೆ ಅವಕಾಶವಿದೆಯೇ ಎಂಬುದರ ಬಗ್ಗೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಚ್. ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆಗೆ ಭೇಟಿ ನೀಡಿ, ಲಿಫ್ಟ್ ದುರಸ್ತಿ ಮಾಡಿ ಕಾರ್ಯನಿರ್ವಹಣೆಗೆ ತರಬೇಕು. ಆಸ್ಪತ್ರೆಗೆ ನೀರಿನ ಸಂಪರ್ಕ ಸಮರ್ಪಕವಾ-ಗಿರುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.



ಮಹೇಶ್ವರ್ ರಾವ್ ಗುರುವಾರ ಕುಂಬಾರಪೇಟೆಯಲ್ಲಿ ಪರಿಶೀಲನೆ ನಡೆಸಿದರು. ರಾಜೇಂದ್ರ ಚೋಳನ್ ಉಪಸ್ಥಿತರಿದ್ದರು

ಎಲೆ ಸಂಸ್ಕರಣ ಘಟಕ ಕಡ್ಡಾಯ

ಜಿಬಿಎ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ಯಾನಗಳಲ್ಲಿ ಎಲೆ ಸಂಸ್ಕರಣ ಘಟಕಗಳನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತರ ಕಚೇರಿಯಲ್ಲಿ ಗುರುವಾರ ನಡೆಸಿದ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

ಉದ್ಯಾನಗಳ ಮರಗಳಿಂದ ಉದುರುವ ಎಲೆಗಳನ್ನು ಮೂಲದಲ್ಲಿಯೇ ಸಂಸ್ಕರಿಸಿ ಗೊಬ್ಬರ ತಯಾರಿಸಿ, ಅದೇ ಉದ್ಯಾನವನಗಳ ನಿರ್ವಹಣೆಗೆ ಬಳಸಿಕೊಳ್ಳಬಹುದಾಗಿದೆ ಎಂದರು. ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಕಸದ ಸಮಸ್ಯೆ, ಪಾದಚಾರಿ ಮಾರ್ಗ ದುರಸ್ತಿ, ಅನಧಿಕೃತ ಪಾರ್ಕಿಂಗ್, ಡಾಂಬರೀಕರಣ, ಬಿಡಾಡಿ ಹಸುಗಳ ನಿಯಂತ್ರಣ, ವಿದ್ಯುತ್ ದೀಪಗಳ ನಿರ್ವಹಣೆ, ಪಾರ್ಕ್ ನಿರ್ವಹಣೆ, ಅನಧಿಕೃತ ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ದೂರುಗಳು ದಾಖಲಾಗಿವೆ. ಸ್ವೀಕರಿಸಲಾದ ದೂರುಗಳಲ್ಲಿ ಶೇ 60 ರಷ್ಟನ್ನು ವಾರದೊಳಗಾಗಿ ಇತ್ಯರ್ಥಗೊಳಿಸಲಾಗುವುದು. ಉಳಿದ ಶೇ 40ರಷ್ಟು ದೂರುಗಳು ದೀರ್ಘಕಾಲಿಕ ಸಮಸ್ಯೆಗಳಾಗಿರುವುದರಿಂದ ಅವುಗಳನ್ನು ಆದ್ಯತೆಯ ಮೇರೆಗೆ ತ್ವರಿತವಾಗಿ ಬಗೆಹರಿಸಲು ಅಧಿಕಾರಿಗಳಿಗೆ ತಿಳಿಸಲಾಗಿದೆ. ಮುಂದಿನ ತಿಂಗಳೂ ಸಾರ್ವಜನಿಕ ಸಂಪರ್ಕ ಸಭೆ ನಡೆಸಲಾಗುತ್ತದೆ ಎಂದು ನಗರ ಪಾಲಿಕೆಯ ಆಡಳಿತಾಧಿಕಾರಿ ಆಗಿರುವ ಮಹೇಶ್ವರ್ ರಾವ್ ತಿಳಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರಾದ ರಾಜೇಂದ್ರ ಚೋಳನ್ ಮಾತನಾಡಿ, ಪ್ರಮುಖ ರಸ್ತೆಗಳಲ್ಲಿ ಅನಧಿಕೃತ ಪಾರ್ಕಿಂಗ್ ತಪ್ಪಿಸಲು ಅಭಿಯಾನ ನಡೆಸುವಂತೆ ಜಂಟಿ ಆಯುಕ್ತರಿಗೆ ಸೂಚನೆ ನೀಡಿದರು.

ಬೀಗಮುದ್ರೆ ಹಾಕಿ

- ಚಿಕ್ಕಪೇಟೆ ವ್ಯಾಪ್ತಿಯ ಎಲ್ಲಾ ವಾಣಿಜ್ಯ ಕಟ್ಟಡಗಳಲ್ಲಿಯೂ ಅಗ್ನಿ ಸುರಕ್ಷತಾ ವ್ಯವಸ್ಥೆ ಕಡ್ಡಾಯವಾಗಿರಬೇಕು. ಈ ವ್ಯವಸ್ಥೆ ಇಲ್ಲದ ಕಟ್ಟಡಗಳಿಗೆ ಬೀಗಮುದ್ರೆ ಹಾಕಬೇಕು
- ವ್ಯಾಪಾರ ಸಂಘಟನೆಗಳ ಜೊತೆ ಸಭೆ ನಡೆಸಿ ಅಗತ್ಯ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಿ, ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಬೇಕು
- ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ನಿರ್ಮಾಣ ಕಾಮಗಾರಿಗಳನ್ನು ನಿಲ್ಲಿಸಲು ನೋಟಿಸ್ ಜಾರಿ ಮಾಡಬೇಕು.
- ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿ-ಸದಿದ್ದರೆ ಕಟ್ಟಡ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು
- ಅಸುರಕ್ಷಿತ ಕಟ್ಟಡಗಳನ್ನು ಪರಿಶೀಲಿಸಿ, ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ತಕ್ಷಣ ನೋಟಿಸ್ ಜಾರಿ ಮಾಡಬೇಕು.
- ಚಿಕ್ಕಪೇಟೆ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು

ಸುದ್ದಿ 2 ನಿಮಿಷ

₹1 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಕೇರಳ ರಾಜ್ಯದ ಮಾದಕ ದ್ರವ್ಯ ವಿರೋಧಿ ವಿಶೇಷ ಕಾರ್ಯಪಡೆ ನಗರದ ಎಲೆಕ್ಟ್ರಾನಿಕ್ ಸಿಟಿ ಬಳಿಯ ಲೇಔಟ್‌ವೊಂದರ ಮನೆ ಮೇಲೆ ದಾಳಿ ನಡೆಸಿ ₹1 ಕೋಟಿ ಮೌಲ್ಯದ 2 ಕೆ.ಜಿ.ಎಂಡಿಎಂ ಪತ್ತೆ ಮಾಡಿದೆ. ವಿದೇಶದಿಂದ ಮಾದಕ ವಸ್ತು ತರಿಸಿಕೊಂಡು ಮಾರಾಟ ಮಾಡುತ್ತಿದ್ದ ಆರೋಪಿ ಧೀರೇಶ್ ಕುಟುಮ್ ಎಂಬಾತನನ್ನು ಬಂಧಿಸಿದ್ದಾರೆ.

ಆರೋಪಿ ಅಸ್ಸಾಂ ರಾಜ್ಯದವನಾಗಿದ್ದು, ಎಲೆಕ್ಟ್ರಾನಿಕ್ ಸಿಟಿ ವ್ಯಾಪ್ತಿಯ ರಮೇಶ್ ರೆಡ್ಡಿ ಲೇಔಟ್‌ನಲ್ಲಿ ವಾಸವಾಗಿದ್ದ. ನಗರದಿಂದಲೇ ವಿವಿಧ ರಾಜ್ಯಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಪಡೆದ ಕೇರಳ ಪೊಲೀಸ್ ಅಧಿಕಾರಿ ಸತ್ಯಜಿತ್ ನೇತೃತ್ವದ ತಂಡ ದಾಳಿ ನಡೆಸಿದೆ.

ಬೆಂಗಳೂರು ಮಾಲಿನ್ಯ: ಶೀಘ್ರ ಸಭೆ



ಬೆಂಗಳೂರು: ದೆಹಲಿಯಂತೆ ಬೆಂಗಳೂರು ಸಹ ಮತ್ತೊಂದು 'ಗ್ಯಾಸ್ ಚೇಂಬರ್' ಆಗದಂತೆ ಕ್ರಮ ಕೈಗೊಳ್ಳಲು ನಗರದ ಎಲ್ಲ 28 ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ರಾಜಾಜಿನಗರ ಶಾಸಕ ಸುರೇಶ್‌ಕುಮಾರ್ ಅವರ ಕೋರಿಕೆಯ ಮೇರೆಗೆ ಗುರುವಾರ ಉನ್ನತಾಧಿಕಾರಿಗಳ ಸಭೆ ನಡೆಸಿದ ಸಚಿವರು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ, ಜಲ ಮಾಲಿನ್ಯ ಮತ್ತು ಶಬ್ದ ಮಾಲಿನ್ಯ ಹೆಚ್ಚಾಗುತ್ತಿದ್ದು ಇದರ ನಿಯಂತ್ರಣಕ್ಕೆ ಪಕ್ಷಾತೀತವಾಗಿ ಎಲ್ಲ ಜನ ಪ್ರತಿನಿಧಿಗಳ ಸಹಕಾರ ಅಗತ್ಯವಿದೆ ಎಂದರು.

ಸುರೇಶ್‌ಕುಮಾರ್ ವಿಷಯ ಪ್ರಸ್ತಾಪಿಸಿ, 'ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ದೂಳಿನಿಂದಾಗಿ ವಾಯು ಗುಣಮಟ್ಟ ಕ್ಷೀಣಿಸುತ್ತಿದ್ದು, ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಈ ಕಾರಣದಿಂದ ಬೆಂಗಳೂರು ಹೊರ ವಲಯಕ್ಕೆ ಹೋಗುವಂತೆ ವೈದ್ಯರು ಸಲಹೆ ನೀಡುತ್ತಿದ್ದಾರೆ. ವಾಯು ಗುಣಮಟ್ಟ ಕಾಪಾಡಲು ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಇದಕ್ಕೆ ಸ್ಪಂದಿಸಿದ ಪರಿಸರ ಸಚಿವರು, 'ವಾಯು ಗುಣಮಟ್ಟ ಸೂಚ್ಯಂಕ ಮೌಲ್ಯವು 100 ದಾಟಿದರೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿ ನಿಗದಿತ ಕಾಲಮಿತಿಯಲ್ಲಿ ನಿಯಂತ್ರಿಸಲು ಸೂಚಿಸಿ. ಕ್ರಮ ವಹಿಸದಿದ್ದರೆ ನಿಯಮಾನುಸಾರ ಮೊಕದ್ದಮೆ ದಾಖಲಿಸಿ' ಎಂದೂ ಸೂಚನೆ ನೀಡಿದರು.

ಡಿಸಿಎಂ ಅಧ್ಯಕ್ಷತೆಯಲ್ಲಿ ಸಭೆ: ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚಿಸಿ ಶೀಘ್ರವೇ ಅವರ ಅಧ್ಯಕ್ಷತೆಯಲ್ಲೇ ಬೆಂಗಳೂರು ನಗರದ ಎಲ್ಲ ಜನಪ್ರತಿ-ನಿಧಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ಖಂಡ್ರೆ ತಿಳಿಸಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್, ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸುಲು ಭಾಗವಹಿಸಿದ್ದರು.

ಬ್ಲ್ಯಾಕ್ ಸ್ಪಾಟ್ ಸ್ವಚ್ಛತೆಗೆ 'ಲಿಟ್ಟರ್ ಪಿಕ್ಕಿಂಗ್ ಯಂತ್ರ'



'ಲಿಟ್ಟರ್ ಪಿಕ್ಕಿಂಗ್' ಯಂತ್ರಕ್ಕೆ ಪೊಮ್ಮಲ ಸುನೀಲ್‌ಕುಮಾರ್ ಅವರು ಗುರುವಾರ ಚಾಲನೆ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಪೌರಕಾರ್ಮಿಕರು ಸ್ವಚ್ಛ-ಗೊಳಿಸುವುದು ಕಷ್ಟಕರವಾಗಿದ್ದು, ಈ ಸಮಸ್ಯೆ ನಿವಾರಿಸಲು 'ಲಿಟ್ಟರ್ ಪಿಕ್ಕಿಂಗ್ ಯಂತ್ರ'ವನ್ನು ಉತ್ತರ ನಗರ ಪಾಲಿಕೆ ₹65 ಲಕ್ಷ ವೆಚ್ಚದಲ್ಲಿ ಖರೀದಿಸಿದೆ ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಉತ್ತರ ನಗರ ಪಾಲಿಕೆಯ 72 ವಾರ್ಡ್‌ಗಳ ರಸ್ತೆಗಳಲ್ಲಿ ದೈನಂದಿನ ಸ್ವಚ್ಛತಾ ಕಾರ್ಯವನ್ನು ಪೌರಕಾರ್ಮಿಕರು ನಿರ್ವಹಿಸುತ್ತಿದ್ದು, ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆ ಕಾರ್ಯವನ್ನು 1,018 ಆಟೋ ಟಿಪ್ಪರ್‌ಗಳ ಮೂಲಕ ನಡೆಸಲಾ-ಗುತ್ತಿದೆ' ಎಂದರು.

'ಲಿಟ್ಟರ್ ಪಿಕ್ಕಿಂಗ್ ವಾಹನವು ಆಧುನಿಕ ಸಕ್ಷನ್ ತಂತ್ರಜ್ಞಾನವನ್ನು ಬಳಸಿ ಹೋಸ್ ಪೈಪ್ ಮುಖಾಂತರ ರಸ್ತೆ ಬದಿಯ ತ್ಯಾಜ್ಯವನ್ನು ಹೀರಿಕೊಂಡು ವಾಹನದಲ್ಲಿರುವ ಕಂಟೈನರ್‌ನಲ್ಲಿ ಸಂಗ್ರಹಿಸುತ್ತದೆ. ಜೊತೆಗೆ ರಸ್ತೆ ಬದಿಯ ಹೂಳು, ಎಲೆಗಳು ಹಾಗೂ ಅರ್ಧ ದ್ರವ ತ್ಯಾಜ್ಯವನ್ನು ಸಹ ಸುಲಭವಾಗಿ ತೆರ-ವುಗೊಳಿಸುತ್ತದೆ. ಪೌರಕಾರ್ಮಿಕರು ಪಾರಂಪರಿಕ ಪೊರಕೆಗಳಿಂದ ಸ್ವಚ್ಛತೆ ಮಾಡಲು ತೆಗೆದುಕೊಳ್ಳುವ ಸಮಯದ ಅರ್ಧಕ್ಕಿಂತ ಕಡಿಮೆ ಅವಧಿಯಲ್ಲಿ ತ್ಯಾಜ್ಯ ತೆರವು ಕಾರ್ಯವನ್ನು ಈ ಯಂತ್ರದ ಮೂಲಕ ಪರಿಣಾಮಕಾರಿಯಾಗಿ ನಿರ್ವ-ಹಿಸಬಹುದಾಗಿದೆ' ಎಂದು ಮಾಹಿತಿ ನೀಡಿದರು.

ಬ್ಲ್ಯಾಕ್ ಸ್ಪಾಟ್ ಸುಂದರೀಕರಣದ ಭಾಗವಾಗಿ ಬಳ್ಳಾರಿ ರಸ್ತೆ ಬಳಿ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮಾರ್ಷಲ್‌ಗಳಿಗೆ ವಾಲ್ ಪೇಂಟಿಂಗ್ ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು. ಈ ತರಬೇತಿಯನ್ನು 'ಅಗ್ಲಿ ಇಂಡಿಯನ್' ತಂಡದ ಸಹಯೋಗದಲ್ಲಿ ನಡೆಸಲಾಯಿತು. ಈ ತರಬೇತಿ ಪಡೆದವರು, ಬ್ಲ್ಯಾಕ್ ಸ್ಪಾಟ್‌ಗಳನ್ನು ಸ್ವಚ್ಛ, ಆಕರ್ಷಕ ಹಾಗೂ ದೃಶ್ಯಾತ್ಮಕವಾಗಿ ಸುಂದರ ಸಾರ್ವಜನಿಕ ಸ್ಥಳಗಳಾಗಿ ಪರಿವರ್ತಿಸಲಿದ್ದಾರೆ ಎಂದು ಹೇಳಿದರು.

50 ಆಸ್ತಿ ಹರಾಜು

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಲಯದಲ್ಲಿ ಆಸ್ತಿ ತೆರಿಗೆ ಪಾವತಿಸದ ಸುಸ್ತಿದಾರರ 50 ಸ್ವತ್ತುಗಳನ್ನು ಫೆ.27ರಂದು ಹರಾಜು ಹಾಕಲಾಗುವುದು. ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿನ ಒಟ್ಟು 30 ಸ್ವತ್ತುಗಳನ್ನು ಫೆ.21ರಂದು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿತ್ತು. ಇದರಲ್ಲಿ 13 ಆಸ್ತಿಗಳ ಮಾಲೀಕರುಗಳು ಬಾಕಿ ಆಸ್ತಿ ತೆರಿಗೆಯನ್ನು ಸ್ಥಳದಲ್ಲೇ ಪಾವತಿಸಿದ್ದರು.

ಸ್ಥಳ ಗುರುತು

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲು 90 ಸ್ಥಳ ಹಾಗೂ ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ 150 ಸ್ಥಳಗಳನ್ನು ನಿಗದಿಪ-ಡಿಸಲಾಗಿದೆ. ಈ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನೂ ಅಳವಡಿಸಲಾಗಿದೆ. ಈ ಸ್ಥಳ ಬಿಟ್ಟು ಬೇರೆಡೆ, ನಾಗರಿಕರು ಆಹಾರ ನೀಡಬಾರದು ಎಂದು ತಿಳಿಸಲಾಗಿದೆ.

ಬಜೆಟ್: ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಿ

'ಮೂಲಸೌಕರ್ಯಕ್ಕೆ ಆದ್ಯತೆ ನೀಡಿ'

ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರ ಹಲವು ಸಮಸ್ಯೆಗಳಿಂದ ನಲುಗುತ್ತಿದೆ. ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ, ಮಳೆ ನೀರು ಸರಾಗವಾಗಿ ಹರಿಯಲು ಚರಂಡಿಗಳ ನಿರ್ಮಾಣ, ಉತ್ತಮ ಗುಣಮಟ್ಟದ ರಸ್ತೆ ಹಾಗೂ ಪಾದಚಾರಿ ಮಾರ್ಗಗಳ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಆದ್ಯತೆ ನೀಡಬೇಕು. ಬರಗಾಲದ ಸಂದರ್ಭದಲ್ಲಿ ಅಂತರ್ಜಲ ಹೆಚ್ಚಿಸಲು ಪ್ರತಿ ಮನೆಯಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಕೆಗೆ ಸೂಚಿಸಬೇಕು. ಇದರ ಜೊತೆಗೆ ಐದು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ ನಡೆಸಬೇಕು.



ಪಟ್ಟಡಿ ಎ. ಬಸವರಾಜ್, ನಾಗವಾರ

'ರಸ್ತೆ ದುರಸ್ತಿಗೆ ಒತ್ತು ನೀಡಿ'

ಬೆಂಗಳೂರಿನ ಬಹುತೇಕ ಎಲ್ಲ ರಸ್ತೆಗಳು ಹದಗೆಟ್ಟು ಹೋಗಿವೆ. ಇದ್ದರಿಂದ ನಿತ್ಯ ವಾಹನ ಸವಾರರು ಅದರಲ್ಲೂ ಮುಖ್ಯವಾಗಿ ದ್ವಿಚಕ್ರ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುತ್ತಿದ್ದಾರೆ. ಇದರಿಂದ ಅಪಘಾತಗಳು ಸಂಖ್ಯೆ ಹೆಚ್ಚುತ್ತಿದ್ದು, ರಸ್ತೆಗಳ ದುರಸ್ತಿಗೆ ಬಜೆಟ್‌ನಲ್ಲಿ ಯೋಜನೆ ರೂಪಿಸಬೇಕು. ಪಾದಚಾರಿ ಮಾರ್ಗಗಳನ್ನು ಅತಿಕ್ರಮಣ ಮಾಡಿರುವ ಬೀದಿ ಬದಿಯ ವ್ಯಾಪಾರಿಗಳಿಗೆ ನಿರ್ದಿಷ್ಟ ಜಾಗ ಗುರುತಿಸಿ, ಅಲ್ಲಿಯೇ ವ್ಯಾಪಾರ ಮಾಡುವಂತೆ ಸೂಚಿಸಬೇಕು.



ಶಾಮಾಚಾರ್, ಜ್ಞಾನಜ್ಯೋತಿ ನಗರ

'ಸಾರ್ವಜನಿಕ ಸಾರಿಗೆ ಬಲಪಡಿಸಿ'

ಬೆಂಗಳೂರು ನಗರದ ಹೆಬ್ಬಾಗಿಲಾಗಿರುವ ಪೀಣ್ಯ ದಾಸರಹಳ್ಳಿ ಪ್ರದೇಶವು ಏಷ್ಯಾ ಖಂಡದ ಅತ್ಯಂತ ದೊಡ್ಡ ಕೈಗಾರಿಕಾ ಪ್ರದೇಶವಾಗಿದೆ. ಇಲ್ಲಿನ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದ್ದರಿಂದ ಇಲ್ಲಿ ಸಾರ್ವಜನಿಕ ಸಾರಿಗೆಯನ್ನು ಬಲಪಡಿಸಬೇಕಿದೆ. ಈ ಭಾಗದಲ್ಲಿ ಮೆಟ್ರೊ, ಸುರಂಗ ರಸ್ತೆ ಹಾಗೂ ಮೇಲ್ಸೇತುವೆಗಳನ್ನು ನಿರ್ಮಿಸಬೇಕು.ಪಾದಾಚಾರಿಮಾರ್ಗಗಳನ್ನುಅಭಿವೃದ್ಧಿಪಡಿಸಬೇಕು.



ವೈ.ಬಿ.ಎಚ್. ಜಯದೇವ್, ಚಿಕ್ಕಸಂದ್ರ

'ಕಸದ ಸಮಸ್ಯೆಗೆ ಮುಕ್ತಿ ನೀಡಿ'

ಬೆಂಗಳೂರು ನಗರದ ಬಹುತೇಕ ಪಾದಚಾರಿ ಮಾರ್ಗಗಳು ಹಾಗೂ ರಸ್ತೆ ಬದಿಯಲ್ಲಿ ಕಸ ತಂದು ಹಾಕಲಾಗುತ್ತಿದೆ. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಬರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಈ ಬಾರಿಯ ಬಜೆಟ್‌ನಲ್ಲಿ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಏಕಬಳಕೆಯ ಪ್ಲಾಸ್ಟಿಕ್ ಉತ್ಪಾದನೆ ಮತ್ತು ಬಳಕೆಯನ್ನು ನಿಷೇಧಿಸಬೇಕು.



ವಿಶಾಲಾಕ್ಷಿ ಶರ್ಮಾ, ಶೇಷಾದ್ರಿಪುರ

'ಸುಸ್ಥಿರ ಅಭಿವೃದ್ಧಿ ಆಗಲಿ'

ಬೆಂಗಳೂರು ನಗರ ದಿನದಿಂದ ದಿನಕ್ಕೆ ವೇಗವಾಗಿ ಬೆಳವಣಿಗೆ ಆಗುತ್ತಿದೆ. ಆದ್ದರಿಂದ ಶುದ್ಧ ಕುಡಿಯುವ ನೀರು, ಗುಣಮಟ್ಟದ ಶಿಕ್ಷಣ, ವಿದ್ಯುತ್, ಒಳ ಚರಂಡಿ, ರಸ್ತೆ, ಪರಿಸರಸ್ನೇಹಿ ಸಾರಿಗೆ, ಉದ್ಯಾನಗಳ ಅಭಿವೃದ್ಧಿ, ಘನತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಶೌಚಾಲಯ, ಅತೀ ಮುಖ್ಯವಾಗಿ ಎಲ್ಲಾ ರೀತಿಯ ಮಾಲಿನ್ಯ ನಿಯಂತ್ರಣ ಮಾಡುವುದಕ್ಕೆ ಆದ್ಯತೆ ನೀಡಬೇಕು. ಬೆಂಗಳೂರಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಸುಸ್ಥಿರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬ್ರ್ಯಾಂಡ್ ಬೆಂಗಳೂರು ನಿರ್ಮಿಸಬೇಕು.



ಎನ್. ಮುತ್ತುರಾಜ್, ವಿಜಯನಗರ

'ಕಸವಿಲೇವಾರಿ, ಸ್ವಚ್ಛತೆಗೆ ಆದ್ಯತೆ ನೀಡಿ'

ಇತ್ತೀಚೆಗೆ ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಕಸವೇ ಕಾಣುತ್ತದೆ. ಖಾಲಿ ನಿವೇಶನಗಳಂತೂ ಕಸದ ತೊಟ್ಟಿಗಳಾಗಿವೆ. ಕಸ ವಿಲೇವಾರಿಯೂ ಸಹ ಸಮರ್ಪಕವಾಗಿ ಆಗುತ್ತಿಲ್ಲ. ಆದ್ದರಿಂದ ಸಾರ್ವಜನಿಕರು ಮನೆಯಲ್ಲಿಯೇ ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸಿ, ವಿಲೇವಾರಿ ಮಾಡಲು ಯೋಜನೆ ರೂಪಿಸಬೇಕು. ಬೆಂಗಳೂರು ನಗರದ ಸ್ವಚ್ಛತೆಯ ನಿರ್ವಹಣೆಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಗಮನ ಹರಿಸಬೇಕು.



ಕೆ.ಎಂ. ರುಕ್ಮಿಣಿ, ರಾಜರಾಜೇಶ್ವರಿನಗರ

ಬಜೆಟ್ ನಿರೀಕ್ಷೆ ನೀವೂ ಬರೆಯಿರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಬಜೆಟ್ ಮಂಡಿಸಲಿದ್ದಾರೆ. ಮೆಟ್ರೊ, ಸುರಂಗ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ, ರಸ್ತೆ, ಶೌಚಾಲಯ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿದಂತೆ ರಾಜಧಾನಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಅನುದಾನದ ಅಗತ್ಯವಿದೆ.

ಜೀವನಮಟ್ಟವನ್ನು ಸುಗಮಗೊಳಿಸಲು ಸರ್ಕಾರ ಬಜೆಟ್‌ನಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು. ತಮ್ಮ ನಿರೀಕ್ಷೆಗಳು ಏನು ಎಂಬುದನ್ನು ಜನರು ಹಂಚಿಕೊಳ್ಳಬಹುದು. 50 ಪದಗಳಿಗೆ ಮೀರದಂತೆ ಬರೆದು, ಭಾವಚಿತ್ರ ಸಮೇತ ಕಳುಹಿಸಬೇಕು.

ವಾಟ್ಸ್‌ಆ್ಯಪ್ ಸಂಖ್ಯೆ: **9606038256**

ಸಂಕ್ಷಿಪ್ತ ಸುದ್ದಿ

ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ನಗರದ ಅಂಜನಾನಗರದಲ್ಲಿರುವ ಸ್ಫೂರ್ತಿಧಾಮ ನಿರ್ವಹಿಸುವ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್ ಆಯೋಜಿಸಲಿರುವ ಅಂಬೇಡ್ಕರ್ ಹಬ್ಬ 2026ರಲ್ಲಿ ಪ್ರದಾನ ಮಾಡುವ ಎರಡು ಪ್ರಶಸ್ತಿಗಳಿಗೆ ಪ್ರಸ್ತಾವ ಆಹ್ವಾನಿಸಲಾಗಿದೆ.

ತಳಸ್ತರದವರ ಅಭಿವೃದ್ಧಿ ಮತ್ತು ಏಳಿಗೆಗಾಗಿ ದುಡಿದವರಿಗೆ ಒಂದು ಬೋಧಿವೃಕ್ಷ ಹಾಗೂ ಐದು ಬೋಧಿವರ್ಧನ ಪ್ರಶಸ್ತಿ ನೀಡಲಾಗುತ್ತದೆ. ಬೋಧಿವೃಕ್ಷ ಪ್ರಶಸ್ತಿಯೊಂದಿಗೆ ₹1 ಲಕ್ಷ ಹಾಗೂ ಬೋಧಿವರ್ಧನ ಪ್ರಶಸ್ತಿಯೊಂದಿಗೆ ತಲಾ ₹25 ಸಾವಿರ ನಗದು ಬಹುಮಾನವನ್ನೂ ನೀಡಲಾಗುತ್ತದೆ.

ಇಂಥವರ ಬಗ್ಗೆ ಮಾಹಿತಿ ಇದ್ದವರು, ಇಲ್ಲವೇ ಸಾಧನೆ ಮಾಡಿದವರು ವಿವರವನ್ನು ಮಾ.20ರೊಳಗೆ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 9108830438

ಲಾಲ್‌ಬಾಗ್ ಪ್ರವೇಶಕ್ಕೆ ಮತ್ತೊಂದು ಗೇಟ್

ಬೆಂಗಳೂರು: 'ಸಸ್ಯಕಾಶಿ' ಲಾಲ್‌ಬಾಗ್‌ಗೆ ಪ್ರವೇಶಿಸಲು ಮತ್ತೊಂದು ಗೇಟ್ ತೆರೆಯಲಾ-ಗುತ್ತಿದೆ. ಇದರಿಂದ ಉದ್ಯಾನದ ಪರಿಸರಕ್ಕೆ ಧಕ್ಕೆಯಾಗಲಿದೆ' ಎಂದು ಲಾಲ್‌ಬಾಗ್ ವಾಯುವಿಹಾರಿಗಳು ದೂರಿದ್ದಾರೆ.

'ಸರ್ಕಾರ ಇದಕ್ಕೆ ಅವಕಾಶ ನೀಡಬಾರದು' ಎಂದು ವಾಯು ವಿಹಾರಿಗಳಾದ ಶಿವಕುಮಾರ್, ಅಶೋಕ್ ಒತ್ತಾಯಿಸಿದ್ದಾರೆ.

ವಾಹನಗಳ ಸಂಚಾರ ಕಡಿಮೆ ಮಾಡುವ ಉದ್ದೇಶದಿಂದ ಇಲಾಖೆಯ ಕ್ಯಾಂಟೀನ್ ಪಕ್ಕದಲ್ಲಿ ನೂತನ ಗೇಟ್ ತೆರೆಯುವ ಚಿಂತನೆ ಇದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ರೇಣುಕಾಚಾರ್ಯ ಜಯಂತಿ ಮಾ. 1ಕ್ಕೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಾ. 1ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಯುವ ವಿಭಾಗದ ಅಧ್ಯಕ್ಷ ಜಿ. ಮನೋಹರ್ ಅಬ್ಬಿಗೆರೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾ.1ರಂದು ಬೆಳಿಗ್ಗೆ 10ಗಂಟೆಗೆ ಹಡ್ಸನ್ ವೃತ್ತದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ರೇಣುಕಾಚಾರ್ಯರ ಪ್ರತಿಮೆಯ ಮೆರವಣಿಗೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದು, ರೇವಣ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಶಿವರಾಜ ಎಸ್. ತಂಗಡಗಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ತಾಯಿ ಎದುರೇ ರೌಡಿಶೀಟರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಣಿಸಂದ್ರದ ಅವಲಜ್ಯೋತಿ ಲೇಔಟ್‌ನಲ್ಲಿ ರೌಡಿಶೀಟರ್ ಒಬ್ಬನನ್ನು ತಾಯಿಯ ಎದುರೇ ದುಷ್ಕರ್ಮಿಗಳು ಕೊಚ್ಚಿ ಕೊಲೆ ಮಾಡಿದ್ದಾರೆ.


ಪವನ್

ಡಿ.ಜೆ.ಹಳ್ಳಿ ಠಾಣಾ ವ್ಯಾಪ್ತಿಯ ಪವನ್ ಕುಮಾರ್ (28) ಕೊಲೆಯಾದ ವ್ಯಕ್ತಿ. ಮೂರು ವರ್ಷಗಳ ಹಿಂದೆ ನಡೆದಿದ್ದ ರೌಡಿಶೀಟರ್ ಕದಿರೇಶ್ ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿದ್ದ ಪವನ್, ಕಳೆದ ಮೇ ತಿಂಗಳಲ್ಲಿ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ. ಬೇಕರಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ. ರಾತ್ರಿ ಬೇಕರಿ ಬಂದ್ ಮಾಡಿ ಮನೆಗೆ ಬರುವಾಗ ಮೂರು ಬೈಕ್‌ಗಳಲ್ಲಿ ದುಷ್ಕರ್ಮಿಗಳು ಹಿಂಬಾಲಿಸಿಕೊಂಡು ಬಂದಿದ್ದಾರೆ. ಪವನ್ ಮನೆಯ ಮುಂದೆ ವಾಹನ ನಿಲ್ಲಿಸುತ್ತಿದ್ದಂತೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ಪವನ್ ವಿರುದ್ಧವೂ ಹಲವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದರು.

'ಹೆಲ್ಮೆಟ್ ಧರಿಸಿ ಬೈಕ್‌ನಲ್ಲಿ ಬಂದಿದ್ದ ಐದು ಮಂದಿ ಕೃತ್ಯವೆಸಗಿ ಪರಾರಿಯಾಗಿರುವ ಬಗ್ಗೆ ಮಾಹಿತಿ ಇದೆ. ಆರೋಪಿಗಳ ಬಗ್ಗೆ ಸುಳಿವು ದೊರೆತಿದ್ದು, ಪತ್ತೆಗೆ ನಾಲ್ಕು ತಂಡಗಳನ್ನು ರಚಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಮಿಥುನ್ ಕುಮಾರ್ ತಿಳಿಸಿದರು.

ಸ್ಥಳಕ್ಕೆ ಸಂಪಿಗೆಹಳ್ಳಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

'ಕಣ್ಣ ಮುಂದೆಯೇ ಕೊಲೆ ಮಾಡಿದ್ರು...': 'ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ಮಗ ಎಂಟು ತಿಂಗಳ ಹಿಂದೆಯಷ್ಟೇ ಬಿಡುಗಡೆಯಾಗಿದ್ದ. ಬೇಕರಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ. ಯಾರ ಸಹವಾಸಕ್ಕೂ ಹೋಗುತ್ತಿರಲಿಲ್ಲ. ರಾತ್ರಿ ಬೇಕರಿ ಬಾಗಿಲು ಹಾಕಿ ಮನೆಗೆ ಬರುತ್ತಿರುವುದಾಗಿ ಫೋನ್ ಮಾಡಿ ಹೇಳಿದ್ದ. ಮನೆಯ ಗೇಟ್ ಬಳಿ ಬೈಕ್ ನಿಲ್ಲಿಸುತ್ತಿದ್ದಾಗ, ನನ್ನ ಕಣ್ಣಮುಂದೆಯೇ ಮಗನನ್ನು ಕೊಚ್ಚಿ ಕೊಂದರು. ನನಗೆ ಕಾಪಾಡಲೂ ಆಗಲಿಲ್ಲ. ಹಳೆಯ ದ್ವೇಷ ಇಟ್ಟುಕೊಂಡು ಈ ಕೃತ್ಯ ಎಸಗಿದ್ದಾರೆ. ಪ್ರೇಮ್ ಎಂಬಾತ ಕೊಲೆ ಮಾಡಿಸಲು ಸಂಚು ಮಾಡುತ್ತಿದ್ದಾನೆ ಎಂದು ಮಗ ಹೇಳುತ್ತಿದ್ದ. ಆದ್ದರಿಂದ ಕೆಲ ತಿಂಗಳು ಬೇರೆ ಊರಲ್ಲಿ ಸಂಬಂಧಿಕರ ಮನೆಯಲ್ಲಿ ಇಟ್ಟಿದ್ದೆ. ಇತ್ತೀಚೆಗಷ್ಟೇ ಕರೆದುಕೊಂಡು ಬಂದಿದ್ದೆ' ಪವನ್ ಕುಮಾರ್ ತಾಯಿ ಕೋಮಲಾ ಮಾಧ್ಯಮಗಳಿಗೆ ಹೇಳಿದ್ದಾರೆ.

ನಟಿ ಸೇರಿ 11 ಮಂದಿ ಬಂಧನ

ನಿರ್ದೇಶಕನ ಅಪಹರಿಸಿ, ಹಣ–ನಗದು ದೋಚಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ದೇಶಕನನ್ನು ಅಪಹರಿಸಿ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ಸೇರಿ 11 ಮಂದಿಯನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭೀಮಾ ಸಿನಿಮಾ ನಟಿ ಐಶ್ವರ್ಯ (30), 'ಇವೆಂಟ್ ಮ್ಯಾನೇಜ್‌ಮೆಂಟ್' ಕೆಲಸ ಮಾಡುತ್ತಿದ್ದ ಆಶೀರ್ವಾದ್ (26), ಸಿನಿಮಾ ಪ್ರೊಡಕ್ಷನ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಲಕ್ಷ್ಮೀನಾರಾಯಣ (36), ಕೋಳಿ ಫಾರ್ಮ್ ನಡೆಸುತ್ತಿದ್ದ ಸುಜನ್(21), ಪ್ರಿಂಟಿಂಗ್ ವ್ಯವಹಾರ ನಡೆಸುವ ಚರಣ್ (26), ಎಲೆಕ್ಟ್ರಿಷಿಯನ್‌ಗಳಾದ ಅರ್ಸಲಾನ್ (20), ಮೊಹಮ್ಮದ್ ಅರೀಫ್ (31), ಗಾರೆ ಕೆಲಸದ ಉಸ್ತುವಾರಿ ಧ್ರುವಾ (26), ಕಾಲೇಜು ವಿದ್ಯಾರ್ಥಿಗಳಾದ ಸಂಜಯ್(24), ಶಾಹಿದ್ ಅಹ್ಮದ್ (21), ರಿಯಾನ್ (20) ಅವರನ್ನು ಬಂಧಿಸಲಾಗಿದೆ. ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ್ದ ಆರು ಫೋನ್‌ಗಳು, ಚಿನ್ನಾಭರಣಗಳು, ಕಾರು ಮತ್ತು ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಆಡುಗೋಡಿ ನಂಜಪ್ಪ ಲೇಔಟ್‌ನಲ್ಲಿ ಅನೀಶ್ ವಾಸವಾಗಿದ್ದರು. ಕೆಲ ತಿಂಗಳ ಹಿಂದೆ ಬೆಂಗಳೂರಿನಿಂದ ಮುಂಬೈಗೆ ಸ್ಥಳಾಂತರಗೊಂಡಿದ್ದರು. ಇತ್ತೀಚೆಗೆ 'ಜೀವದ ಭಾಷೆ' ಎಂಬ ಕನ್ನಡ ಸಿನಿಮಾ ನಿರ್ದೇಶಿಸಿದ್ದು, ಕಾರಣಾಂತರಗಳಿಂದ ಸಿನಿಮಾ ಬಿಡುಗಡೆಯಾಗಿಲ್ಲ. ಈ ಸಿನಿಮಾಕ್ಕೆ ಲಕ್ಷ್ಮೀನಾರಾಯಣ ಅವರು ₹6 ಲಕ್ಷ ಹೂಡಿಕೆ ಮಾಡಿದ್ದರು. ಸಿನಿಮಾ ವಿಚಾರವಾಗಿ ಇಬ್ಬರಲ್ಲಿ ವೈಮನಸ್ಸು ಉಂಟಾಗಿತ್ತು.



ಈ ವೇಳೆ ಆಶೀರ್ವಾದ್ ಅಲಿಯಾಸ್ ಆಶಿ ಎಂಬಾತನ ಪರಿಚಯವಾಗಿತ್ತು. ಕೆಲ ದಿನಗಳ ನಂತರ ಆಶೀರ್ವಾದ್ ನಿರ್ದೇಶಕನಿಂದ ₹ 2.5 ಲಕ್ಷ ಸಾಲ ಪಡೆದಿದ್ದ. ಕೆಲ ತಿಂಗಳ ಬಳಿಕ ಹಣ ವಾಪಸ್ ಕೇಳಿದಾಗ ಜೀವ ಬೆದರಿಕೆ ಹಾಕಿದ್ದ, ಆದರಿಂದ ಅನೀಶ್ ಆನ್‌ಲೈನ್ ಮೂಲಕ ದೂರು ನೀಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಈ ನಡುವೆ ನಟಿ ಐಶ್ವರ್ಯ ಬಳಿ ತನ್ನ ಕಾರು ಮಾರಾಟ ಮಾಡುವ ಬಗ್ಗೆ ಅನೀಶ್ ಹೇಳಿಕೊಂಡಿದ್ದರು. ಈ ವಿಚಾರ ತಿಳಿದ ಆರೋಪಿಗಳು, ಕಾರು ಮಾರಾಟ ಮಾಡಿಸುವುದಾಗಿ ಐಶ್ವರ್ಯ ಮೂಲಕ ಹೇಳಿ, ಮುಂಬೈನಿಂದ ಬೆಂಗಳೂರಿಗೆ ಕರೆಸಿಕೊಂಡಿದ್ದರು. ಇಂದಿರಾನಗರದ ಗ್ಯಾರೇಜ್ ಬಳಿ ಅನೀಶ್ ಬಂದಾಗ, ಐಶ್ವರ್ಯ ಮತ್ತು ಶಾಹಿದ್, ಇತರ ಆರೋಪಿಗಳನ್ನು ಪರಿಚಯಿಸಿ ಹೋಗಿದ್ದಾರೆ.

ನಂತರ ಇತರ ಆರೋಪಿಗಳು ಅನೀಶ್‌ರನ್ನು ಅಪಹರಿಸಿ ಬ್ಯಾಟರಾಯನಪುರದ ಹಳ್ಳಿಯ ಮನೆಯೊಂದರಲ್ಲಿ ಬಂಧನದಲ್ಲಿಟ್ಟು, ಕ್ರಿಕೆಟ್ ಸ್ಟಂಪ್ ಹಾಗೂ ಹಾಕಿ ಸ್ಟಿಕ್‌ನಿಂದ ಹಲ್ಲೆ ಮಾಡಿ, ಅವರು ಧರಿಸಿದ್ದ 20 ಗ್ರಾಂ ಚಿನ್ನದ ಒಡವೆ ಮತ್ತು ₹30 ಸಾವಿರ ನಗದು ದೋಚಿದ್ದರು. ನಂತರ ಅವರನ್ನು ಕಾರಿನಲ್ಲಿ ತುಮಕೂರಿನ ಮಂದಾರಗಿರಿ ಬೆಟ್ಟದ ಬಳಿ ಕರೆದುಕೊಂಡು ಹೋಗಿ ಅಲ್ಲಿಯೂ ಹಲ್ಲೆ ಮಾಡಿ, ಕಳುಹಿಸಿದ್ದರು. ಬಳಿಕ ಅನೀಶ್ ಈ ಕುರಿತು ಪೊಲೀಸರಿಗೆ ದೂರು ನೀಡಿದ್ದರು.

ದೂರಿನನ್ವಯ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ತನಿಖೆ ಮುಂದುವರಿದಿದೆ ಎಂದು ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜೀವಾವಧಿ ಶಿಕ್ಷೆ ಎತ್ತಿ ಹಿಡಿದ ಹೈಕೋರ್ಟ್

'ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾನೆ' ಎಂದು ಶಂಕಿಸಿ ವ್ಯಕ್ತಿಯೊಬ್ಬನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಂದಿದ್ದ ಅಪರಾಧಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಅಪರಾಧಿಯಾಗಿರುವ ಫ್ರೇಜರ್ ಟೌನ್ ನಿವಾಸಿ ಅಲೆಕ್ಸ್ (53) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೃತ ವ್ಯಕ್ತಿ ಇಮ್ರಾನ್ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವುದನ್ನು ಪ್ರತ್ಯಕ್ಷದರ್ಶಿ ಸಾಕ್ಷಿ ಹೇಳಿಕೆಯಲ್ಲಿ ದೃಢಪಡಿಸಿದ್ದಾರೆ. ಇಮ್ರಾನ್ ಸಾಯುವ ಮುನ್ನ ನೀಡಿರುವ ಹೇಳಿಕೆಯೂ ಅಪರಾಧ ಎಸಗಿರುವುದನ್ನು ಸಾಬೀತುಪಡಿಸಿದೆ. ಆದ್ದರಿಂದ, ಸೆಷನ್ಸ್ ನ್ಯಾಯಾಲಯ ನೀಡಿರುವ ಶಿಕ್ಷೆಯ ತೀರ್ಪಿನಲ್ಲಿ ಮಧ್ಯಪ್ರವೇಶ ಮಾಡಬೇಕಾದ ಅಗತ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ. ಅಲೆಕ್ಸ್‌ಗೆ ಕೊಲೆ ಆರೋಪದಡಿ ಜೀವಾವಧಿ ಶಿಕ್ಷೆ ವಿಧಿಸಿ ನಗರದ 26ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ 2022ರ ಅಕ್ಟೋಬರ್ 1ರಂದು ಆದೇಶಿಸಿತ್ತು.

ಕಾಂಗ್ರೆಸ್ ಕಾರ್ಯಕರ್ತೆ ವಿರುದ್ಧ ದೂರು

ಬೆಂಗಳೂರು: ಫೇಸ್‌ಬುಕ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅಶ್ಲೀಲವಾಗಿ ಪೋಸ್ಟ್ ಮಾಡಿದ ಕಾಂಗ್ರೆಸ್ ಕಾರ್ಯಕರ್ತೆ ಬಿಂದು ಸಿರಿ ಎಂಬುವರ ವಿರುದ್ಧ ಬಿಜೆಪಿ ಕಾರ್ಯಕರ್ತರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಬಿಂದು ಸಿರಿ ಎಂಬುವವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಎಐ ಸ್ಕ್ರೀನ್ ಫೋಟೊ ಬಳಸಿ ಪ್ರಧಾನಿ ಮೋದಿ ಹೆಸರು ಉಲ್ಲೇಖಿಸಿ ಅಶ್ಲೀಲವಾಗಿ ಪೋಸ್ಟ್ ಮಾಡಿದ್ದಾರೆ. ಇದು ಸಾರ್ವಜನಿಕರಲ್ಲಿ ಗೊಂದಲ ಮತ್ತು ದ್ವೇಷ ಬಿತ್ತಲು ಪ್ರಚೋದನೆ ನೀಡುತ್ತದೆ. ಪ್ರಧಾನಿ ವಿರುದ್ಧ ಉದ್ದೇಶಪೂರ್ವಕವಾಗಿ ವ್ಯವಸ್ಥಿತ ಅಪಪ್ರಚಾರ ಮಾಡಿದೆ. ಹೀಗಾಗಿ ಪೋಸ್ಟ್ ಮಾಡಿರುವುದು ಮತ್ತು ಆ ಪೋಸ್ಟ್ ಹಂಚಿಕೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯ ಸಂಚಾಲಕ ಪ್ರಶಾಂತ್ ಮಾಕನೂರು ದೂರು ನೀಡಿದ್ದಾರೆ.

ದೂರು ಸ್ವೀಕರಿಸಿದ್ದು, ಕಾನೂನು ತಜ್ಞರ ಸಲಹೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗುವುದು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ರಾಜಿ ಪ್ರಕ್ರಿಯೆ: ಲಿಖಿತ ವಿವರಣೆಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಾಯುಕ್ತ ಎಡಿಜಿಪಿ ಮತ್ತು ಎಸ್ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಬೆದರಿಕೆ ಹಾಕಿದ್ದಲ್ಲದೆ, ಮಾಧ್ಯಮಗಳ ಮುಖಾಂತರ ತನ್ನ ಕಕ್ಷಿದಾರ ಹಾಗೂ ಲೋಕಾಯುಕ್ತದ ಮರ್ಯಾದೆಗೆ ಎಚ್.ಡಿ.ಕುಮಾರಸ್ವಾಮಿ ಧಕ್ಕೆ ಉಂಟು ಮಾಡಿದ್ದಾರೆ. ಹಾಗಾಗಿ, ರಾಜಿ ಸಂಧಾನದ ಪ್ರಕ್ರಿಯೆಗೆ ಮೊದಲು ಅವರು ಕೋರ್ಟ್‌ಗೆ ಲಿಖಿತ ವಿವರಣೆ ನೀಡಲಿ' ಎಂದು ಚಂದ್ರಶೇಖರ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಆರೋಪದ ಪ್ರಕರಣದಲ್ಲಿ, 'ನಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಮತ್ತು ಸುರೇಶ್ ಬಾಬು ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಚಂದ್ರಶೇಖರ್ ಪರ ಹೈಕೋರ್ಟ್ ವಕೀಲ ಎಂ.ಎಚ್. ಹಿದಾಯತ್ ಉಲ್ಲಾ, 'ಕುಮಾರಸ್ವಾಮಿ ಅವರು ಲಿಖಿತ ವಿವರಣೆ ನೀಡಲಿ. ನಂತರ ನಮ್ಮ ಕಕ್ಷಿದಾರರು ಅದನ್ನು ಪರ್ಯಾಲೋಚಿಸಿ ಮುಂದಿನ 'ಇಂಗಿತವನ್ನು' ತಿಳಿಸುತ್ತಾರೆ' ಎಂದರು.



ಕುಮಾರಸ್ವಾಮಿ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷ, 'ರಾಜಿ ಪ್ರಕ್ರಿಯೆಗೆ ನಾವು ತಯಾರಿದ್ದು, ಮುಂದಿನ ದಿನದಲ್ಲಿ ಕೋರ್ಟ್ ನಿರ್ದೇಶಿಸಿದರೆ ಬಿಡಲು ಸಿದ್ಧರಿದ್ದೇವೆ' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇಬ್ಬರೂ ಕುಳಿತು ಪರಸ್ಪರ ಚರ್ಚಿಸಿ ನಂತರ ಒಂದು ತೀರ್ಮಾನಕ್ಕೆ ಬನ್ನಿ. ನಂತರ ಕೋರ್ಟ್ ತನ್ನ ವಿವೇಚನೆಯನ್ನು ನಿರ್ಧಾರ ಪ್ರಕಟಿಸಲಿದೆ' ಎಂದು ವಿಚಾರಣೆಯನ್ನು ಮಾರ್ಚ್ 16ಕ್ಕೆ ಮುಂದೂಡಿತು.

ದೂರು: 'ಕುಮಾರ ಸ್ವಾಮಿ ನನ್ನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿ ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿ ಚಂದ್ರಶೇಖರ್, ಸಂಜಯನಗರ ಪೊಲೀಸ್ ಠಾಣೆಯಲ್ಲಿ 2024ರಲ್ಲಿ ದೂರು ದಾಖಲಿಸಿದ್ದರು. ಈ ದೂರನ್ನು ಆಧರಿಸಿ ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 224 (ಸರ್ಕಾರಿ ನೌಕರರಿಗೆ ಅವರ ಅಧಿಕೃತ ಕರ್ತವ್ಯಗಳ ಮೇಲೆ ಪ್ರಭಾವ ಬೀರಲು ಬೆದರಿಕೆ ಹಾಕಿದ) ಆರೋಪದಡಿ ಎಫ್‌ಐಆರ್ ದಾಖಲಿಸಲಾಗಿದೆ.

ಕಾರು ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ರಸ್ತೆ ದಾಟುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ.

ಅಮೃತಹಳ್ಳಿ ಅಶ್ವತಕಟ್ಟೆ ರಸ್ತೆ ನಿವಾಸಿ ನಾಗರಾಜ (57) ಮೃತರು.

ನಾಗರಾಜ ಅವರು ಕಿರಾಣಿ ಅಂಗಡಿ ಹೊಂದಿದ್ದರು. ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ಅವರು, ಬ್ಯಾಟರಾಯನಪುರ ಜಂಕ್ಷನ್ ಬಳಿ ಬೆಳಗಿನ ಜಾವ ರಸ್ತೆ ದಾಟುತ್ತಿದ್ದ ವೇಳೆ ಅತಿ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಸ್ಥಳೀಯರ ಸಹಕಾರದೊಂದಿಗೆ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಹೆಬ್ಬಾಳ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

'5ಕೆ ಸೇಫ್‌ಎಥಾನ್' ಮಾರ್ಚ್ 7ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಸುರಕ್ಷತೆಗಾಗಿ ಜನಜಾಗೃತಿ ಮೂಡಿಸಲು ಮಾರ್ಚ್ 7ರಂದು ನಗರದಲ್ಲಿ '5ಕೆ ಸೇಫ್-ಎ-ಥಾನ್' ಕಾರ್ಯಕ್ರಮವನ್ನು ಸಾರಿಗೆ ಇಲಾಖೆ ಆಯೋಜಿಸಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಪೊಲೀಸ್ ಇಲಾಖೆ ಹಾಗೂ ಕ್ರೀಡೆ ಮತ್ತು ಯುವಜನ ಸಬಲೀಕರಣ ಇಲಾಖೆಯ ಸಹಯೋಗದೊಂದಿಗೆ 'ನಮ್ಮ ರಸ್ತೆ - ನಮ್ಮ ಸುರಕ್ಷತೆ' ಎಂಬ ಧ್ಯೇಯ ವಾಕ್ಯದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

ದೇಶದಲ್ಲಿ ವರ್ಷಕ್ಕೆ 1.70 ಲಕ್ಷ ಜನರು ಅಪಘಾತದಿಂದ ಮೃತರಾಗುತ್ತಿದ್ದಾರೆ. 4.70 ಲಕ್ಷ ಜನರು ಗಾಯಗೊಂಡು ಅಂಗವಿಕಲರಾಗುತ್ತಿದ್ದಾರೆ. ರಾಜ್ಯದಲ್ಲಿ ವರ್ಷಕ್ಕೆ ಅಪಘಾತದಲ್ಲಿ 11 ಸಾವಿರ ಜನರು ಸಾವಿಗೀಡಾಗುತ್ತಿದ್ದು, 25 ಸಾವಿರ ಜನರು ಅಂಗವೈಕಲ್ಯ ಹೊಂದುತ್ತಿದ್ದಾರೆ ಎಂದು ವಿವರಿಸಿದರು.


ಅತಿವೇಗ, ಸಂಚಾರ ನಿಯಮಗಳ ಉಲ್ಲಂಘನೆ ಮತ್ತು ಅಜಾಗರೂಕತೆಯಿಂದಾಗಿ ಅಪಘಾತಗಳು ಉಂಟಾಗುತ್ತಿವೆ. ಚಾಲಕರು ಜಾಗೃತಗೊಂಡರಷ್ಟೇ ಅಪಘಾತ ಕಡಿಮೆ ಮಾಡಲು ಸಾಧ್ಯ. ರಾಜ್ಯದಲ್ಲಿ 747 'ಬ್ಲ್ಯಾಕ್ ಸ್ಪಾಟ್'ಗಳನ್ನು ಗುರುತಿಸಲಾಗಿದ್ದು, ಅಪಘಾತ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಮಾರ್ಚ್ 7ರಂದು ಬೆಳಿಗ್ಗೆ 6ರಿಂದ 9 ಗಂಟೆವರೆಗೆ ಕಂಠೀರವ ಕ್ರೀಡಾಂಗಣದಲ್ಲಿ 'ಸೇಫ್ ಎ ಥಾನ್' ನಡೆಯಲಿದೆ. ನಡಿಗೆ, ಸೈಕ್ಲಿಂಗ್ ಅಥವಾ ಓಟದ ಮೂಲಕ ಈ ಅಭಿಯಾನದಲ್ಲಿ ಪಾಲ್ಗೊಂಡು ಸುರಕ್ಷಿತ ಸಂಚಾರದ ಬಗ್ಗೆ ಪ್ರತಿಜ್ಞೆ ಮಾಡಬಹುದು.

ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಆಸಕ್ತರು www.saferoadskarnataka.com ಜಾಲತಾಣದ ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಾರಿಗೆ ಆಯುಕ್ತ ಎ.ಎಂ. ಯೋಗೀಶ್, ಹೆಚ್ಚುವರಿ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಬಿ.ಪಿ. ಉಮಾಶಂಕರ್, ಎಂ.ಪಿ. ಓಂಕಾರೇಶ್ವರಿ, ಪುರುಷೋತ್ತಮ, ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ. ವಿಜಯಭಾಸ್ಕರನ್ ಉಪಸ್ಥಿತರಿದ್ದರು.

ಎಲೆಕ್ಟ್ರಿಕ್ ಬಸ್‌ನಿಂದ ತೊಂದರೆ


ರಾಮಲಿಂಗಾರೆಡ್ಡಿ

'1,750 ಎಲೆಕ್ಟ್ರಿಕ್ ಬಸ್‌ಗಳು ಬಿಎಂಟಿಸಿ ಅಡಿಯಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸಂಚರಿಸುತ್ತಿವೆ. ಕಳೆದ ಎರಡೂವರೆ ವರ್ಷಗಳಲ್ಲಿ 14,000 ಬಾರಿ ಬ್ರೇಕ್ ಡೌನ್ ಆಗಿವೆ. ಬಿಎಂಟಿಸಿಯ ಡೀಸೆಲ್ ಬಸ್‌ಗಳು 5,700 ಇದ್ದು, ಎರಡೂವರೆ ವರ್ಷದಲ್ಲಿ ಕೇವಲ ನೂರು ಬಾರಿ ಬ್ರೇಕ್ ಡೌನ್ ಆಗಿವೆ. ನಮಗೆ ಎಲೆಕ್ಟ್ರಿಕ್ ಬಸ್‌ಗಳು ಬೇಕು. ಆದರೆ, ಕಂಪನಿಗಳು ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಅದಕ್ಕಾಗಿ ಪತ್ರ ಬರೆಯಲಾಗಿದೆ' ಎಂದು ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಬಾಳೆತೋಟದಲ್ಲಿ ಮಹಿಳೆ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಲ್‌ನಿಂದ ಕುತ್ತಿಗೆ ಬಿಗಿದು, ಪಶ್ಚಿಮ ಬಂಗಾಳದ ಸೋನಾಲಿ ಕಥುವಾ (30) ಅವರನ್ನು ಸಿದ್ದಾಪುರದಲ್ಲಿ ಕೊಲೆ ಮಾಡಲಾಗಿದೆ.

ಸಿದ್ದಾಪುರದ ಬಾಳೆ ತೋಟದಲ್ಲಿ ಸೋನಾಲಿ ಅವರ ಮೃತದೇಹ ಪತ್ತೆಯಾಗಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ವರ್ತೂರು ಠಾಣೆ ಪೊಲೀಸರು ಮಾಹಿತಿ ನೀಡಿದರು.

ವರ್ಷದ ಹಿಂದೆ ಸೋನಾಲಿ ಕಥುವಾ, ಪತಿ ಬಾಬು ಶೇಕ್ ಮತ್ತು ಕುಟುಂಬ ಸದಸ್ಯರ ಜತೆ ನಗರಕ್ಕೆ ಬಂದಿದ್ದು, ಸಿದ್ದಾಪುರದ ರಾಯಲ್ ಇಂಗ್ಲಿಷ್ ಶಾಲೆ ಸಮೀಪದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಬಾಬು ಶೇಕ್, ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದು, ಬ್ರೋಕ್‌ಫೀಲ್ಡ್ ವಾಲ್‌ಸನ್ಸ್ ಫೆಸಿಲಿಟಿ ಸಲ್ಯೂಷನ್ ನಲ್ಲಿ ಸೋನಾಲಿ ಹೌಸ್ ಕೀಪಿಂಗ್ ಕೆಲಸ ಮಾಡಿಕೊಂಡಿದ್ದರು.

ಈ ಮಧ್ಯೆ ಬುಧವಾರ ರಾತ್ರಿ 7.30ರ ಸುಮಾರಿಗೆ ಮನೆಗೆ ಬಂದಿದ್ದ ಸೋನಾಲಿ, 'ಕೆಲಸದ ಸ್ಥಳದಲ್ಲಿ ಮೊಬೈಲ್ ಬಿಟ್ಟು ಬಂದಿದ್ದೇನೆ' ಎಂದು, ಪತಿಯ ಮೊಬೈಲ್ ತೆಗೆದುಕೊಂಡು ವಾಪಸ್ ಕೆಲಸದ ಸ್ಥಳಕ್ಕೆ ಹೋಗಿದ್ದಾರೆ. ಬಳಿಕ ಮನೆಗೆ ಬಂದಿಲ್ಲ. ಕೆಲ ಹೊತ್ತಿನ ಬಳಿಕ ಆಕೆ ಮತ್ತು ಪತಿಯ ಮೊಬೈಲ್‌ಗೆ ಕರೆ ಮಾಡಿದಾಗ ಎರಡೂ ಮೊಬೈಲ್‌ಗಳು ಸ್ವಿಚ್ಡ್ ಆಫ್ ಆಗಿರುವುದು ಗೊತ್ತಾಗಿದೆ. ಬಳಿಕ ಕುಟುಂಬ ಸದಸ್ಯರು ಎಲ್ಲೆಡೆ ಹುಡುಕಾಟ ನಡೆಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.

ಈ ಮಧ್ಯೆ ಬಾಳೆ ತೋಟದಲ್ಲಿ ಸೋನಾಲಿ ಕಥುವಾ ಮೃತದೇಹ ಕಂಡ ಸ್ಥಳೀಯರು ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಕುತ್ತಿಗೆಗೆ ವೇಲ್‌ನಿಂದ ಬಿಗಿದು ಹತ್ಯೆಗೈದಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಆರೋಪಿಗಳ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಉರುಸ್: ಪ್ರವಾಸ ಮುಂದೂಡಲು ಮನವಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಸಂಸ್ಥೆಯಲ್ಲಿ ಮಾರ್ಚ್ 4ರಿಂದ 6ರ ವರೆಗೆ ಉರುಸ್ ನಡೆಯಲಿದ್ದು, ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಸಾವಿರಾರು ಭಕ್ತರು ವಾಹನಗಳಲ್ಲಿ ಬರಲಿದ್ದಾರೆ. ಹೀಗಾಗಿ ಮುಳ್ಳಯ್ಯನಗಿರಿ ಮತ್ತು ಸುತ್ತಮುತ್ತಲಿನ ತಾಣಗಳಿಗೆ ಪ್ರವಾಸಿಗರು ಪ್ರವಾಸವನ್ನು ಮುಂದೂಡುವುದು ಸೂಕ್ತ ಎಂದು ಜಿಲ್ಲಾಡಳಿತ ತಿಳಿಸಿದೆ.

ಅಲ್ಲಿಗೆ ತೆರಳುವ ರಸ್ತೆ ತುಂಬಾ ಕಿರಿದಾಗಿದೆ. ಉರುಸ್ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುವುದರಿಂದ ಅವಘಡ ಸಂಭವಿಸುವ ಸಾಧ್ಯತೆ ಇದೆ. ಉರುಸ್ ಸಂಬಂಧ ಆಗಮಿಸುವ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ಉರುಸ್ ಕಾರ್ಯಕ್ರಮದ ಭಕ್ತರನ್ನು ಹೊರತುಪಡಿಸಿ ಇತರೆ ಪ್ರವಾಸಿಗರು ಪ್ರವಾಸ ಮುಂದೂಡಿ ಸಹಕರಿಸುವಂತೆ ಜಿಲ್ಲಾಧಿಕಾರಿ ಕೋರಿದ್ದಾರೆ.

ಹಾವು ಕಡಿತಕ್ಕೆ 'ಆ್ಯಂಟಿ ವೆನಮ್' ಸಿದ್ಧ

ಪಶು ವೈದ್ಯಕೀಯ ವಿ.ವಿ ಆರೋಗ್ಯ ಮತ್ತು ಜೈವಿಕ ಸಂಸ್ಥೆಯಿಂದ ಅಭಿವೃದ್ಧಿ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದ ಆರೋಗ್ಯ ಮತ್ತು ಜೈವಿಕ ಸಂಸ್ಥೆಯು ವಿಷಕಾರಿ ಹಾವುಗಳ ಕಡಿತಕ್ಕೆ 'ಆ್ಯಂಟಿ ವೆನಮ್' ಔಷಧ ಸಿದ್ಧಪಡಿಸಿದೆ. ಇದರ ಪರೀಕ್ಷೆಯಿಂದ ಉತ್ತಮ ಫಲಿತಾಂಶ ಕೂಡಾ ಬಂದಿದೆ.

2015ರಲ್ಲಿ ಆರಂಭಗೊಂಡ ಈ ಯೋಜನೆ ಈಗ ಪೂರ್ಣಗೊಂಡಿದೆ. ಈಗಾಗಲೇ ಇಲಿ, ಗಿನಿ ಹಂದಿಗಳ ಮೇಲೆ ಪರೀಕ್ಷೆ ನಡೆಸಲಾಗಿದೆ. ಶೀಘ್ರದಲ್ಲೇ ಹಂದಿ, ಕುರಿಗಳ ಮೇಲೂ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಆನಂತರ ತಂತ್ರಜ್ಞಾನವನ್ನು ದೊಡ್ಡ ಮಟ್ಟದಲ್ಲಿ ವಾಣಿಜ್ಯ ಬಳಕೆಗೆ ನೀಡಲು ಸಿದ್ಧತೆ ನಡೆದಿದೆ. ಈ ಸಂಬಂಧ ಈಗಾಗಲೇ ವಿವಿಯಿಂದ ಸರ್ಕಾರಕ್ಕೆ ವರದಿ ಕೂಡ ಸಲ್ಲಿಸಲಾಗಿದೆ.

> ನಮ್ಮ ವಿಜ್ಞಾನಿಗಳು ಛಲಬಿಡದೇ ಶ್ರಮಿಸಿ 'ಆ್ಯಂಟಿ ವೆನಮ್' ಅಭಿವೃದ್ಧಿಪಡಿಸಿದ್ದಾರೆ. ಇದು ನಮ್ಮ ಸಂಸ್ಥೆಯ ವಿಜ್ಞಾನಿಗಳ ಕಾರ್ಯಕ್ಷಮತೆಗೆ ಸಾಕ್ಷಿ
>
> **ಪ್ರೊ. ಕೆ.ಸಿ. ವೀರಣ್ಣ,** ಕುಲಪತಿ, ಕರ್ನಾಟಕ ಪಶು ವೈದ್ಯಕೀಯ ವಿ.ವಿ



ಮುಖ್ಯಾಂಶಗಳು

- 2015ರಲ್ಲಿ ಯೋಜನೆ ಆರಂಭ
- ಯೋಜನೆಗೆ ₹50 ಲಕ್ಷ ಅನುದಾನ
- ಪರೀಕ್ಷೆ ಯಶಸ್ವಿ, ಉತ್ತಮ ಫಲಿತಾಂಶ

'ಆ್ಯಂಟಿ ವೆನಮ್' ಸಿದ್ಧಪಡಿಸಲು ಸರ್ಕಾರವು 2015ರಲ್ಲಿ ₹50 ಲಕ್ಷ ಅನುದಾನವನ್ನು ವಿಶ್ವವಿದ್ಯಾಲಯಕ್ಕೆ ನೀಡಿತ್ತು. ನಾಗರಹಾವು, ರಸೆಲ್ ವೈಪರ್, ಕಾಳಿಂಗಸರ್ಪ ಹಾಗೂ ಕೊಳಕು ಮಂಡಲ ಜಾತಿಯ ಹಾವುಗಳ ವಿಷವನ್ನು ಸಂಗ್ರಹಿಸಿ, ಮೊಟ್ಟೆ ನೀಡುವ ಕೋಳಿಗಳಿಗೆ ಇದನ್ನು ಇಂಜೆಕ್ಟ್ ಮಾಡಲಾಗುತ್ತದೆ. ಬಳಿಕ ಅವುಗಳ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ನಂತರದಲ್ಲಿ ಆ ಕೋಳಿಯ ಮೊಟ್ಟೆಗಳನ್ನು ಪಡೆಯಲಾಗಿದೆ. ಅದರೊಳಗಿನ ಹಳದಿ ಭಾಗವನ್ನು ಸಂಗ್ರಹಿಸಿ, ಶುದ್ಧೀಕರಿಸಿ, ಔಷಧ ಸಿದ್ಧಪಡಿಸಿ, ಇಲಿ, ಗಿನಿ ಹಂದಿಗಳ ಮೇಲೆ ಪರೀಕ್ಷೆ ನಡೆಸಲಾಗಿದೆ. ಉತ್ತಮ ಫಲಿತಾಂಶ ಬಂದಿದೆ' ಎಂದು ಬೆಂಗಳೂರಿನ ಹೆಬ್ಬಾಳದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ನಿರ್ದೇಶಕಿ ಡಾ.ಡಿ.ರತ್ನಮ್ಮ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಸದ್ಯ ಆಸ್ಪತ್ರೆಗಳಲ್ಲಿ ಕೊಡುತ್ತಿರುವ 'ಆ್ಯಂಟಿ ವೆನಮ್' ಅನ್ನು ಕುದುರೆಗಳ ಮೂಲಕ ತಯಾರಿಸಲಾಗುತ್ತಿದೆ. ಕುದುರೆಗೆ ಇಂಜೆಕ್ಟ್ ಮಾಡಿ, ಅದರ ದೇಹದಲ್ಲಿ ರೋಗ ನಿರೋಧಕ ಶಕ್ತಿ ಬೆಳೆಸಲಾಗುತ್ತದೆ. ಬಳಿಕ ಅದರ ರಕ್ತದ ಸಾರದಿಂದ ಆ್ಯಂಟಿ ವೆನಮ್ ತಯಾರಿಸಲಾಗುತ್ತಿದೆ. ಆದರೆ, ಇದಕ್ಕೆ ಪ್ರಾಣಿ ದಯಾ ಸಂಘ ಸೇರಿದಂತೆ ಕೆಲ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಹೀಗಾಗಿ ಆ್ಯಂಟಿ ವೆನಮ್ ತಯಾರಿಕೆಗೆ ತೊಡಕಾಗಿದೆ. ಆದಕಾರಣ ಮೊಟ್ಟೆ ಕೊಡುವ ಕೋಳಿಗಳಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದ್ದು, ಇದು ಸಂಶೋಧನಾ ಕ್ಷೇತ್ರದಲ್ಲಿನ ದೊಡ್ಡ ಸಾಧನೆಯಾಗಿದೆ. ಈ ಆ್ಯಂಟಿ ವೆನಮ್ ಅನ್ನು ನಾಗರಹಾವು, ರಸೆಲ್ ವೈಪರ್, ಕಾಳಿಂಗ ಸರ್ಪ ಹಾಗೂ ಕೊಳಕು ಮಂಡಲ ಜಾತಿಯ ಹಾವುಗಳು ಮನುಷ್ಯರಿಗೆ ಕಚ್ಚಿದಾಗ ಕೊಡಬಹುದು' ಎಂದು ಹೇಳಿದ್ದಾರೆ.

11 ವರ್ಷಗಳ ಶ್ರಮ

ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ಈ ಯಶಸ್ವಿ ಪರೀಕ್ಷೆ ನಡೆಸಲಾಗಿದೆ. ನಾಲ್ವರು ಹಿರಿಯ ವಿಜ್ಞಾನಿಗಳಾದ ಡಾ.ಶ್ರೀಪಾದ್, ಡಾ.ರವೀಂದ್ರ ಹೆಗಡೆ, ಡಾ.ಕವಿತಾ ಹಾಗೂ ಡಾ.ಶೋಭಾರಾಣಿ ಅವರು ಸತತ 11 ವರ್ಷಗಳ ಕಾಲ ಶ್ರಮಿಸಿ, ಇದನ್ನು ಅಭಿವೃದ್ಧಿಪಡಿಸಿದ್ದಾರೆ.



ಮೈಸೂರಿನ ಕೆಎಸ್‌ಒಯು ಕ್ಯಾಂಪಸ್‌ನಲ್ಲಿ ಕೈತೋಟದ ಪ್ರಾತ್ಯಕ್ಷಿಕೆ ನೀಡಲೆಂದು ಬೆಳವಲ ತೋಟದ ರಾಮಕೃಷ್ಣಪ್ಪ ತಂಡದಿಂದ ಮಾದರಿ ಕೈತೋಟವನ್ನು ರೂಪಿಸಲಾಗಿದೆ

ಮೈಸೂರು: ಕಿಸಾನ್ ಸ್ವರಾಜ್ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ದೇಶದ ಕೃಷಿ ವಲಯ ಎದುರಿಸುತ್ತಿರುವ ಸವಾಲುಗಳು-ಬಿಕ್ಕಟ್ಟುಗಳು, ರೈತರು ಅನುಭವಿಸುತ್ತಿರುವ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳುವ ಆಶಯದೊಂದಿಗೆ ಇಲ್ಲಿ ಶುಕ್ರವಾರದಿಂದ (ಫೆ.27) ಮೂರು ದಿನಗಳವರೆಗೆ ಆಯೋಜಿಸಿರುವ '6ನೇ ಕಿಸಾನ್ ಸ್ವರಾಜ್ ಸಮ್ಮೇಳನ'ಕ್ಕೆ ವೇದಿಕೆಯು ಸಜ್ಜಾಗಿದೆ. ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದಿಂದ ಉಂಟಾಗಲಿರುವ ಸಂಕಷ್ಟಗಳ ಕುರಿತು ಸಮಾಲೋಚನೆಯೂ ನಡೆಯಲಿದೆ.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಗರಿಗೆದರಲಿರುವ ಸಮ್ಮೇಳನದಲ್ಲಿ ದೇಶದ ವಿವಿಧ 11 ರಾಜ್ಯಗಳ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಕೃಷಿಯಲ್ಲಿ ಉತ್ತಮ ಅಭ್ಯಾಸಗಳ ಕುರಿತು ವಿಚಾರ ವಿನಿಮಯಕ್ಕೂ ಸಮ್ಮೇಳನ ಸಾಕ್ಷಿಯಾಗಲಿದೆ.

'ಸಾವಯವ ಕೃಷಿಕರ ಕುಂಭಮೇಳ' ಎಂಬ ಖ್ಯಾತಿಯ ಈ ಸಮ್ಮೇಳನವನ್ನು 'ಸುಸ್ಥಿರ ಮತ್ತು ಕೃಷಿ ಮೈತ್ರಿಕೂಟ (ಆಶಾ)-ಕಿಸಾನ್ ಸ್ವರಾಜ್ ಹಾಗೂ ಕೆಎಸ್‌ಒಯು ಪ್ರಸಾರಾಂಗದ ಸಹಯೋಗದಲ್ಲಿ ನಡೆಸಲಾಗುತ್ತಿದೆ. ಕನ್ನಡ, ತಮಿಳು, ತೆಲುಗಿನಲ್ಲಿ ಅಧಿವೇಶನ ಜರುಗಲಿದೆ. ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಕಾಫಿ ಹೂವು ದಂಡೆ

ಚಿತ್ರ: ಜಾನೇಕೆರೆ ಆರ್. ಪರಮೇಶ್



ಸಕಲೇಶಪುರದ ಜಾನೇಕೆರೆ ಗ್ರಾಮದ ಕಾಫಿ ತೋಟದಲ್ಲಿ ಅರಳಿದ ಕಾಫಿ ಹೂವುಗಳು ಗುರುವಾರ ಕಣ್ಮನ ಸೆಳೆದವು

ಮಾಲಿನ್ಯ: ಶಾಸಕ ಹಿಟ್ನಾಳಗೆ ಮತ್ತೆ ತರಾಟೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕಾರ್ಖಾನೆಗಳ ಕಪ್ಪುಕಣಗಳ ದೂಳಿನ ಮಾಲಿನ್ಯದಿಂದ ರೋಸಿ ಹೋಗಿರುವ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಜನ ತಮ್ಮೂರಿಗೆ ಭೇಟಿ ನೀಡಿದ ಶಾಸಕ ರಾಘವೇಂದ್ರ ಹಿಟ್ನಾಳ ಅವರನ್ನು ಮತ್ತೊಮ್ಮೆ ತರಾಟೆಗೆ ತೆಗೆದುಕೊಂಡರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಬುಧವಾರ ಗ್ರಾಮಕ್ಕೆ ತೆರಳಿದ್ದ ಶಾಸಕರಿಗೆ ಗ್ರಾಮಸ್ಥರು, 'ಕಪ್ಪುದೂಳಿನ ಮಾಲಿನ್ಯದಿಂದ ಸಾಕಾಗಿ ಹೋಗಿದೆ. ನೀವೊಮ್ಮೆ ಗ್ರಾಮದಲ್ಲಿ ಸುತ್ತುಹಾಕಿ, ನಮ್ಮ ಬದುಕು ಹೇಗಾಗಿದೆ ಎನ್ನುವುದು ಗೊತ್ತಾಗುತ್ತದೆ. ಬಜೆಟ್ ಅಧಿವೇಶನ ಮುಗಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಮ್ಮೂರಿಗೆ ಕರೆದುಕೊಂಡು ಬನ್ನಿ' ಎಂದು ಒತ್ತಾಯಿಸಿದರು.




> ಹಿರೇಬಗನಾಳ ಗ್ರಾಮದ ಮೂರ್ನಾಲ್ಕು ಯುವಕರು ಉದ್ದೇಶಪೂರ್ವಕವಾಗಿ ಗಲಾಟೆ ಮಾಡಿದ್ದಾರೆ. ಗಲಾಟೆ ಮಾಡಿದವರು ಒಂದೂ ದಿನ ಹೋರಾಟದಲ್ಲಿ ಭಾಗಿಯಾಗಿಲ್ಲ
>
> **ರಾಘವೇಂದ್ರ ಹಿಟ್ನಾಳ,** ಶಾಸಕ

'ಸ್ಪಾಂಜ್ ಹಾಗೂ ಐರನ್ ಕಾರ್ಖಾನೆಗಳಿಂದ ಸುತ್ತಲಿನ ಪರಿಸರ ಕಲುಷಿತವಾಗಿದೆ. ಮಾಲಿನ್ಯ ಮಾಡದ ಕೈಗಾರಿಕೆಗಳ ಆರಂಭಕ್ಕೆ ನಮ್ಮ ವಿರೋಧವಿಲ್ಲ. ಪರಿಣಿತರ ತಂಡದ ವರದಿ ಪ್ರಕಾರ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಶಾಸಕರೇ ನಮ್ಮನ್ನು ನಡು ನೀರಿನಲ್ಲಿ ಕೈಬಿಟ್ಟು ಹೋಗಬೇಡಿ. ಇಲ್ಲಿನ ಸಮಸ್ಯೆ ನೋಡಬನ್ನಿ' ಎಂದು ಗ್ರಾಮಸ್ಥರು ಒಕ್ಕೊರಲಿನಿಂದ, ಕೂಗಿದರು. 'ನಿಮ್ಮ ನಿರ್ಲಕ್ಷತನ ಮುಂದುವರಿದರೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸಬೇಕಾಗುತ್ತದೆ' ಎಂದೂ ಎಚ್ಚರಿಕೆ ನೀಡಿದರು.

ಮಾಲಿನ್ಯ ವಿರೋಧಿಸಿ ಫೆಬ್ರುವರಿ 24ರಂದು ಕೊಪ್ಪಳ ಬಂದ್ ವೇಳೆಯೂ ಗ್ರಾಮಸ್ಥರು ಶಾಸಕ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ ಅವರನ್ನು ಹೀಗೆ ತರಾಟೆಗೆ ತೆಗೆದುಕೊಂಡಿದ್ದರು.

ಸತ್ಯಧ್ಯಾನಾಚಾರ್ಯಗೆ 'ಬಲಭೀಮ' ಪ್ರಶಸ್ತಿ



ಧಾರವಾಡ: ಇಲ್ಲಿನ ನುಗ್ಗಿಕೇರಿ ಹನುಮಂತ ದೇವರ ಗುಡಿಯ ವ್ಯವಸ್ಥಾಪಕ ಸಮಿತಿ ನೀಡುವ 2025-26 ನೇ ಸಾಲಿನ 'ಬಲಭೀಮ ಪ್ರಶಸ್ತಿ'ಗೆ ಬೆಂಗಳೂರಿನ ಜಯತೀರ್ಥ ವಿದ್ಯಾಪೀಠದ ಪ್ರಾಚಾರ್ಯ ಪ್ರೊ.ಸತ್ಯಧ್ಯಾನಾಚಾರ್ಯ ಕಟ್ಟಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 51 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಫೆಬ್ರುವರಿ 28 ರಂದು ಬೆಳಿಗ್ಗೆ 9 ಗಂಟೆಗೆ ನುಗ್ಗಿಕೇರಿಯ ಹನುಮಂತ ದೇವರ ಗುಡಿಯ ಸಾಂಸ್ಕೃತಿಕ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಲಂಚ: ಲೋಕಾ ಬಲೆಗೆ ಬಿದ್ದ ಕಾರ್ಯನಿರ್ವಾಹಕ ಎಂಜಿನಿಯರ್

ಪ್ರಜಾವಾಣಿ ವಾರ್ತೆ


ರಾಮಲಿಂಗಪ್ಪ


ಬಾಬು

ಬೀದರ್: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ಸಿಪಾಯಿ, ಗುತ್ತಿಗೆದಾರನಿಂದ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಗರದ ಜಿಲ್ಲಾ ಪಂಚಾಯಿತಿ ಆವರಣದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಚೇರಿಯಲ್ಲಿ ಗುರುವಾರ ಸಂಜೆ ಇಇ ರಾಮಲಿಂಗಪ್ಪ ಬಿರಾದಾರ ಮತ್ತು ಸಿಪಾಯಿ ಬಾಬು, ಗುತ್ತಿಗೆದಾರನಿಂದ ₹50 ಸಾವಿರ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಬಂಧಿಸಿ, ನಗದು ಜಪ್ತಿ ಮಾಡಿದ್ದಾರೆ.

ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರನ ಹಣ ಬಿಡುಗಡೆಗೆ ₹50 ಸಾವಿರ ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಖಚಿತ ಮಾಹಿತಿ ಮೇರೆಗೆ ಲೋಕಾಯುಕ್ತ ಎಸ್‌ಪಿ ಸಿದ್ದರಾಜು, ಡಿವೈಎಸ್‌ಪಿ ಹನುಮಂತರಾಯ್ ನೇತೃತ್ವದ ತಂಡ ದಾಳಿ ನಡೆಸಿದೆ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಗೂಂಡಾಗಿರಿ: ತಂದೆ, ಮಗ ಸೆರೆ



ಮಂಗಳೂರು: ಪರಿಶಿಷ್ಟ ಜಾತಿಯ 14 ವರ್ಷದ ಬಾಲಕ ಮತ್ತು ಬಂಟ ಸಮುದಾಯದ ಬಾಲಕಿ ನಗರದ ಬಾಬುಗುಡ್ಡೆಯ ರೈಲು ಹಳಿ ಮೇಲೆ ಕುಳಿತು ಮಾತನಾಡುತ್ತಿದ್ದ ವೇಳೆ ಅವರ ವಿಡಿಯೊ ಚಿತ್ರೀಕರಿಸಿ, ಬಾಲಕನ ಮೇಲೆ ಹಲ್ಲೆ ನಡೆಸಿದ ತಂದೆ ಮಗನ ವಿರುದ್ಧ ನಗರದ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರಕರಣದ ಆರೋಪಿಗಳಾದ ಸ್ಟೀವನ್ ಮೊಂತೆರೊ ಹಾಗೂ ಅವರ ಮಗ ಅವಿಲ್ ಮೊಂತೆರೊ ಅವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಹುಡುಗ ಮತ್ತು ಹುಡುಗಿ ಬಾಬುಗುಡ್ಡೆಯ ಗ್ರಾಮ ಸಂಘದ ಬಳಿಯ ರೈಲು ಹಳಿಯಲ್ಲಿ ಸೋಮವಾರ ಸಂಜೆ ಜೊತೆಯಲ್ಲಿ ಕುಳಿತು ಮಾತನಾಡುತ್ತಿದ್ದರು. ಆಗ ಅಲ್ಲಿಗೆ ಹೋಗಿದ್ದ ಆರೋಪಿಗಳಾದ ಸ್ಟೀವನ್ ಮೊಂತೆರೊ ಹಾಗೂ ಅವಿಲ್ ಮೊಂತೆರೊ, ಹುಡುಗ ಹುಡುಗಿ ಜೊತೆಯಲ್ಲಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸುವುದಾಗಿ ಬೆದರಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳು ಸ್ಥಳಕ್ಕೆ ಬರುತ್ತಿದ್ದಂತೆಯೇ ಹುಡುಗಿ ಅಲ್ಲಿಂದ ನಿರ್ಗಮಿಸಿದ್ದಳು. ಬಳಿಕ ಹುಡುಗನನ್ನು ರೈಲ್ವೆ ಹಳಿ ಪಕ್ಕದ ರಸ್ತೆಗೆ ಎಳೆದುಕೊಂಡು ಹೋಗಿ ತಂದೆ ಮಗ ಇಬ್ಬರು ಸೇರಿ ಹಲ್ಲೆ ನಡೆಸಿದ್ದರು. ಇನ್ನೊಮ್ಮೆ ಈ ಕಡೆಗೆ ಬಂದರೆ ನಿನ್ನ ಕೈಕಾಲು ಮುರಿಯುತ್ತೇವೆ ಎಂದು ಬೆದರಿಕೆ ಹಾಕಿದ್ದರು. ಈ ಬಗ್ಗೆ ಹಲ್ಲೆಗೊಳಗಾದ ಹುಡುಗನ ತಂದೆ ನಗರದ ದಕ್ಷಿಣ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'2027ಕ್ಕೆ ರೈಲು ಮಾರ್ಗ ಪೂರ್ಣ'

ದಾವಣಗೆರೆ–ತುಮಕೂರು ನೇರ ರೈಲು ಮಾರ್ಗ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ದಾವಣಗೆರೆ–ಚಿತ್ರದುರ್ಗ–ತುಮಕೂರು ನಡುವೆ ನೇರ ಸಂಪರ್ಕ ಕಲ್ಪಿಸುವ ರೈಲು ಮಾರ್ಗದ ನಿರ್ಮಾಣ ಕಾಮಗಾರಿ ಮುಂದಿನ ವರ್ಷಾಂತ್ಯಕ್ಕೆ (2027ರ ಡಿಸೆಂಬರ್) ಪೂರ್ಣಗೊಳ್ಳಲಿದೆ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ತಾಲ್ಲೂಕಿನ ಹಂಪನೂರು ಗ್ರಾಮದ ಬಳಿ ಗುರುವಾರ ರೈಲ್ವೆ ಕಾಮಗಾರಿ ಪರಿಶೀಲಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ದಾವಣಗೆರೆ–ತುಮಕೂರು ಮಾರ್ಗ ಮಾತ್ರವಲ್ಲದೇ ಗದಗ–ವಾಡಿ, ರಾಯದುರ್ಗ–ತುಮಕೂರು ನಡುವಣ ಮಾರ್ಗವನ್ನೂ 2027ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು' ಎಂದರು.

'ದಾವಣಗೆರೆಯಿಂದ ಹೆಬ್ಬಾಳ ಗ್ರಾಮದವರೆಗೆ ಈಗಾಗಲೇ ಕಾಮಗಾರಿ ಪೂರ್ಣಗೊಂಡಿದೆ. ನಾನು ಮೋಟಾರ್ ಟ್ರಾಲಿ ಮೂಲಕ ಸಂಚರಿಸಿ ಪರಿಶೀಲಿಸಿದ್ದೇನೆ. ಚಿತ್ರದುರ್ಗದ ಬಳಿ ಕಾಮಗಾರಿ ಸ್ವಲ್ಪ ತಡವಾಗಿದೆ. 6 ತಿಂಗಳ ಒಳಗೆ ಕಾಮಗಾರಿ ಮುಗಿಸುವಂತೆ ಅಧಿಕಾರಿಗಳಿಗೆ, ಗುತ್ತಿಗೆದಾರರಿಗೆ ಸೂಚಿಸಿದ್ದೇನೆ' ಎಂದರು.

'ಸದ್ಯ ದೇಶದ ವಿವಿಧೆಡೆ ನಡೆಯುತ್ತಿರುವ ರೈಲ್ವೆ ಕಾಮಗಾರಿಗಳಲ್ಲಿ ತುಮಕೂರು– ದಾವಣಗೆರೆ ಮಾರ್ಗಕ್ಕೆ ಹೆಚ್ಚು ಮಹತ್ವವಿದೆ. ಸ್ಥಳೀಯ ಗ್ರಾಮಸ್ಥರ ಅಗತ್ಯಗಳಿಗೆ ಅನುಗುಣವಾಗಿ ಕಾಮಗಾರಿ ನಡೆಸಲಾಗುತ್ತಿದೆ. ಸಿರಿಗೆರೆ ಬಳಿ ನಿಲ್ದಾಣ ನಿರ್ಮಿಸುವಂತೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕೋರಿದ್ದಾರೆ. ಈ ಕುರಿತು ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ನಾನು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ರೈಲಿನಲ್ಲಿ ಹೊರಟೆ. ದಾವಣಗೆರೆ ತಲುಪಲು 5 ಗಂಟೆ ಹಿಡಿಯಿತು. ನೇರ ರೈಲು ಮಾರ್ಗ ಪೂರ್ಣಗೊಂಡರೆ ಎರಡೂವರೆ ಗಂಟೆಯಲ್ಲಿ ತಲುಪಬಹುದು' ಎಂದರು.



ದಾವಣಗೆರೆ ತಾಲ್ಲೂಕಿನ ತೋಳಹುಣಸೆ– ಆನಗೋಡು ನಡುವೆ ಗುರುವಾರ ಮೋಟಾರು ಚಾಲಿತ ಟ್ರಾಲಿಯಲ್ಲಿ ಸಂಚರಿಸಿದ ಕೇಂದ್ರ ಸಚಿವ ವಿ. ಸೋಮಣ್ಣ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ರೈಲು ಹಳಿ ನಿರ್ಮಾಣದ ಕಾಮಗಾರಿ ಪರಿಶೀಲಿಸಿದರು –ಚಿತ್ರ/ಸತೀಶ್ ಬಡಿಗೇರ

ಸಿದ್ದರಾಮಯ್ಯ–ಡಿಕೆಶಿ ಕಿಲಾಡಿಗಳು

'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಹಳ ಕಿಲಾಡಿಗಳು. ಅವರ ಕಪಟ ನಾಟಕವನ್ನು ನೋಡಿ ಜನ ತಬ್ಬಲಿಗಳಾಗಿದ್ದಾರೆ. ನನ್ನ ರಾಜಕೀಯ ಬದುಕಿನಲ್ಲಿ ಇಂತಹ ಕಿಲಾಡಿಗಳನ್ನು ನೋಡಿಲ್ಲ' ಎಂದು ವಿ. ಸೋಮಣ್ಣ ವ್ಯಂಗ್ಯವಾಡಿದರು.

'ಅಕ್ಕಾ' ಅಧ್ಯಕ್ಷ ಕಾಂತಕುಮಾರ್ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ


ಕಾಂತಕುಮಾರ್

ಧಾರವಾಡ: 'ನಗರದಲ್ಲಿ ಫೆ.24ರಂದು ನಡೆದ ಉದ್ಯೋಗಾಕಾಂಕ್ಷಿಗಳ ಬೃಹತ್ ಪ್ರತಿಭಟನೆಯಲ್ಲಿ ನಿಯಮ ಉಲ್ಲಂಘನೆ ಆರೋಪದ ಮೇಲೆ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಕಾ) ಅಧ್ಯಕ್ಷ ಕಾಂತಕುಮಾರ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ತಿಳಿಸಿದರು.

'ಸಪ್ತಾಪುರ ವೃತ್ತ (ಲಿಂಗಾಯತ ಭವನ ಬಳಿ) ಮತ್ತು ಜುಬಿಲಿ ವೃತ್ತದಲ್ಲಿ ಕಾನೂನು ಉಲ್ಲಂಘನೆ ಆಗಿದೆ. ಪೊಲೀಸರ ಜತೆ ಸಂಘರ್ಷ, ಕರ್ತವ್ಯಕ್ಕೆ ಅಡ್ಡಿ, ಪ್ರತಿಭಟನಾ ರ‍್ಯಾಲಿ, ಮಾರ್ಗ ಬದಲಾವಣೆ, ರಸ್ತೆ ತಡೆ ನಡೆಸಿದ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಫೆ. 24ರಂದು ನಗರದಲ್ಲಿ ಪ್ರತಿಭಟನೆ ನಡೆಸಲು ಸಂಘಟನೆಗೆ ಪೊಲೀಸ್ ಇಲಾಖೆ ಅನುಮತಿ ನೀಡಿರಲಿಲ್ಲ. ಪ್ರತಿಭಟನೆಗೆ ಬಿಜೆಪಿ ಅನುಮತಿ ಪಡೆದಿತ್ತು. ಡ್ರೋನ್ ಹಾಗೂ ವಿಡಿಯೊ ಕ್ಯಾಮೆರಾ, ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾಗಿರುವ ಚಿತ್ರಗಳನ್ನು ಪರಿಶೀಲಿಸಲಾಗುತ್ತದೆ. ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಸೀದಿ ಬಂದ್‌ಗೆ 15 ದಿನ ಗಡುವು

ಬಾಗಲಕೋಟೆ: 'ಕಲ್ಲು ತೂರಾಟದ ವೇಳೆ ಪಂಚ ಮಸೀದಿಯಲ್ಲಿ ಸೇರಿದ್ದ ಎಲ್ಲರ ವಿರುದ್ಧ ಪ್ರಕರಣ ದಾಖಲಿಸಬೇಕು. ಮಸೀದಿಯನ್ನು 15 ದಿನಗಳಲ್ಲಿ ಬಂದ್ ಮಾಡಬೇಕು' ಎಂದು ಆಗ್ರಹಿಸಿ ಹಿಂದೂ ಹಿತರಕ್ಷಣಾ ಸಮಿತಿ ಸದಸ್ಯರು ಗುರುವಾರ ಬೃಹತ್ ಪ್ರತಿಭಟನೆ ನಡೆಸಿದರು.

ಹಿಂದೂ ಜಾಗರಣ ವೇದಿಕೆ ಉತ್ತರ ಪ್ರಾಂತ ಸಹ ಸಂಚಾಲಕ ಶ್ರೀಕಾಂತ ಹೊಸಕೆರೆ ಮಾತನಾಡಿ, '4 ದಶಕಗಳಿಂದ ಅದೇ ಮಸೀದಿಯಿಂದ ಕಲ್ಲು, ಚಪ್ಪಲಿ ಎಸೆದ ಘಟನೆಗಳು ಹಲವಾರು ಬಾರಿ ನಡೆದಿವೆ. ಅದಕ್ಕಾಗಿ ಆ ಮಸೀದಿಯನ್ನು ಬಂದ್ ಮಾಡಬೇಕು' ಎಂದರು.

ಶೈಕ್ಷಣಿಕ ಸಮ್ಮೇಳನ ನಾಳೆ

ಪ್ರಜಾವಾಣಿ ವಾರ್ತೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಹಾಗೂ ಸಂಘದ ಸುವರ್ಣ ಮಹೋತ್ಸವ, ಧನ್ಯತಾ ಸಮಾರಂಭ ಫೆ. 28ರಂದು ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಜರುಗಲಿದೆ ಎಂದು ಮುದ್ದೇಬಿಹಾಳ ತಾಲ್ಲೂಕು ಘಟಕದ ಅಧ್ಯಕ್ಷ ಬಸನಗೌಡ ಮುದನೂರ, ಪ್ರಧಾನ ಕಾರ್ಯದರ್ಶಿ ಎಸ್.ಎಸ್. ತುರುಡಗಿ, ಎ.ಎಚ್.ಹಾಜಿ ತಿಳಿಸಿದ್ದಾರೆ.

ಶಿಕ್ಷಕರಿಗೆ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಅವಕಾಶವಾಗುವಂತೆ ಇಲಾಖೆ ವತಿಯಿಂದ ಒಒಡಿ ಸೌಲಭ್ಯ, ವಸತಿ ಸೌಲಭ್ಯ ಮತ್ತು ಉಪಾಹಾರ ಹಾಗೂ ಭೋಜನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

'ಶಿವಕುಮಾರ್‌ಗೆ ತಡವಾಗಿ ಜ್ಞಾನೋದಯ'

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ): 'ಗ್ಯಾರಂಟಿಗಳಿಗೆ ಖರ್ಚು ಮಾಡಿದ ಹಣವನ್ನು ರಾಜ್ಯ ಸರ್ಕಾರವು ಶಾಲೆ–ಆಸ್ಪತ್ರೆಗಳಿಗೆ ವಿನಿಯೋಗಿಸಿದ್ದರೆ ಸಮಸ್ಯೆ ಪರಿಹಾರವಾಗುತ್ತಿತ್ತು. ಈಗ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಅವಧಿ ಮುಗಿದ ಔಷಧಿ ವಿತರಿಸಲಾಗುತ್ತಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

'ಗ್ಯಾರಂಟಿಯಿಂದ ಸರ್ಕಾರಕ್ಕೆ ಹೊರೆಯಾಗುತ್ತಿದೆ' ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ತಾಲ್ಲೂಕಿನ ಕೊಣನೂರಿನಲ್ಲಿ ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, 'ಅವರಿಗೆ ತಡವಾಗಿ ಜ್ಞಾನೋದಯವಾಗಿದೆ. ಇದೇ ಮಾತನ್ನು ಆರ್.ವಿ. ದೇಶಪಾಂಡೆ ಹಾಗೂ ಬಸವರಾಜ ರಾಯರೆಡ್ಡಿ ಮೊದಲೇ ಹೇಳಿದ್ದರು' ಎಂದರು.

'ರಾಜ್ಯದ ಜನರ ಬಗ್ಗೆ ಭಯಭಕ್ತಿ ಇದ್ದರೆ, ದೇವರಾಜ ಅರಸು ಜೊತೆಗೆ ಹೋಲಿಸುವುದನ್ನು ಬಿಟ್ಟು, ಮುಂದಿನ ಎರಡು ವರ್ಷಗಳವರೆಗೂ ಸರಿಯಾದ ಆಡಳಿತ ನೀಡಲಿ. ಸರ್ಕಾರದ ಕಾರ್ಯವೈಖರಿ ನೋಡಿದರೆ ಕಾಂಗ್ರೆಸ್‌ನಲ್ಲಿ ಏನು ನಡೆಯುತ್ತಿದೆ ಎಂದು ಅನುಮಾನವಾಗುತ್ತಿದೆ. ಜಿ.ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡಬೇಕೆಂಬ ಮಾತುಗಳು ಕೇಳಿಬರುತ್ತಿವೆ. ಕುರ್ಚಿ ಉಳಿಸಿಕೊಳ್ಳಲು ದಿನಕ್ಕೊಬ್ಬರ ಹೆಸರನ್ನು ಎಳೆದು ತರಲಾಗುತ್ತಿದೆ' ಎಂದು ಟೀಕಿಸಿದರು.


ಗುಂಡ್ಲುಪೇಟೆಯಲ್ಲಿ ಮಾತನಾಡಿದ ಅವರು, 'ಸರ್ಕಾರ ಹಣ ಬಿಡುಗಡೆ ಮಾಡದ ಕಾರಣ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ತಲುಪಿದ್ದಾರೆ. ನಾನು ಸಿ.ಎಂ ಆಗಿದ್ದಾಗ ತಿಂಗಳ ಕೊನೆಗೆ ಹಣ ಬಿಡುಗಡೆಯಾಗುತ್ತಿತ್ತು. ಯಾವ ಗುತ್ತಿಗೆದಾರರೂ ಕಮಿಷನ್ ಆರೋಪ ಮಾಡಿರಲಿಲ್ಲ' ಎಂದರು.

ಉಪ ಸಭಾಪತಿ ಪದಚ್ಯುತಿಗೆ ತಂತ್ರ

ಲಖನ್ ಜಾರಕಿಹೊಳಿ, ಸಭಾಪತಿ ವಿವೇಚನಾ ಮತಗಳತ್ತ ಕಾಂಗ್ರೆಸ್ ಚಿತ್ತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಿ, ಉಪ ಸಭಾಪತಿ ಎಂ.ಕೆ.ಪ್ರಾಣೇಶ್ ಅವರನ್ನು ಪದಚ್ಯುತಿಗೊಳಿಸಲು ಕಾಂಗ್ರೆಸ್ ಕಾರ್ಯತಂತ್ರ ರೂಪಿಸಿದೆ.


ಎಂ.ಕೆ. ಪ್ರಾಣೇಶ್

ಪ್ರಾಣೇಶ್ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶ ಕೋರಿ ಐವನ್ ಡಿಸೋಜ ನೇತೃತ್ವದಲ್ಲಿ 10 ಸದಸ್ಯರು ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಅವರಿಗೆ ಪ್ರಸ್ತಾವ ಸಲ್ಲಿಸಿದ್ದಾರೆ. ಮಾರ್ಚ್ 6ರಿಂದ ಆರಂಭವಾಗುವ ಬಜೆಟ್ ಅಧಿವೇಶನದಲ್ಲೇ ನೂತನ ಉಪ ಸಭಾಪತಿ ಆಯ್ಕೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ.


ಬಸವರಾಜ ಹೊರಟ್ಟಿ ಅವರನ್ನು ಹೊರತುಪಡಿಸಿ ಬಿಜೆಪಿ 29 ಸದಸ್ಯ ಬಲವನ್ನು ಹೊಂದಿದೆ. ಬಿಜೆಪಿ ಮೈತ್ರಿಕೂಟದ ಜೆಡಿಎಸ್‌ನ ಏಳು ಸದಸ್ಯರಿದ್ದಾರೆ. ಎರಡೂ ಪಕ್ಷಗಳು ಒಟ್ಟು ಬಲ 36 ರಷ್ಟಿದೆ. ಕಾಂಗ್ರೆಸ್ 37 ಸದಸ್ಯ ಬಲಹೊಂದಿದ್ದು ಮಿತ್ರ ಪಕ್ಷಗಳಿಗಿಂತ ಒಂದು ಸ್ಥಾನ ಹೆಚ್ಚು ಹೊಂದಿದೆ. ಒಬ್ಬರು ಪಕ್ಷೇತರ ಸದಸ್ಯ ಇದ್ದಾರೆ.

ಮುಖ್ಯಾಂಶಗಳು

- ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶ ಕೋರಿ ಪ್ರಸ್ತಾವ
- ಮಾರ್ಚ್ 6ರಿಂದ ಬಜೆಟ್ ಅಧಿವೇಶನ

ಲಖನ್‌ರತ್ತ ಚಿತ್ತ: ಬಿಜೆಪಿ–ಜೆಡಿಎಸ್‌ಗಿಂತ ಕಾಂಗ್ರೆಸ್ ಒಂದು ಸ್ಥಾನ ಹೆಚ್ಚು ಇರುವುದರಿಂದ ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ಅವರತ್ತ ವಿರೋಧ ಪಕ್ಷಗಳ ಮೈತ್ರಿಕೂಟ ಚಿತ್ತ ನೆಟ್ಟಿವೆ. ಕಾಂಗ್ರೆಸ್ ಸಹ ಅವರನ್ನು ಸೆಳೆಯಲು ಮುಂದಾಗಿದೆ. ಒಂದು ವೇಳೆ ಲಖನ್ ಕಾಂಗ್ರೆಸ್ ಜತೆ ಕೈಜೋಡಿಸಿದರೆ ಪ್ರಾಣೇಶ್ ಅವರ ಪದಚ್ಯುತಿಯ ದಾರಿ ಸುಗಮವಾಗಲಿದೆ.

ಪಕ್ಷಗಳ ಬಲಾಬಲ



ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹಾಗೂ ಬಿಜೆಪಿ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಅವರ ತಮ್ಮ, ಸ್ಥಳೀಯ ಸಂಸ್ಥೆಗಳ ಸದಸ್ಯರಿಂದ ವಿಧಾನಪರಿಷತ್ತಿನ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ, ಸತೀಶ ಅವರೇ ಬೆಳಗಾವಿಯಿಂದ ಲಖನ್ ಅವರನ್ನು ಕಣಕ್ಕೆ ಇಳಿಸಿ ಗೆಲ್ಲಿಸಿದ್ದರು. ಹಾಗಿದ್ದರೂ, ಲಖನ್ ಅವರು ಎರಡೂ ಪಕ್ಷಗಳಿಂದ ಅಂತರವನ್ನು ಕಾಯ್ದುಕೊಂಡೇ ಬಂದಿದ್ದಾರೆ. ಈಗ ಶುರುವಾಗಿರುವ ಉಪಸಭಾಪತಿ ಪದಚ್ಯುತಿಯ ಪ್ರಯತ್ನದಲ್ಲಿ ಅವರ ನಿರ್ಣಯವೇ ಪ್ರಮುಖ ಪಾತ್ರ ವಹಿಸಲಿದೆ. ಬಿಜೆಪಿ–ಜೆಡಿಎಸ್ ಜತೆ ಸೇರಿಕೊಂಡರೆ ಸಮಬಲವಾಗುತ್ತದೆ. ಆಗ ಸಭಾಪತಿ ಬಸವರಾಜ ಹೊರಟ್ಟಿ ಅವರ ವಿವೇಚನಾ ಮತ ನಿರ್ಣಾಯಕ ಪಾತ್ರ ವಹಿಸಲಿದೆ.

ಪ್ರಾಣೇಶ್ ಪದಚ್ಯುತಿ ಮೇಲೆ ಹೊರಟ್ಟಿ ಭವಿಷ್ಯ: ಉಪ ಸಭಾಪತಿ ಪದಚ್ಯುತಿಗಾಗಿ ಕಾಂಗ್ರೆಸ್ ಮಂಡಿಸುವ ನಿರ್ಣಯದ ಪರ ಲಖನ್ ಮತ ಚಲಾಯಿಸುತ್ತಾರೆ ಎನ್ನುವ ನಂಬಿಕೆ ಇಟ್ಟುಕೊಂಡು ಕಾಂಗ್ರೆಸ್ ತನ್ನ ಚಟುವಟಿಕೆ ತೀವ್ರಗೊಳಿಸಿದೆ. ಒಂದು ವೇಳೆ ಲಖನ್ ಕೈಕೊಟ್ಟರೆ ಸಭಾಪತಿ ಅವರ ವಿವೇಚನಾ ಮತ ಆಸರೆಯಾಗಬಹುದು ಎನ್ನುವ ಲೆಕ್ಕಾಚಾರ ಇಟ್ಟುಕೊಂಡಿದೆ. ಅದಕ್ಕಾಗಿಯೇ ಬಸವರಾಜ ಹೊರಟ್ಟಿ ಅವರನ್ನು ಸಭಾಪತಿ ಸ್ಥಾನದಿಂದ ಪದಚ್ಯುತಿಗೊಳಿಸುವ ಪ್ರಯತ್ನಕ್ಕೆ ಕೈಹಾಕಿಲ್ಲ.

‘ಒಂದು ವೇಳೆ ಸಭಾಪತಿ ಅವರ ವಿವೇಚನಾ ಮತವು ಪ್ರಾಣೇಶ್ ಅವರನ್ನು ಉಳಿಸಿದರೆ ಕೆಲ ತಿಂಗಳ ನಂತರ ಕಾಂಗ್ರೆಸ್ ಬಲ ಹೆಚ್ಚಾಗಲಿದ್ದು, ಆ ನಂತರವೇ ಸಭಾಪತಿ ಮತ್ತು ಉಪ ಸಭಾಪತಿ ಇಬ್ಬರ ವಿರುದ್ಧವೂ ಪದಚ್ಯುತಿ ನಿರ್ಣಯ ಮಂಡಿಸಲು ಪಕ್ಷದ ನಾಯಕರು ಸೂಚಿಸಿದ್ದಾರೆ. ಒಂದು ವೇಳೆ ಸಭಾಪತಿ ಸಹಕಾರ ದೊರೆತರೆ ಅವರನ್ನು ಮುಂದುವರಿಸಲು ಆಲೋಚಿಸಲಿದ್ದಾರೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪ್ರಾಣೇಶ್ ಆಯ್ಕೆ ಪ್ರಶ್ನೆ: ತೀರ್ಪು ಬಾಕಿ

ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶಿತ ಸದಸ್ಯರ ಮತಗಳನ್ನು ಬಳಸಿಕೊಂಡು ಪ್ರಾಣೇಶ್ ಅವರು ಗೆಲುವು ಸಾಧಿಸಿದ್ದಾರೆ ಎಂದು ಕಾಂಗ್ರೆಸ್‌ನ ಎ.ವಿ.ಗಾಯತ್ರಿ ಶಾಂತೇಗೌಡ ಕೋರ್ಟ್ ಮೆಟ್ಟಿಲೇರಿದ್ದರು.

ಮತ ಎಣಿಕೆ 2021ರ ಡಿಸೆಂಬರ್ 14ರಂದು ನಡೆದಿತ್ತು. ಬಿಜೆಪಿಯ ಪ್ರಾಣೇಶ್ 1,188 ಮತಗಳನ್ನು, ಗಾಯತ್ರಿ ಶಾಂತೇಗೌಡ ಅವರು 1,182 ಮತಗಳನ್ನು ಗಳಿಸಿದ್ದರು. ಪ್ರಾಣೇಶ್ ಆರು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದರು.

‘ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ 12 ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇರಲಿಲ್ಲ’ ಎಂದು ಹೈಕೋರ್ಟ್ 2022ರಲ್ಲಿ ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್ ಸಹ 12 ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮರು ಎಣಿಕೆ ಮಾಡಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿತ್ತು. ಮರು ಮತ ಎಣಿಕೆಯ ವರದಿಯನ್ನು ಜಿಲ್ಲಾಧಿಕಾರಿ 2025ರ ಮಾರ್ಚ್‌ನಲ್ಲೇ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ತೀರ್ಪು ಇನ್ನಷ್ಟೇ ಪ್ರಕಟವಾಗಬೇಕಿದೆ.

‘ಮಕ್ಕಳ ಹಕ್ಕು ರಕ್ಷಣೆಗೆ ಸಮನ್ವಯ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಹಕ್ಕುಗಳ ರಕ್ಷಣೆ, ಪೋಷಣಾ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವಿವಿಧ ಇಲಾಖೆಗಳ ನಡುವೆ ಸಮನ್ವಯ ಅಗತ್ಯ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಪ್ರಭಾರ ಅಧ್ಯಕ್ಷ ಶಶಿಧರ್ ಕೋಸಂಬೆ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಗುರುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ರಕ್ಷಣೆಗಾಗಿ ಹಲವು ಕಾನೂನುಗಳಿದ್ದರೂ ಮಕ್ಕಳ ವಿರುದ್ಧ ಲೈಂಗಿಕ ಕಿರುಕುಳ, ದೌರ್ಜನ್ಯ ಹೆಚ್ಚಾಗುತ್ತಿವೆ. ಮಕ್ಕಳ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ ಕಾಯ್ದೆ–2015), ಪೋಕ್ಸೊ ಕಾಯ್ದೆ, ಬಾಲ್ಯ ವಿವಾಹ ಕಾಯ್ದೆ ಹಾಗೂ ಮಕ್ಕಳ ರಕ್ಷಣಾ ನೀತಿ ಕುರಿತು ವಿದ್ಯಾರ್ಥಿಗಳಿಗೆ, ಜನರಿಗೆ ಅರಿವು ಮೂಡಿಸಬೇಕಿದೆ. ಜಿಲ್ಲಾವಾರು ವ್ಯಾಪ್ತಿಯಲ್ಲಿ ಪ್ರತಿಯೊಬ್ಬ ಇಲಾಖಾ ಅಧಿಕಾರಿಗಳು ಮಕ್ಕಳ ಕಾನೂನು ಬದ್ಧ ಹಕ್ಕುಗಳನ್ನು ರಕ್ಷಣೆ ಮಾಡಬೇಕು ಎಂದರು.

ರಾಜ್ಯದ ಎಲ್ಲಾ ಶಾಲೆಗಳು, ವಸತಿ ನಿಲಯಗಳ ಮಕ್ಕಳಿಗೆ ಹಿಂಸೆ, ದೌರ್ಜನ್ಯ, ಶೋಷಣೆಯಿಂದ ರಕ್ಷಣೆ ಒದಗಿಸುವ ಮೂಲಕ ಸುರಕ್ಷಿತ ವಾತಾವರಣ ಕಲ್ಪಿಸಬೇಕು ಎಂದು ಸೂಚಿಸಿದರು.

ಸುದ್ದಿ 2 ನಿಮಿಷ


ಉರ್ದು ಭಾಷೆಯ ಜಾಹೀರಾತು ಬಿಜೆಪಿ ಕೊಟ್ಟಿದ್ದೇಕೆ: ಸಿ.ಎಂ ಪ್ರಶ್ನೆ

ಬೆಂಗಳೂರು: ಉರ್ದು ಭಾಷೆಯಲ್ಲಿ ಸರ್ಕಾರಿ ಜಾಹೀರಾತು ಕುರಿತು ವಿರೋಧ ಪಕ್ಷಗಳ ಟೀಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ನೀವು ಅಧಿಕಾರದಲ್ಲಿದ್ದಾಗಲೂ ಜಾಹೀರಾತು ನೀಡಿ ಈಗ ನಮ್ಮ ವಿರುದ್ಧ ಮುಗಿಬೀಳುವುದು ಅಸಹ್ಯ ಮತ್ತು ಆತ್ಮವಂಚನೆಯ ಪರಮಾವಧಿ’ ಎಂದು ದೂರಿದ್ದಾರೆ.

ಈ ಬಗ್ಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಹೇಳಿಕೆ ನೀಡಿರುವ ಅವರು, ‘ನಿಮ್ಮ ವೀರಾವೇಶದ ಮಾತುಗಳನ್ನು ಆಲಿಸಿದೆ. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಅಧಿಕಾರದಲ್ಲಿದ್ದಾಗ ಯಾರ ಓಲೈಕೆಗಾಗಿ ಉರ್ದು ಜಾಹೀರಾತು ನೀಡಿದ್ದರು ಎಂಬ ಬಗ್ಗೆ ಹೇಳಿ ಪುಣ್ಯಕಟ್ಟಿಕೊಳ್ಳಿ’ ಎಂದು ಆಗ್ರಹಿಸಿದ್ದಾರೆ.

‘ಹೆಚ್ಚು ಜನರನ್ನು ತಲುಪುತ್ತದೆ ಎನ್ನುವ ಕಾರಣಕ್ಕಾಗಿ ಆಯಾ ಭಾಷೆಯ ಪತ್ರಿಕೆಗಳಿಗೆ ಅದೇ ಭಾಷೆಯಲ್ಲಿ ಜಾಹೀರಾತು ನೀಡುವುದು ಹಿಂದಿನಿಂದ ನಡೆದುಕೊಂಡು ಬಂದಿದೆ. ಬಿಜೆಪಿ ನಾಯಕರು ಹತ್ತಾರು ಬಾರಿ ಉರ್ದು ಜಾಹೀರಾತುಗಳನ್ನು ನೀಡಿದ್ದಾಗ, ಅವರಿಗೆ ಅದು ತುಷ್ಟೀಕರಣ ಎನಿಸಲಿಲ್ಲ. ನಮ್ಮ ಸರ್ಕಾರ ನೀಡಿರುವ ಉರ್ದು ಜಾಹೀರಾತು ಕಂಡೊಡನೆ ಅವರೊಳಗಿನ ಕನ್ನಡ ಪ್ರೇಮ ಇದ್ದಕ್ಕಿದ್ದಂತೆ ಎದ್ದುನಿಂತಿದೆ’ ಎಂದಿದ್ದಾರೆ.

‘ನಿಮ್ಮ ಈ ಹಿಪೋಕ್ರಸಿ ಗೋಸುಂಬೆಯನ್ನೇ ನಾಚಿಸುವಂತಿದೆ. ನೆಲ, ಜಲ, ಭಾಷೆಯ ಕಾಳಜಿಯ ಬಗ್ಗೆ ಬಿಜೆಪಿ ನಾಯಕರಿಂದ ಪಾಠ ಹೇಳಿಸಿಕೊಳ್ಳಬೇಕಾದ ದರಿದ್ರ ಸ್ಥಿತಿ ನಮಗೆ ಬಂದಿಲ್ಲ. ಕನ್ನಡ ಮತ್ತು ಕನ್ನಡಿಗರ ಹಿತ ಕಾಯುವ ವಿಚಾರ ಬಂದಾಗ ರಾಜಕೀಯ ಬದಿಗಿಟ್ಟು, ಹೋರಾಟದ ಮೊದಲ ಸಾಲಿನಲ್ಲಿ ನಿಂತವನು ನಾನು. ಇದಕ್ಕೆ ಇತಿಹಾಸ ಸಾಕ್ಷಿ. ನನಗೆ ಕನ್ನಡ ಬರಿ ಭಾಷೆಯಲ್ಲ, ಬದುಕು ಹೌದು’ ಎಂದು ಹೇಳಿದ್ದಾರೆ.



ಮಾರ್ಗಸೂಚಿ ದರ ಪರಿಷ್ಕರಣೆ ಸಮಿತಿ ರಚನೆಗೆ ಸೂಚನೆ

ಬೆಂಗಳೂರು: ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳ ಪರಿಷ್ಕರಣೆಗೆ ಸಮಿತಿ ರಚಿಸಲು ರಾಜ್ಯ ಸರ್ಕಾರ ಸೂಚಿಸಿದ್ದು, ಆಸ್ತಿ ಖರೀದಿ ಮತ್ತು ಮಾರಾಟ ದರಗಳು ತುಟ್ಟಿಯಾಗುವ ಸಾಧ್ಯತೆ ಇದೆ.

ಸ್ಥಿರಾಸ್ತಿ ಮೌಲ್ಯ ಪರಿಷ್ಕರಣೆಗೆ ಶಿಫಾರಸು ಮಾಡಲು ಸಮಿತಿ ರಚಿಸುವಂತೆ ರಾಜ್ಯ ಸರ್ಕಾರ ರಾಜ್ಯ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರಿಗೆ ಸೂಚಿಸಿದೆ. ಸರ್ಕಾರದ ಮೂಲಗಳ ಪ್ರಕಾರ ಕಟ್ಟಡ, ಜಮೀನು, ನಿವೇಶನಗಳ ಮಾರ್ಗಸೂಚಿ ದರವನ್ನು ಶೇ 10ರಿಂದ 15ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ.

ಪ್ರತಿವರ್ಷ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಮಾರ್ಗಸೂಚಿ ದರ ಪರಿಷ್ಕರಿಸುವ ಪರಿಪಾಟ ಇದೆ. ಈ ಉದ್ದೇಶಕ್ಕಾಗಿ, ಜನವರಿಯಲ್ಲೇ ಸಮಿತಿ ರಚಿಸಲಾಗುತ್ತಿತ್ತು. ಆದರೆ, ಕಳೆದ ಸಾಲಿನಲ್ಲಿ ಈ ಪ್ರಕ್ರಿಯೆಯನ್ನು ಸರ್ಕಾರ ನಡೆಸಿರಲಿಲ್ಲ. ಆದರೆ, ಸ್ಥಿರಾಸ್ತಿಗಳ ಮೇಲಿನ ವ್ಯವಹಾರಗಳ ದಸ್ತಾವೇಜುಗಳ ನೋಂದಣಿ ಶುಲ್ಕವನ್ನು ಶೇ 1ರಿಂದ ಶೇ 2ಕ್ಕೆ ಏರಿಸಲಾಗಿತ್ತು. ಇದರಿಂದ ಖರೀದಿದಾರರು ಆಸ್ತಿಯ ಮಾರ್ಗಸೂಚಿ ಮೌಲ್ಯದ ಶೇ 7.6ರಷ್ಟನ್ನು ನೋಂದಣಿ ವೇಳೆ ಭರಿಸುತ್ತಿದ್ದಾರೆ.

ಎರಡು ವರ್ಷಗಳ ಹಿಂದೆ ಮಾರುಕಟ್ಟೆ ದರವನ್ನೇ ಆಧಾರವಾಗಿಟ್ಟುಕೊಂಡು ಮಾರ್ಗಸೂಚಿ ದರವನ್ನು ಶೇ 30ರಿಂದ 50ರಷ್ಟು ಹೆಚ್ಚಿಸಲಾಗಿತ್ತು. ವರ್ಷದ ಹಿಂದೆ ದತ್ತು, ಅಡಮಾನ, ಹಸ್ತಾಂತರ ಪ್ರಮಾಣಪತ್ರ, ಒಪ್ಪಂದ ಪತ್ರಗಳು, ಸಾಲದ ಕರಾರು ಸೇರಿದಂತೆ 54 ನೋಂದಣಿಯೇತರ ದಾಖಲೆಗಳ ಮೇಲಿನ ಮುದ್ರಾಂಕ ಶುಲ್ಕವನ್ನು ಹೆಚ್ಚಳ ಮಾಡಲಾಗಿತ್ತು.

₹63 ಸಾವಿರ ಲಂಚಕ್ಕೆ ಬೇಡಿಕೆ: ಗ್ರಾಮ ಲೆಕ್ಕಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ ಜಿಲ್ಲೆ): ಸಮೀಪದ ನೆಗಳೂರ ಗ್ರಾಮದಲ್ಲಿ ಗುರುವಾರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಗ್ರಾಮದ ಲೆಕ್ಕಾಧಿಕಾರಿ ಫಕ್ಕಿರೇಶ ಬಾರ್ಕಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.


ಫಕ್ಕಿರೇಶ ಬಾರ್ಕಿ

‘ಬಸಾಪುರ ಗ್ರಾಮದ ಕರಿಯಲ್ಲಪ್ಪ ಕೇಸರಳ್ಳಿ ಎಂಬುವರು ಜಮೀನು ಖಾತೆ ಬದಲಾವಣೆಗಾಗಿ ಫಕ್ಕಿರೇಶ ಬಾರ್ಕಿ ಬಳಿ ಅರ್ಜಿ ಸಲ್ಲಿಸಿದ್ದರು. ₹63 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಫಕ್ಕಿರೇಶ, ಆರಂಭದಲ್ಲಿ ₹30 ಸಾವಿರ ಲಂಚ ಪಡೆದಿದ್ದ. ಕೆಲಸ ಮಾಡದೇ ಪುನಃ ₹ 30 ಸಾವಿರ ಲಂಚಕ್ಕೆ ಬೇಡಿಕೆ ಇರಿಸಿದ್ದ. ನೊಂದ ಕರಿಯಲ್ಲಪ್ಪ ದೂರು ನೀಡಿದ್ದರು. ₹8,500 ಲಂಚ ಪಡೆಯುತ್ತಿದ್ದ ವೇಳ ಫಕ್ಕಿರೇಶನನ್ನು ಬಂಧಿಸಲಾಗಿದೆ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ಆಶಾಕಿರಣ’ ಯೋಜನೆಯಡಿ ರಾಜ್ಯದಲ್ಲಿ 1.40 ಕೋಟಿ ಜನರಿಗೆ ನೇತ್ರ ತಪಾಸಣೆ

24.50 ಲಕ್ಷ ಜನರಲ್ಲಿ ದೃಷ್ಟಿದೋಷ ಪತ್ತೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ‘ಆಶಾಕಿರಣ’ ಯೋಜನೆಯಡಿ 1.40 ಕೋಟಿ ಮಂದಿಗೆ ಕಣ್ಣಿನ ತಪಾಸಣೆ ನಡೆಸಲಾಗಿದ್ದು, 24.50 ಲಕ್ಷ ಜನರಲ್ಲಿ ನೇತ್ರ ಸಮಸ್ಯೆ ದೃಢಪಟ್ಟಿದೆ.

ಡಿಜಿಟಲ್ ಸಾಧನಗಳ ಅತಿಯಾದ ಬಳಕೆ, ವಾಯು ಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಚಿಕ್ಕ ವಯಸ್ಸಿನಲ್ಲಿಯೇ ದೃಷ್ಟಿದೋಷ ಸಮಸ್ಯೆಗೆ ಒಳಪಡುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗುತ್ತಿದೆ. ಚಿಕಿತ್ಸೆ ವಿಳಂಬವಾದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದು, ದೃಷ್ಟಿ ನಷ್ಟವಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಆರಂಭಿಕ ಹಂತದಲ್ಲಿಯೇ ನೇತ್ರ ಸಮಸ್ಯೆ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿ ಮಾಂದ್ಯತೆ ನಿಯಂತ್ರಣ ಕಾರ್ಯಕ್ರಮದಡಿ ಈ ಯೋಜನೆಯನ್ನು 2022ರಲ್ಲಿ ಪ್ರಾರಂಭಿಸಲಾಗಿತ್ತು. ಮೊದಲೆರಡು ಹಂತದಲ್ಲಿ ಆಯ್ದ ಜಿಲ್ಲೆಗಳಲ್ಲಿ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ, ನೇತ್ರ ತಪಾಸಣೆ ನಡೆಸಿ ಸಮಸ್ಯೆ ಪತ್ತೆ ಮಾಡಿದ್ದರು. ಈಗ ರಾಜ್ಯದಾದ್ಯಂತ ‘ಆಶಾಕಿರಣ ದೃಷ್ಟಿ ಕೇಂದ್ರ’ಗಳಲ್ಲಿಯೂ ತಪಾಸಣೆ ನಡೆಸಲಾಗುತ್ತಿದೆ.



ಮೊದಲ ಹಂತದಲ್ಲಿ ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಯೋಜನೆ ಜಾರಿಗೆ ತರಲಾಗಿತ್ತು. ಎರಡನೇ ಹಂತದಲ್ಲಿ ಚಿತ್ರದುರ್ಗ, ಮಂಡ್ಯ, ರಾಯಚೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ವಿಸ್ತರಿಸಿ, ನೇತ್ರ ತಪಾಸಣೆ ಮಾಡಲಾಗಿತ್ತು. 2025ರ ಜುಲೈನಲ್ಲಿ ಈ ಯೋಜನೆಯನ್ನು ಮರುವಿನ್ಯಾಸ ಮಾಡಿ, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 393 ‘ಆಶಾಕಿರಣ ದೃಷ್ಟಿ ಕೇಂದ್ರ’ಗಳನ್ನು ಸ್ಥಾಪಿಸಲಾಗಿದೆ.

ಶಸ್ತ್ರಚಿಕಿತ್ಸೆ: ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗುತ್ತಿದೆ. ಕಣ್ಣಿನ ಪೊರೆ ಸಮಸ್ಯೆ ದೃಢಪಟ್ಟಲ್ಲಿ ಉನ್ನತ ಆರೋಗ್ಯ ಕೇಂದ್ರಗಳಿಗೆ ಶಿಫಾರಸು ಮಾಡಲಾಗುತ್ತಿದ್ದು, ಅಲ್ಲಿ ಹೆಚ್ಚಿನ ತಪಾಸಣೆಗೆ ಒಳಪಡಿಸಲಾಗುತ್ತಿದೆ. ಯೋಜನೆಯಡಿ ಈ ವರ್ಷ ಜನವರಿ ಅಂತ್ಯಕ್ಕೆ 4.19 ಲಕ್ಷ ಜನರಿಗೆ ಯಶಸ್ವಿ ಯಾಗಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಈ ಶಸ್ತ್ರಚಿಕಿತ್ಸೆಗಳಲ್ಲಿ 58,582 ಮಂದಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿದರೆ, ಉಳಿದವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

‘ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ನೇತ್ರ ತಪಾಸಣೆ ನಡೆಸಿ, ಸಮಸ್ಯೆಯನ್ನು ಪತ್ತೆ ಮಾಡಲಾಗುತ್ತಿದೆ. ಸಮಸ್ಯೆ ಇರುವವರಿಗೆ ಚಿಕಿತ್ಸೆ ಜತೆಗೆ ಕನ್ನಡಕ ವಿತರಣೆಗೆ ಕ್ರಮವಹಿಸಲಾಗಿದೆ. ಆಸ್ಪತ್ರೆಗಳಲ್ಲಿ ಶಾಶ್ವತ ದೃಷ್ಟಿ ಕೇಂದ್ರಗಳನ್ನು ಸ್ಥಾಪಿಸಿರುವುದರಿಂದ, ಸಾರ್ವಜನಿಕರು ಹತ್ತಿರದ ಕೇಂದ್ರಗಳಿಗೆ ತೆರಳಿ ತಪಾಸಣೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

4.3 ಲಕ್ಷ ಜನರಿಗೆ ಕನ್ನಡಕ

ಯೋಜನೆಯಡಿ ದೃಷ್ಟಿ ಸಮಸ್ಯೆ ಎದುರಿಸುತ್ತಿರುವವರಿಗೆ ಉಚಿತವಾಗಿ ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ. ತಪಾಸಣೆಗೆ ಒಳಪಟ್ಟವರಲ್ಲಿ 4.3 ಲಕ್ಷ ಜನರಿಗೆ ಕನ್ನಡಕ ನೀಡಲಾಗಿದೆ. ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ನೇತ್ರಾಧಿಕಾರಿಗಳು ಪರಿಶೀಲಿಸಿ, ಕನ್ನಡಕ ಒದಗಿಸುತ್ತಾರೆ.

ಮಕ್ಕಳಲ್ಲಿನ ದೃಷ್ಟಿ ಸಮಸ್ಯೆಗೆ ಸಂಬಂಧಿಸಿದಂತೆ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ತಪಾಸಣೆ ನಡೆಸಲಾಗುತ್ತಿದೆ. ಸಮಸ್ಯೆ ಪತ್ತೆಯಾದ ಮಕ್ಕಳಿಗೆ ಹೆಚ್ಚಿನ ನೇತ್ರ ತಪಾಸಣೆ ನಡೆಸಿ, ಕನ್ನಡಕಗಳನ್ನೂ ವಿತರಿಸಲಾಗುತ್ತಿದೆ.



ಆಶಾಕಿರಣ ಯೋಜನೆಗೆ ವಿಶ್ವ ಆರೋಗ್ಯ ಸಂಸ್ಥೆ ಶ್ಲಾಘಿಸಿದೆ. ಕಣ್ಣಿನ ಆರೋಗ್ಯ ಸೇವೆ ಸುಲಭವಾಗಿ ದೊರಕಿಸಲು ರಾಜ್ಯದಾದ್ಯಂತ ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

‘ಆರೋಗ್ಯ: ಗೈರಾದರೆ ಕಾನೂನು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಕರ್ತವ್ಯದ ಅವಧಿಯಲ್ಲಿ ಗೈರಾಗಿ ಸಾಮೂಹಿಕ ಮುಷ್ಕರ ಕೈಗೊಂಡಲ್ಲಿ ಕಾನೂನಿನ ಅಡಿ ಕ್ರಮ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿದೆ.


ಗುರುದತ್ತ ಹೆಗಡೆ

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ ಹಾಗೂ ಇಲಾಖೆಯ ಎಲ್ಲ ವೃಂದ ಸಂಘಗಳು ಮಾರ್ಚ್ 11ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುವುದಾಗಿ ಎಚ್ಚರಿಸಿವೆ.

ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ, ಮುಂಬಡ್ತಿ, ಕರ್ತವ್ಯದ ಬಳಿಕ ಖಾಸಗಿ ವ್ಯವಸ್ಥೆಯಡಿ ಚಿಕಿತ್ಸೆಗೆ ಅವಕಾಶ ಸೇರಿ 14 ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಿವೆ.

ಈ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳನ್ನು ವಿವರಿಸಿರುವ ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ಕಾನೂನಿನಡಿ ಲಭ್ಯವಿರುವ ಮಾರ್ಗಗಳನ್ನು ಅನುಸರಿಸಿ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಂತೆ ಮುಷ್ಕರಕ್ಕೆ ಮುಂದಾಗಿರುವವರಿಗೆ ಸೂಚಿಸಿದ್ದಾರೆ.

‘ಸಾಮೂಹಿಕ ಮುಷ್ಕರದಂತಹ ಕ್ರಮಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಲಿದೆ. ಆದ್ದರಿಂದ ಮುಷ್ಕರದಿಂದ ಹಿಂದೆ ಸರಿದು ಕರ್ತವ್ಯ ನಿರ್ವಹಿಸಬೇಕಿದೆ. ವೈದ್ಯರು ಹಾಗೂ ಸಿಬ್ಬಂದಿ ಮುಷ್ಕರದ ನಿಮಿತ್ತ ಕೆಲಸಕ್ಕೆ ಗೈರಾದಲ್ಲಿ, ಸಾರ್ವಜನಿಕರಿಗೆ ತೊಂದರೆಯಾದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಹೇಳಿದ್ದಾರೆ.

‘ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ತಿದ್ದುಪಡಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ 450 ವೈದ್ಯರಿಗೆ ಕಾಲಮಿತಿ ಮುಂಬಡ್ತಿ ನೀಡಲಾಗಿದೆ. 75 ಮಂದಿಯನ್ನು ಶುಶ್ರೂಷಾಧಿಕಾರಿ ಹುದ್ದೆಗೆ ಪದೋನ್ನತಿ ಮಾಡಲಾಗಿದೆ. ಎಲ್ಲ ವೃಂದದ ಸಿಬ್ಬಂದಿಗೆ ಪದೋನ್ನತಿ ನೀಡಲು ಶೀಘ್ರ ಕ್ರಮವಹಿಸಲಾಗುವುದು. ಇದೇ ಪ್ರಥಮ ಬಾರಿಗೆ ಕಳೆದ ವರ್ಷ 5,700 ವೈದ್ಯರ ಹಾಗೂ ಇತರೆ ಸಿಬ್ಬಂದಿಯನ್ನು ಪಾರದರ್ಶಕವಾಗಿ ವರ್ಗಾವಣೆ ಮಾಡಲಾಗಿದೆ. ಔಷಧಗಳ ಸಮರ್ಪಕ ಪೂರೈಕೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಅಗತ್ಯ ಕ್ರಮವಹಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಅಂಗನವಾಡಿ ನೌಕರರ ಸಂಘ ಆಗ್ರಹ • ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

‘ತಿಂಗಳ ಗೌರವ ಧನ ₹15 ಸಾವಿರಕ್ಕೇರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಅಂಗನವಾಡಿ ನೌಕರರ ತಿಂಗಳ ಗೌರವ ಧನವನ್ನು ₹15 ಸಾವಿರಕ್ಕೆ ಹೆಚ್ಚಿಸುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘವು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತೆಯರು, ಬೇಡಿಕೆ ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ತಿಂಗಳ ಗೌರವ ಧನ ₹15 ಸಾವಿರಕ್ಕೆ ಹೆಚ್ಚಳ ಹಾಗೂ ನಿವೃತ್ತಿ ಪರಿಹಾರವಾಗಿ ₹2 ಲಕ್ಷ ನೀಡುವುದಾಗಿ ಕಳೆದ ವಿಧಾನ ಸಭಾ ಚುನಾವಣೆ ಸಂದರ್ಭದಲ್ಲಿ ಭರವಸೆ ನೀಡಿ ಮೂರು ವರ್ಷ ಗತಿಸಿದರೂ ಬೇಡಿಕೆಗಳನ್ನು ಈಡೇರಿಸಿಲ್ಲ. ಮುಂಬರುವ ಬಜೆಟ್‌ನಲ್ಲಿ ತಿಂಗಳ ಗೌರವ ಧನ ಮತ್ತು ನಿವೃತ್ತಿ ಪರಿಹಾರ ಹಣವನ್ನು ಹೆಚ್ಚಿಸುವುದೂ ಸೇರಿ ನಿವೃತ್ತರಿಗೆ ಸುಪ್ರೀಂಕೋರ್ಟ್ ಆದೇಶದಂತೆ ಗ್ರಾಚ್ಯುಟಿ (ಉಪ ಧನ) ಹಣವನ್ನು ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಕಾರ್ಯಕರ್ತೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ ಮಾತನಾಡಿ, ‘ಅಂಗನವಾಡಿ ಮಕ್ಕಳಿಗೆ ನೀಡುತ್ತಿರುವ ಪೌಷ್ಟಿಕ ಆಹಾರದ ಪ್ರಮಾಣ ಕಡಿಮೆ ಇದ್ದು, ಎಲ್ಲಾ ಪದಾರ್ಥಗಳ ಪ್ರಮಾಣ ಹೆಚ್ಚಿಸಬೇಕು. ಐಸಿಡಿಎಸ್ ಕೆಲಸಗಳನ್ನು ಹೊರತುಪಡಿಸಿ, ಇತರ ಇಲಾಖೆಗಳ ಹೆಚ್ಚುವರಿ ಕೆಲಸಗಳನ್ನು ನೀಡಬಾರದು ಎನ್ನುವ ಇಲಾಖೆಯ ಆದೇಶ ಪಾಲಿಸಲು ಕ್ರಮ ವಹಿಸಬೇಕು. ಪ್ರತಿ ತಿಂಗಳು 5ರೊಳಗೆ ತಿಂಗಳ ವೇತನ (ಗೌರವ ಧನ) ಪಾವತಿ ಮಾಡಬೇಕು. ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕ ಇಂಟರ್‌ನೆಟ್ ಸಂಪರ್ಕ ಸಹಿತ ಗುಣಮಟ್ಟದ ಮೊಬೈಲ್ ಸೆಟ್‌ಗಳು, ಶುದ್ಧ ಕುಡಿಯುವ ನೀರು, ಶೌಚಾಲಯ ಸಹಿತ ಇತರ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಉಮಾದೇವಿ ಮಾತನಾಡಿ, ‘ದಶಕಗಳ ಹೋರಾಟದ ಪರಿಣಾಮವಾಗಿ ಕಾರ್ಯಕರ್ತೆಯರ ತಿಂಗಳ ಗೌರವ ಧನ ಗರಿಷ್ಠ ₹12,500 ಮತ್ತು ಸಹಾಯಕಿಯರ ಗೌರವ ಧನ ₹7,000 ಪಡೆಯುತ್ತಿದ್ದಾರೆ. ಅತ್ಯಲ್ಪ ಗೌರವಧನವು ನೌಕರರ ಕುಟುಂಬ ನಿರ್ವಹಣೆಗೆ ಸಾಕಾಗದೇ, ತೀವ್ರ ಆರ್ಥಿಕ ತೊಂದರೆಗಳನ್ನು ಎದುರಿಸುತ್ತಿವೆ. ಅಂಗನವಾಡಿ ನೌಕರರನ್ನು ‘ಸಿ’ ಮತ್ತು ‘ಡಿ’ ಗ್ರೂಪ್ ನೌಕರರೆಂದು ಘೋಷಿಸಿ, ಸರ್ಕಾರಿ ನೌಕರರ ಸರಿಸಮನಾಗಿ ವೇತನ ನೀಡಬೇಕು. ಇಲ್ಲದಿದ್ದರೆ, ಭಾರತ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ) ಶಿಫಾರಸಿನಂತೆ ಕಾರ್ಮಿಕರು ಎಂದು ಪರಿಗಣಿಸಿ ಕನಿಷ್ಠ ವೇತನ, ಇಪಿಎಫ್, ಇಎಸ್‌ಐ ಸಹಿತ ಶಾಸನ ಬದ್ಧವಾಗಿ ಇರುವ ಎಲ್ಲಾ ಸೌಕರ್ಯ ನೀಡಬೇಕು ಎಂದು ಮನವಿ ಮಾಡಿದರು.

ಮುಖಂಡರಾದ ಮಲ್ಲಿಕಾರ್ಜುನ ಎಚ್.ಟಿ, ವಿ.ಜಿ. ದೇಸಾಯಿ, ಶೋಭಾ ಪಾಟೀಲ್, ನಿಂಗಮ್ಮ ಮಠ, ನಾಗಮಣಿ, ಕಮಲಾ ತೇಲಿ, ರೇಣುಕಾ ಪಾಟೀಲ್, ರಾಧಾ ರೆಡ್ಡಿ, ಶೈಲಜಾ ಪಾಟೀಲ್ ಇದ್ದರು.

ನೌಕರರ ಪ್ರತಿಭಟನೆ ರೇಷ್ಮೆ ಸೀರೆ ಉತ್ಪಾದನೆ ವ್ಯತ್ಯಯ

ಮೈಸೂರು: ಜಿಲ್ಲೆಯ ತಿ.ನರಸೀಪುರದ ರೇಷ್ಮೆ ನೂಲು ತೆಗೆಯುವ ಕಾರ್ಖಾನೆಯ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ನಡೆಯುತ್ತಿರುವ ಪ್ರತಿಭಟನೆಗೆ ಇಲ್ಲಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ಕಾರ್ಖಾನೆಯ ನೌಕರರೂ ಬೆಂಬಲ ನೀಡಿದ್ದು, ಗುರುವಾರ ತಮ್ಮ ಕೆಲಸಕ್ಕೆ ಗೈರಾಗಿದ್ದರು.

ನೌಕರರಿಲ್ಲದೆ ಗುರುವಾರ ಮೈಸೂರು ರೇಷ್ಮೆ ಕಾರ್ಖಾನೆಯಲ್ಲಿ ಬಹುತೇಕ ಕೆಲಸ ಸ್ಥಗಿತಗೊಂಡಿದ್ದು, ಇದು ಮೈಸೂರು ರೇಷ್ಮೆ ಸೀರೆ ಉತ್ಪಾದನೆ ಮೇಲೆಯೂ ಪರಿಣಾಮ ಬೀರಿದೆ. ಶುಕ್ರವಾರವೂ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದು, ಉತ್ಪಾದನೆ ವ್ಯತ್ಯಯ ಆಗುವ ಸಾಧ್ಯತೆ ಇದೆ.

ಕಾರ್ಖಾನೆಯ 192 ನೌಕರರು ಕಳೆದ ಶನಿವಾರದಿಂದ ಪ್ರತಿಭಟನೆ ಆರಂಭಿಸಿದ್ದಾರೆ. ಇದರಿಂದ ಮೈಸೂರು ಹಾಗೂ ಚನ್ನಪಟ್ಟಣದಲ್ಲಿರುವ ರೇಷ್ಮೆ ಸೀರೆ ನೇಯ್ಗೆ ಕಾರ್ಖಾನೆಗಳಿಗೆ ನೂಲು ಪೂರೈಕೆಯು ಸ್ಥಗಿತಗೊಂಡಿದೆ. ಈ ಕುರಿತು ಪ್ರತಿಕ್ರಿಯೆಗೆ ಕಾರ್ಖಾನೆಯ ಅಧಿಕಾರಿಗಳು ದೂರವಾಣಿ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಶಿವಮೊಗ್ಗ: ಕಾನೂನು ಸಂಘರ್ಷಕ್ಕೊಳಗಾದ ಏಳು ಬಾಲಕರಿಂದ ಗುಂಪು ಹಲ್ಲೆ

ಸಂಕೇತ್ ಹತ್ಯೆಗೆ ಕ್ರಿಕೆಟ್ ಅಲ್ಲ, ಗಾಂಜಾ ಕಾರಣ?

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ನಗರದ ಹೊರವಲಯದಲ್ಲಿರುವ ಊರಗಡೂರಿನಲ್ಲಿ ಫೆ. 23ರಂದು ರಾತ್ರಿ ಕಾನೂನು ಸಂಘರ್ಷಕ್ಕೆ ಒಳಗಾದ ಏಳು ಬಾಲಕರ ಗುಂಪು ಎಸ್ಎಸ್ಎಲ್‌ಸಿ ವಿದ್ಯಾರ್ಥಿ ಸಂಕೇತ್ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಕ್ಕೆ ಕ್ರಿಕೆಟ್ ಪಂದ್ಯದ ವೈಮನಸ್ಸು ಕಾರಣವಲ್ಲ. ಬದಲಿಗೆ, ‘ಗಾಂಜಾ ಅಮಲು’ ಕಾರಣ ಎಂಬ ಸಂಗತಿ ಸಾರ್ವಜನಿಕರಲ್ಲಿ ಚರ್ಚೆಗೆ ಗ್ರಾಸವಾಗಿದೆ.


ಸಂಕೇತ್

‘ಮಗ ಕಬಡ್ಡಿ ಆಡುತ್ತಿದ್ದ. ಆ ಗುಂಪಿನಲ್ಲಿದ್ದ ಬಾಲಕರೊಂದಿಗೆ ಯಾವತ್ತೂ ಕ್ರಿಕೆಟ್ ಆಡಲು ಹೋಗಿಲ್ಲ. ಕ್ರಿಕೆಟ್ ಆಡುವಾಗಿನ ಜಗಳ ಎಂಬುದೆಲ್ಲ ತಪ್ಪು ಮಾಹಿತಿ’ ಎಂದು ಸಂಕೇತ್‌ನ ತಂದೆ ಶಿವಕುಮಾರ್ ಗುರುವಾರ ‘ಪ್ರಜಾವಾಣಿ’ಗೆ ತಿಳಿಸಿದರು.

ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳು ಗಾಂಜಾ ಸೇವಿಸಿದ್ದರ ಕುರಿತು ಖಚಿತಪಡಿಸಿಕೊಳ್ಳಲು ಮೂತ್ರ, ರಕ್ತದ ಜೊತೆಗೆ ಅವರ ಕೂದಲು ಮಾದರಿ ಪರೀಕ್ಷೆಗೆ ಕಳುಹಿಸಿದ್ದು, ವಾರದಲ್ಲಿ ವರದಿ ಬರಲಿದೆ

ಬಿ.ನಿಖಿಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

ಗಾಂಜಾ ಅಮಲು: ‘ವಾರದ ಹಿಂದೆ ಸಂಕೇತ್ ಓದುತ್ತಿದ್ದ ಸರ್ಕಾರಿ ಶಾಲೆಯ ಹಿಂಭಾಗದ ನಿರ್ಮಾಣ ಹಂತದ ಕಟ್ಟಡದಲ್ಲಿ ಶಾಲೆಯ ನಾಲ್ವರು ಹಳೆಯ ವಿದ್ಯಾರ್ಥಿಗಳು ಕುಳಿತು ಗಾಂಜಾ ಸೇದುತ್ತಿದ್ದರು. ಆ ಗುಂಪಿನಲ್ಲಿದ್ದ ಹುಡುಗನೊಬ್ಬ ಮತ್ತಿನಲ್ಲಿ ಶಾಲೆಯತ್ತ ಕಲ್ಲು ಎಸೆದಿದ್ದಾನೆ. ಅದು ಕಿಟಕಿ ಬಳಿ ಕುಳಿತಿದ್ದ ಸಂಕೇತ್‌ಗೆ ತಗುಲಿದೆ. ಅದು ಶಿಕ್ಷಕರ ಗಮನಕ್ಕೆ ಬರುತ್ತಿದ್ದಂತೆಯೇ, ತುಂಗಾ ನಗರ ಠಾಣೆಯ ಪೊಲೀಸರನ್ನು ಕರೆಸಿ ಕಲ್ಲು ಹೊಡೆದವರನ್ನು ಎಳೆದು ತಂದು ಎಚ್ಚರಿಕೆ ನೀಡಿದ್ದಾರೆ. ಪಾಲಕರ ಗಮನಕ್ಕೂ ತಂದು ಬಾಲಕರ ಉದ್ದುದ್ದನೆಯ ಕೂದಲು ಕತ್ತರಿಸಿ ಕಳಿಸಿದ್ದಾರೆ. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡ ಗುಂಪು ಸಂಕೇತ್‌ನ ವಿರುದ್ಧ ಹಗೆ ಸಾಧಿಸಿದೆ’ ಎಂದು ಶಿವಕುಮಾರ್ ಅವರ ಸ್ನೇಹಿತ ಯಾಸೀನ್ ಹೇಳಿದರು.

‘ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂಬ ಕಾರಣಕ್ಕೆ ಪಕ್ಕದ ಭಾಸ್ಕರ್ ನಗರದಲ್ಲಿ ವಾಸವಿದ್ದ ಶಾಲೆಯ ಶಿಕ್ಷಕಿಯ ಮನೆಗೂ ಆ ಹುಡುಗರು ಕಲ್ಲು ಹೊಡೆದಿದ್ದರು. ಹೆದರಿಕೊಂಡು ಅವರು ಮನೆ ಬದಲಾಯಿಸಿದ್ದರು. ಆಗಲೇ ಪೊಲೀಸರಿಗೆ ದೂರು ಕೊಟ್ಟಿದ್ದರೆ ಆ ಹುಡುಗರು ಈ ರೀತಿಯ ಘಟನೆಗೆ ಕಾರಣರಾಗುತ್ತಿರಲಿಲ್ಲ’ ಎಂಬುದು ಸ್ಥಳೀಯ ನಿವಾಸಿ ಶಾರುಖ್ ಅಭಿಪ್ರಾಯ.

‘ಶಿಕ್ಷಕಿಯ ಮನೆಗೆ ಕಲ್ಲು ಹೊಡೆದದ್ದು ಹಳೆಯ ಘಟನೆ. ಆದರೆ, ವಾರದ ಹಿಂದೆ ಪೊಲೀಸರನ್ನು ಕರೆಯಿಸಿ ಶಾಲೆಗೆ ಕಲ್ಲು ಎಸೆದಿದ್ದ ಹುಡುಗರನ್ನು ಶಿಕ್ಷಿಸಿದ್ದು ನಿಜ. ಅದೇ ಸಂಕೇತ್ ಮೇಲಿನ ಹಗೆತನಕ್ಕೆ ಕಾರಣ ಎಂಬುದು ಗೊತ್ತಿಲ್ಲ’ ಎಂದು ಮುಖ್ಯಶಿಕ್ಷಕ ಶಿವರಾಂ ಪ್ರತಿಕ್ರಿಯಿಸಿದರು.

‘ನಮ್ಮ ಏರಿಯಾದಲ್ಲಿ ಮೊದಲು ದಂಧೆಕೋರರು ಗಾಂಜಾ ಮಾರಾಟಕ್ಕೆ ಕೆಲವು ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿದ್ದರು. ಅವರು ಪೊಲೀಸರಿಗೆ ಸಿಕ್ಕಿಬಿದ್ದರೂ ಕೇಸ್ ಆಗುವುದಿಲ್ಲ. ಎಚ್ಚರಿಕೆ ಕೊಟ್ಟು ಕಳಿಸುತ್ತಾರೆ ಎಂಬುದೇ ತಂತ್ರ. ಆದರೆ, ಈಗ ಅದೇ ಬಾಲಕರು ಗಾಂಜಾ ಸೇವಿಸಿ ಉಪಟಳ ಕೊಡುತ್ತಿದ್ದಾರೆ. ಓಣಿಯಲ್ಲಿ ಗುಂಪು ಗುಂಪಾಗಿ ಬೈಕ್‌ಗಳಲ್ಲಿ ಸಂಚರಿಸುತ್ತಾ ಗಲಾಟೆ ಮಾಡುತ್ತ ಓಡಾಡುತ್ತಾರೆ. ಪ್ರಶ್ನಿಸಿದವರನ್ನು ಥಳಿಸುತ್ತಾರೆ. ಅದರ ಮುಂದುವರಿದ ಭಾಗವೇ ಸಂಕೇತ್ ಹತ್ಯೆ’ ಎಂದು ಸೂಳೆಬೈಲ್ ನಿವಾಸಿ ಗೋಪಿ ಹೇಳುತ್ತಾರೆ.

‘ಅಮಲಲ್ಲಿರುತ್ತಾರೆ, ಪ್ರಶ್ನಿಸಿದರೆ ಹೊಡೆಯುತ್ತಾರೆ’

‘ಊರಲ್ಲಿರುವ ಕೆಲವು ಮಕ್ಕಳಲ್ಲಿ ಗಾಂಜಾ, ಪಂಕ್ಚರ್ ಹಾಕಲು ಬಳಸುವ ಸಲ್ಯೂಶನ್ ಸೇವಿಸುವ ಚಟ ವಿಪರೀತವಾಗಿದೆ. ಎದೆ ಎತ್ತರಕ್ಕೆ ಬೆಳೆದ ಮಕ್ಕಳು ಮಾತು ಕೇಳುತ್ತಿಲ್ಲ. ಶಾಲೆ ಬಿಟ್ಟು ಅಲೆಯುತ್ತಾರೆ. ಕೆಲಸಕ್ಕೂ ಹೋಗುವುದಿಲ್ಲ. ಸದಾ ಅಮಲಿನಲ್ಲಿರುತ್ತಾರೆ. ಪ್ರಶ್ನೆ ಮಾಡಿದರೆ ನಮಗೇ ಹೊಡೆಯುತ್ತಾರೆ’ ಎಂದು ಊರಗಡೂರಿನ ಜಹೀರಾಬಿ ಅಳಲು ತೋಡಿಕೊಂಡರು.

‘ಓಣಿಯಲ್ಲಿ ಗಾಂಜಾ ಮಾರುವವರ ಬಗ್ಗೆ ಪೊಲೀಸರಿಗೆ ದೂರು ಕೊಟ್ಟರೆ, ಸಂಜೆಯೇ ದಂಧೆಕೋರರ ಗುಂಪು ಮಚ್ಚು ಹಿಡಿದು ಬರುತ್ತದೆ. ಬೆದರಿಕೆ ಹಾಕಿ, ಮನೆ ಮುಂದಿನ ವಾಹನದ ಗಾಜು ಒಡೆದು ಹಾಕುತ್ತಾರೆ. ದೂರು ಕೊಟ್ಟವರ ಮಾಹಿತಿಯನ್ನು ಪೊಲೀಸರೇ ಅವರಿಗೆ ಕೊಡುತ್ತಾರೆ. ಯಾರ ಬಳಿ ನಮ್ಮ ಸಂಕಷ್ಟ ಹೇಳಿಕೊಳ್ಳುವುದು?’ ಎಂದು ಪ್ರಶ್ನಿಸಿದರು.

ನಾಳೆಯಿಂದ ದ್ವಿತೀಯ ಪಿಯು ಪರೀಕ್ಷೆ

ಪ್ರಶ್ನೆ ಪತ್ರಿಕೆ ಮಾರಾಟವಾಗುತ್ತಿವೆ ಎಂದು ಕೆಲ ಮಾಧ್ಯಮಗಳಲ್ಲಿ ಸುದ್ದಿ ಹರಡಿಸುತ್ತಿದ್ದು, ವಿದ್ಯಾರ್ಥಿಗಳು ಕಿವಿಗೊಡಬಾರದು. ಅಂತಹ ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು

ಪ್ರಕಾಶ್ ನಿಟ್ಟಾಲಿ, ಅಧ್ಯಕ್ಷ, ಪರೀಕ್ಷಾ ಮಂಡಳಿ

ಒಂದನೇ ಪುಟದಿಂದ...

ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದೆ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈಗಾಗಲೇ ಮುಂಜಾಗ್ರತಾ ಕ್ರಮ ಕೈಗೊಂಡಿದ್ದಾರೆ. ಪರೀಕ್ಷಾ ಕೇಂದ್ರದ ಒಳಗೆ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ನಿಷೇಧಿಸಲಾಗಿದೆ. ಹಿಂದಿನ ವರ್ಷದಂತೆ ಈ ಬಾರಿಯೂ ವಸ್ತ್ರಸಂಹಿತೆ ಇರುತ್ತದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ದೇಶಕ ಗೋಪಾಲಕೃಷ್ಣ ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಬೇಕಿರುವ ಕನಿಷ್ಠ ಅಂಕವನ್ನು ಈ ಬಾರಿ ಶೇ 33ಕ್ಕೆ ನಿಗದಿ ಮಾಡಲಾಗಿದೆ. ಹೊಸ, ಪುನರಾವರ್ತಿತ ಹಾಗೂ ಖಾಸಗಿ ವಿದ್ಯಾರ್ಥಿಗಳಿಗೆ ಈ ನಿಯಮ ಅನ್ವಯವಾಗಲಿದೆ.

ದ್ವಿತೀಯ ಪಿಯು ವೇಳಾಪಟ್ಟಿ


ಫೆ.28–ಕನ್ನಡ, ಅರೇಬಿಕ್, ಮಾರ್ಚ್ 2–ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ, 3–ಇಂಗ್ಲಿಷ್, 4–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲಯಾಳಂ, 5–ಇತಿಹಾಸ, 6–ಭೌತ ವಿಜ್ಞಾನ, 7–ಐಚ್ಛಿಕ ಕನ್ನಡ, ಭೂಗರ್ಭ ಶಾಸ್ತ್ರ, ವ್ಯವಹಾರ ಅಧ್ಯಯನ, 9–ರಸಾಯನ ವಿಜ್ಞಾನ, ಶಿಕ್ಷಣಶಾಸ್ತ್ರ, ಮೂಲಗಣಿತ, 10–ಅರ್ಥಶಾಸ್ತ್ರ, 11–ತರ್ಕಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗೃಹ ವಿಜ್ಞಾನ, 12–ಹಿಂದಿ, 13–ರಾಜ್ಯಶಾಸ್ತ್ರ, 14–ಲೆಕ್ಕಶಾಸ್ತ್ರ, ಗಣಿತ, 16–ಸಮಾಜ ಶಾಸ್ತ್ರ, ಜೀವ ವಿಜ್ಞಾನ, ಗಣಕ ವಿಜ್ಞಾನ, 17–ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್.

ಜಮೆಯಾಗದ ಹಿಂದಿನ ಪರೀಕ್ಷಾ ಹಣ

2025ರ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಉಪನ್ಯಾಸಕರಿಗೆ ಸಂಭಾವನೆ ಇದುವರೆಗೂ ಜಮೆಯಾಗಿಲ್ಲ ಎಂದು ಹಲವು ಉಪನ್ಯಾಸಕರು ದೂರಿದ್ದಾರೆ.

ಕೊಠಡಿ ಮೇಲ್ವಿಚಾರಕರು, ಅಧೀಕ್ಷಕರು, ಸಹ ಅಧೀಕ್ಷಕರು, ಜಾಗೃತ ದಳ, ವಿಶೇಷ ಜಾಗೃತ ದಳ ಸೇರಿದಂತೆ ವಿವಿಧ ಹಂತದಲ್ಲಿ ಕೆಲಸ ಮಾಡಿದ ಉಪನ್ಯಾಸರಿಗೆ ಪರೀಕ್ಷಾ ಮಂಡಳಿ ಇದುವರೆಗೂ ಹಣ ಪಾವತಿಸಿಲ್ಲ. ಬಾಕಿ ಹಣ ನೀಡದಿದ್ದರೂ ಪರೀಕ್ಷಾ ಕಾರ್ಯಕ್ಕೆ ಹಾಜರಾಗುವಂತೆ ಸೂಚನೆ ನೀಡುವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದ್ದಾರೆ.

ಸಿನಿಮಾ ರಂಜನೆ



ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ವೀರ ಕಂಬಳ' ಚಿತ್ರ ಈ ವಾರ ತೆರೆ ಕಾಣುತ್ತಿದೆ. ಚಿತ್ರರಂಗದಲ್ಲಿ ನಾಲ್ಕು ದಶಕಗಳಿಗೂ ಅಧಿಕ ಅನುಭವ ಹೊಂದಿರುವ ಅವರು, ತಮ್ಮ ಸಿನಿಮಾ ಹಾಗೂ ಬದಲಾಗುತ್ತಿರುವ ಚಿತ್ರೋದ್ಯಮ, ಚಿತ್ರರಂಗದ ಇಂದಿನ ಸ್ಥಿತಿಗತಿ ಕುರಿತು ಮಾತನಾಡಿದ್ದಾರೆ.

ರಾಜೇಂದ್ರ ಸಿಂಗ್ ಬಾಬು

'ಭಾವನೆಗಳು ಎಂದಿಗೂ ಬದಲಾಗುವುದಿಲ್ಲ'

'ನಾಗರಹೊಳೆ', 'ಅಂತ', 'ಬಂಧನ' ಚಿತ್ರದಿಂದ ಹಿಡಿದು 'ಕುರಿಗಳು ಸಾರ್ ಕುರಿಗಳು', 'ಕೋತಿಗಳು ಸಾರ್ ಕೋತಿಗಳು' ಮೊದಲಾದ ಸಿನಿಮಾಗಳನ್ನು ಮಾಡಿ ಯಶಸ್ಸು ಕಂಡ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು. 70ರ ದಶಕದಲ್ಲಿ ಸಿನಿಪಯಣ ಪ್ರಾರಂಭಿಸಿದ ಅವರು, ಸದ್ಯ ತುಳುನಾಡಿನ ಕಂಬಳ ಕುರಿತಾದ ಸಿನಿಮಾ 'ವೀರ ಕಂಬಳ'ದೊಂದಿಗೆ ಮತ್ತೆ ಸುದ್ದಿಯಲ್ಲಿದ್ದಾರೆ.

'ವೀರ ಕಂಬಳ' ನನ್ನ ಹಿಂದಿನ ಸಿನಿಮಾಗಳ ರೀತಿಯಲ್ಲಿಯೇ ಬ್ರಿಡ್ಜ್ ಸಿನಿಮಾ. ಜನಕ್ಕೂ ಆಸಕ್ತಿದಾಯಕವಾಗಿದ್ದು, ಒಂದು ಗಟ್ಟಿಯಾದ ಸಂದೇಶವನ್ನು ಹೊಂದಿರುವ ಕಥೆ. ನಾನು ಮೊದಲಿನಿಂದಲೂ ಇದೇ ತತ್ವದಡಿಯಲ್ಲಿ ಸಿನಿಮಾ ಮಾಡಿಕೊಂಡು ಬಂದಿರುವೆ. ಪೂರ್ಣ ಕಮರ್ಷಿಯಲ್ ಕೂಡ ಅಲ್ಲ, ತೀರ ಬೋರ್ ಎನ್ನಿಸುವ ಸಿನಿಮಾವೂ ಅಲ್ಲ. ಎರಡರ ನಡುವೆ ನಿಲ್ಲುವ ಚಿತ್ರ. ಕುಟುಂಬ ಕುಳಿತು ನೋಡಬಹುದಾದ, ಹೊಸತನ ಇರುವ ಕಥೆ. ಕಂಬಳ ಕುರಿತು ಆಳವಾದ ವಿಷಯಗಳನ್ನು ಹೊಂದಿದೆ' ಎಂದು ಮಾತು ಪ್ರಾರಂಭಿಸಿದರು.

'ನನ್ನ ಹಿಂದಿನ ಸಿನಿಮಾಗಳ ಕಥೆಗಳನ್ನು ನೋಡಿಕೊಂಡು ಬಂದರೆ, ನಾನು ಪ್ರತಿ ಸಲವೂ ರಿಸ್ಕ್ ತೆಗೆದುಕೊಂಡೇ ಸಿನಿಮಾ ಮಾಡಿರುವೆ. ನಾಯಕನೇ ಖಳನಾಗುವ ಪರಿಕಲ್ಪನೆಯ 'ಅಂತ' ಚಿತ್ರವನ್ನು ಆವರೆಗೆ ಯಾರೂ ಪ್ರಯತ್ನಿಸಿರಲಿಲ್ಲ. 'ನಾ ನಿನ್ನ ಮರೆಯಲಾರೆ' ಬಳಿಕ ಲಕ್ಷ್ಮಿಯನ್ನು ಆಯ್ಕೆ ಮಾಡಿಕೊಂಡು ಈ ರೀತಿ ಸಿನಿಮಾ ಮಾಡಿದರೆ ಯಾರು ನೋಡುತ್ತಾರೆ ಎಂದು ಮೂದಲಿಸಿದರು. ಬಿಡುಗಡೆ ಬಳಿಕ ಆ ಚಿತ್ರ ಯಾವ ರೀತಿ ಸದ್ದು ಮಾಡಿತು ಎಂಬುದು ಗೊತ್ತೇ ಇದೆ. 'ಬಂಧನ' ಸಿನಿಮಾ ಮಾಡಿದಾಗಲೂ ಇದೇ ರೀತಿ ಟೀಕೆ ವ್ಯಕ್ತವಾಗಿತ್ತು. ಯಾವ ದೊಡ್ಡ ನಾಯಕರು ಇಲ್ಲದೆ ಕುರಿ, ಕೋತಿಗಳು ರೀತಿಯ ಸಿನಿಮಾ ಮಾಡಿದೆ. ಅದೇ ರೀತಿಯ ರಿಸ್ಕ್ 'ವೀರ ಕಂಬಳ'ದಲ್ಲಿ ಕೂಡ ತೆಗೆದುಕೊಂಡಿರುವೆ' ಎನ್ನುತ್ತಾರೆ ಅವರು.

'700 ವರ್ಷಗಳ ಸಾಂಸ್ಕೃತಿಕ ಇತಿಹಾಸ ಹೊಂದಿರುವ ಜನಪದ ಕ್ರೀಡೆ. ಬೇರೆ ದೇಶಗಳಲ್ಲಿ ಕೋಣವನ್ನು ಕೊಲ್ಲುತ್ತಾರೆ. ಆದರೆ ತುಳುನಾಡಿನಲ್ಲಿ ಅದೇ ಪ್ರಾಣಿಯನ್ನು ದೈವ ಕ್ರೀಡೆಯಾದ ಕಂಬಳಕ್ಕೆ ಬಳಸುತ್ತಾರೆ. ಬಹಳ ಪ್ರೀತಿಯಿಂದ ಸಾಕುತ್ತಾರೆ. ಆ ಭಾವನೆಗಳು ಎಂದಿಗೂ ಶಾಶ್ವತ' ಎಂಬುದು ಅವರ ಅಭಿಪ್ರಾಯ.

'ಪ್ರೇಕ್ಷಕರು ಯಾವತ್ತಿಗೂ ಸರಿ. ಆಯಾಕಾಲಕ್ಕೆ ಆಯಾ ಸಿನಿಮಾಗಳನ್ನು ನೋಡಿದ್ದಾರೆ. 'ಶೋಲೆ'ಯನ್ನು ಸ್ವೀಕರಿಸಿದ್ದಾರೆ, 'ಬಂಗಾರದ ಮನುಷ್ಯ' ಚಿತ್ರವನ್ನು ನೋಡಿದ್ದಾರೆ. 'ಓಂ' ಸಿನಿಮಾವನ್ನು ಗೆಲ್ಲಿಸಿದ್ದಾರೆ. 'ಕೆಜಿಎಫ್' ಚಿತ್ರವನ್ನು ಮೆಚ್ಚಿದ್ದಾರೆ. ಅವರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಅವರು ಅಪ್‌ಡೇಟ್ ಆಗುತ್ತಲೇ ಬಂದಿದ್ದಾರೆ' ಎನ್ನುತ್ತಾರೆ ಅವರು.

'ಇವತ್ತು ತಂತ್ರಜ್ಞಾನ ಬದಲಾಗಿರಬಹುದು. ಆದರೆ ಮನುಷ್ಯ ಭಾವನೆಗಳು ಬದಲಾಗಿಲ್ಲ. ಯಾವ ತಂತ್ರಜ್ಞಾನ ಬಂದರೂ ಅದನ್ನು ಬದಲಿಸಲು ಸಾಧ್ಯವಿಲ್ಲ. ರಾಮಾಯಣ, ಮಹಾಭಾರತ ತೆಗೆದುಕೊಂಡರೆ ಅದರ ಕಥೆಗಳನ್ನು, ಪಾತ್ರಗಳನ್ನು ಅಲ್ಲಾಡಿಸಲು ಸಾಧ್ಯವಿಲ್ಲ. ಚಿತ್ರದಲ್ಲಿ ಕಣ್ಣೀರು ಬರಿಸುವ ದೃಶ್ಯವೆಂದರೆ, ಅದು ಮನುಷ್ಯನ ಭಾವನೆ. ಆವತ್ತಿಗೂ ಇವತ್ತಿಗೂ ಅದು ಅಳುವನ್ನು ತರಿಸುವ ಸನ್ನಿವೇಶ. ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ತಂತ್ರಜ್ಞಾನದಲ್ಲಿ ಸಾಕಷ್ಟು ಅಪ್‌ಡೇಟ್ ಆಗಿದೆ. ಅದನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಬೇಕು. ಅದರ ಹೊರತಾಗಿ ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಹಿಡಿದಿಡುವಲ್ಲಿ ನಾವು ವಿಫಲರಾಗುತ್ತಿದ್ದೇವೆ' ಎಂಬುದು ಅವರ ಅಭಿಪ್ರಾಯ.

'ಬೇರೆ ಭಾಷೆಯ ನಾಲ್ಕಾರು ಸಿನಿಮಾಗಳು, ವೆಬ್ ಸರಣಿಗಳನ್ನು ನೋಡಿಕೊಂಡು ಬಂದು, ಅದನ್ನೇ ನಕಲು ಮಾಡಿ ಇಲ್ಲಿ ಹೇಳಲು ಯತ್ನಿಸುತ್ತೇವೆ. ನಮ್ಮ ನೆಲದ ಕಥೆಗಳನ್ನು, ಮನುಷ್ಯ ಭಾವನೆಗಳನ್ನು ದೃಶ್ಯಗಳ ಮೂಲಕ ದಾಟಿಸಬೇಕು. ಆ ವಿಷಯದಲ್ಲಿ ನಾವು ಸೋತಿದ್ದೇವೆ. ಸಿನಿಮಾ ಭಾಷೆಯ ಸರಿಯಾದ ಕಲಿಕೆ ಇಲ್ಲದೆ ಸಿನಿಮಾಗಳಾಗುತ್ತಿವೆ. ಹಾಗಾಗಿ ಇಲ್ಲಿ ಯಶಸ್ಸಿನ ಪ್ರಮಾಣ ಕುಸಿಯುತ್ತಿದೆ. ದೃಶ್ಯ ಮಾಧ್ಯಮದ ಭಾಷೆಯನ್ನು ಕಲಿತು ಸಿನಿಮಾ ಮಾಡಬೇಕು' ಎಂದು ಮಾತಿಗೆ ವಿರಾಮವಿತ್ತರು.

ವೀರ ಕಂಬಳ ಚಿತ್ರದ ದೃಶ್ಯ



'ಸೋಲು-ಗೆಲುವು ಪ್ರೇಕ್ಷಕರು ನಿರ್ಧರಿಸುತ್ತಾರೆ'

ಸತೀಶ್ ನೀನಾಸಂ, ಸಪ್ತಮಿ ಗೌಡ ನಟನೆಯ 'ದಿ ರೈಸ್ ಆಫ್ ಅಶೋಕ' ಚಿತ್ರ ಇಂದು (ಫೆ.27) ತೆರೆ ಕಾಣುತ್ತಿದೆ. ಎಲ್ಲ ಸಮಸ್ಯೆಗಳನ್ನು ದಾಟಿ ಸಿನಿಮಾ ಬಿಡುಗಡೆಯಾಗುತ್ತಿರುವ ಹಾಗೂ ಈ ಪಯಣದಲ್ಲಿ ತಮಗಾದ ಅನುಭವಗಳ ಕುರಿತು ಸತೀಶ್ ನೀನಾಸಂ ಮಾತನಾಡಿದ್ದಾರೆ.



ಸತೀಶ್ ನೀನಾಸಂ

• ವಿನಾಯಕ ಕೆ.ಎಸ್.

• **'ಅಶೋಕ ಬ್ಲೇಡ್' ಎಂದಿದ್ದ ಚಿತ್ರದ ಶೀರ್ಷಿಕೆ ನಂತರ ಬದಲಾಗಿದ್ದು ಏಕೆ?**

'ಅಶೋಕ ಬ್ಲೇಡ್' ಎಂಬುದು ಸೀಮಿತವಾಗುತ್ತದೆ, ಒಂದು ಚೌಕಟ್ಟಿನೊಂದಿಗೆ ಕಥೆಗೆ ಅರ್ಥಪೂರ್ಣವಾಗುವುದಿಲ್ಲ ಎನಿಸಿತು. ಹೀಗಾಗಿ ಶೀರ್ಷಿಕೆ ಬದಲಿಸಿದೆವು. ಇದು ಅಶೋಕನ ಕಥೆಯಾಗಿರುವುದರಿಂದ 'ದಿ ರೈಸ್ ಆಫ್ ಅಶೋಕ' ಕಥೆಯನ್ನು ಪರಿಪೂರ್ಣವಾಗಿ ಪ್ರತಿನಿಧಿಸುವ ಶೀರ್ಷಿಕೆ.

• **ಯಾವ ಜಾನರ್‌ನ ಸಿನಿಮಾವಿದು?**

ಆ್ಯಕ್ಷನ್, ಎಂಟರ್‌ಟೈನ್‌ಮೆಂಟ್ ಜಾನರ್ ಸಿನಿಮಾ. ಎಲ್ಲಾ ವರ್ಗದ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಮಾಡಿದ ಕಥೆ. ಒಂದು ಕಾಲಘಟ್ಟದ, 1970ರ ಆಸುಪಾಸಿನ ಕಥೆ ಇದು.

• **ಯಾವುದೇ ಒಂದು ಪ್ರಾಂತ್ಯ, ಸಮುದಾಯಕ್ಕೆ ಸೀಮಿತವಾದ ಕಥೆಯೇ?**

ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು ಸುತ್ತಮುತ್ತಲು ಚಿತ್ರೀಕರಿಸಿದ್ದೇವೆ. ಆದರೆ ಭಾಷೆ ಯಾವುದೇ ಸಮುದಾಯ, ಪ್ರಾಂತ್ಯಕ್ಕೆ ಸೀಮಿತವಾಗಿಲ್ಲ. ಇದೊಂದು ಕಾಲ್ಪನಿಕ ಕಥೆ. ಕೆಲ ನೈಜ ಘಟನೆಗಳನ್ನಿಟ್ಟುಕೊಂಡು ಮಾಡಿರುವ ಸಿನಿಮಾ.

• **ನಾಲ್ಕಾರು ತಿಂಗಳ ಹಿಂದೆಯೇ ಈ ಸಿನಿಮಾದ ಪ್ರಚಾರ ಪ್ರಾರಂಭಿಸಿದ್ದೀರಿ. ನಿಮ್ಮ ಹಿಂದಿನ ಎಲ್ಲ ಸಿನಿಮಾಗಳಿಗಿಂತ ಹೆಚ್ಚು ಶ್ರಮ ಇದರಲ್ಲಿ ಕಾಣುತ್ತಿದೆಯಲ್ಲವೇ?**

ನಾನು ತುಂಬ ನಂಬಿ, ಮೆಚ್ಚಿಕೊಂಡು, ಆತ್ಮವಿಶ್ವಾಸದಿಂದ ಹತ್ತು ಸಿನಿಮಾಗಳಿಗೆ ಹಾಕುವ ಶ್ರಮವನ್ನು ಈ ಸಿನಿಮಾದ ಪ್ರಚಾರಕ್ಕೆ ಹಾಕಿರುವೆ. ಸಿನಿಮಾ ತುಂಬ ಚೆನ್ನಾಗಿ ಬಂದಿದೆ. ಹೀಗಾಗಿಯೇ ತಮಿಳು, ತೆಲುಗಿನಲ್ಲಿಯೂ ನೂರಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ. ಕನ್ನಡದಲ್ಲಿಯೂ ಪ್ರೇಕ್ಷಕರು ಸಿನಿಮಾವನ್ನು ಸ್ವೀಕರಿಸುತ್ತಾರೆ ಎಂಬ ನಂಬಿಕೆ ಇದೆ.

• **'ಕೆಜಿಎಫ್', 'ಕಾಂತಾರ'ಕ್ಕೆ ಎಲ್ಲ ಸಿನಿಮಾಗಳನ್ನು ಹೋಲಿಸಿಕೊಳ್ಳುವುದು ಬೇಡ. ನನಗೆ ನನ್ನ ಸಿನಿಮಾವಷ್ಟೇ ಮುಖ್ಯ ಎಂದು ನೀವು ಇತ್ತೀಚಿನ ಸಂದರ್ಶನವೊಂದರಲ್ಲಿ ಹೇಳಿದ್ದು ಕೆಲವರ ಆಕ್ರೋಶಕ್ಕೆ ಕಾರಣವಾಯಿತೆ?**

ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. 'ಕೆಜಿಎಫ್', 'ಕಾಂತಾರ'ದಿಂದ ಎಲ್ಲರಿಗೂ ಪ್ಯಾನ್ ಇಂಡಿಯಾ ಸಿನಿಮಾ ಮಾಡಬೇಕೆಂಬ ಹಂಬಲ ಹೆಚ್ಚಾಗಿದೆ. ಆ ಥರ ಯೋಚನೆ ಮಾಡಿದ ಸಿನಿಮಾ ಇದಲ್ಲ. ಈ ಸಿನಿಮಾವನ್ನು ಪ್ಯಾನ್ ಇಂಡಿಯಾ ಮಟ್ಟಕ್ಕೆ ತೆಗೆದುಕೊಂಡು ಹೋಗಿ ನಿಲ್ಲಿಸಬೇಕು. 'ಕೆಜಿಎಫ್', 'ಕಾಂತಾರ' ನಮಗೆ ಹೆಮ್ಮೆ. ನಮ್ಮ ಸಿನಿಮಾವೂ ಅದೇ ರೀತಿ ಆಗಬೇಕು ಎಂಬುದರಲ್ಲಿ ತಪ್ಪೇನಿದೆ? ನಮಗೆ ಆ ಸಿನಿಮಾಗಳು ಸ್ಫೂರ್ತಿ. ಯಾರೋ ಕೆಲವರು ನಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ. ಆದರೆ ಪ್ರೀತಿಸುವವರು, ಜತೆಗೆ ನಿಲ್ಲುವವರು ಸಾಕಷ್ಟು ಜನ ಇರುತ್ತಾರೆ. ಸಿನಿಮಾ ಚೆನ್ನಾಗಿ ಮಾಡಿ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ಪ್ರತಿಕ್ರಿಯಿಸುತ್ತಾರೆ. ಅದರಲ್ಲಿ ತಪ್ಪೇನಿಲ್ಲ. ಒಳ್ಳೆಯ ಸಿನಿಮಾಗಳನ್ನು ಮಾಡಬೇಕಾಗಿದ್ದು ನಮ್ಮ ಜವಾಬ್ದಾರಿ. ಯಾರು ಈಗ ತೆಗಳುತ್ತಾರೋ, ಅವರೇ ಒಳ್ಳೆಯ ಸಿನಿಮಾಗಳನ್ನು ಕೊಟ್ಟಾಗ ನಮ್ಮ ಜತೆಗೆ ನಿಂತುಕೊಳ್ಳುತ್ತಾರೆ ಎಂಬ ಭರವಸೆ ನನಗಿದೆ.

• **ನಿಮ್ಮ ಮುಂದಿನ ಸಿನಿಮಾಗಳು...**

'ಅಯೋಗ್ಯ-2' ಚಿತ್ರ ಪೂರ್ಣಗೊಂಡಿದ್ದು, ಮೇ ತಿಂಗಳಲ್ಲಿ ಆ ಚಿತ್ರ ತೆರೆಗೆ ಬರಲಿದೆ. ತಮಿಳಿನಲ್ಲಿ ಒಂದು ಸಿನಿಮಾ ನಡೆಯುತ್ತಿದೆ. ಕನ್ನಡದಲ್ಲಿ ಮತ್ತೊಂದು ಸಿನಿಮಾ ಶೀಘ್ರದಲ್ಲಿ ಸೆಟ್ಟೇರಲಿದೆ.

• **ಸಿನಿಮಾ ಮುಗಿಯುವ ಮೊದಲೇ ಈ ಚಿತ್ರದ ನಿರ್ದೇಶಕ ತೀರಿಕೊಂಡರು. ಹೀಗೆ ಹಲವು ಸಮಸ್ಯೆಗಳು ಎದುರಾಯಿತಲ್ಲವೇ?**

ಈ ಸಿನಿಮಾ ವಿನೋದ್ ದೋಂಡಾಳೆ ಕಂಡ ಕನಸು. ಅವರು ಯಾವಾಗಲೂ ನಮ್ಮ ಜತೆಗೆ ಇದ್ದಾರೆ ಎಂಬ ನಂಬಿಕೆ. ಅವರೇ ಇಷ್ಟು ದೊಡ್ಡ ಕನಸು ಕಂಡಿದ್ದು. ಸಿನಿಮಾದ ಹೊರಗೆ, ಒಳಗೆ ಎಲ್ಲ ಅವರೇ ಇದ್ದಾರೆ. ಇದರಾಚೆಗಿನ ಹಿಂದಿನ ಕೆಲ ಕಹಿ ಘಟನೆಗಳನ್ನು ನೆನಪಿಸಿಕೊಳ್ಳುವ ಸಮಯ ಇದಲ್ಲ. ಅವರ ಕನಸನ್ನು ಈಡೇರಿಸಿದ ಖುಷಿಯಿದೆ. ಚಿತ್ರದ ಸೋಲು-ಗೆಲುವನ್ನು ಪ್ರೇಕ್ಷಕರು ನಿರ್ಧರಿಸುತ್ತಾರೆ. ದೋಂಡಾಳೆ ಅವರ ಕನಸಿನ ಜತೆ ನಾವೆಲ್ಲ ನಿಂತಿದ್ದೇವೆ. ನನ್ನ ಜವಾಬ್ದಾರಿ ಅಲ್ಲದಿದ್ದರೂ ಜತೆ ನಿಂತು ಈ ಸಿನಿಮಾ ಪೂರೈಸಿಕೊಟ್ಟಿದ್ದೇನೆ ಎಂದಷ್ಟೇ ಹೇಳಬಲ್ಲೆ.



ಸೆಟ್ಟೇರಿದ 'ಕವಳ'

ಮಾಸ್, ಆ್ಯಕ್ಷನ್ ಕಥೆಯನ್ನು ಹೊಂದಿರುವ 'ಕವಳ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಶ್ರೀ ಜೈ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ.

'ಕವಳ' ಪದಕ್ಕೆ ಹಲವು ಅರ್ಥಗಳಿವೆ. ಶಿವನಿಗೆ ಕವಳೇಶ್ವರ ಎಂದೂ ಕರೆಯುತ್ತಾರೆ. 'ಕವಳ' ಎಂಬ ರೌಡಿ ಕೂಡ ಇದ್ದ. ಆತನ ಬದುಕಿನ ಘಟನೆಗಳಿಂದಲೂ ಕಥೆ ಸ್ಫೂರ್ತಿ ಪಡೆದಿದೆ. ಒಟ್ಟಾರೆಯಾಗಿ ಶಿವನೊಂದಿಗೆ ಸಂಬಂಧ ಹೊಂದಿರುವ ಕಥೆ. ತಮಿಳು ನಟ ಸಮುದ್ರಖನಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸಿನಿಮಾ ಮಾರಾಟದ ದೃಷ್ಟಿಯಿಂದ ಬೇರೆ ಭಾಷೆಗಳ ಕಲಾವಿದರನ್ನು ಬಳಸಿಕೊಳ್ಳುತ್ತಿದ್ದೇವೆ. ಯುಗಾದಿ ನಂತರ ಚಿತ್ರೀಕರಣ ಪ್ರಾರಂಭಿಸುತ್ತೇವೆ. ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಸಿನಿಮಾ ಸಿದ್ಧಗೊಳ್ಳಲಿದೆ' ಎಂದರು ನಿರ್ದೇಶಕ.

ಸಿನಿಮಾವನ್ನು ರಾಧಾಕೃಷ್ಣ ಆರ್ಟ್ಸ್ ಹಾಗೂ ಡ್ರೀಮ್ ವರ್ಲ್ಡ್ ಸಿನಿಮಾಸ್ ಮೂಲಕ ಲೋಕೇಶ್ ಬಿ. ಹಾಗೂ ಅಡವಯ್ಯ ಪೂಜಾರ್ ಅವರು ನಿರ್ಮಿಸುತ್ತಿದ್ದಾರೆ. ಸಂದೀಪ್ ನಾಗರಾಜ್ ಚಿತ್ರದ ನಾಯಕ. ಎ.ಕರುಣಾಕರನ್ ಛಾಯಾಚಿತ್ರಗ್ರಹಣ, ಕೆ.ಕೆ.ಸೆಂಥಿಲ್ ಪ್ರಸಾದ್ ಸಂಗೀತ, ದೀಪು ಎಸ್.ಕುಮಾರ್ ಸಂಕಲನ ಚಿತ್ರಕ್ಕಿದೆ.

ಅಚ್ಯುತ್ ಕುಮಾರ್, ರಂಗಾಯಣ ರಘು, ನಾಜರ್, ಈಶ್ವರಿ ರಾವ್, ಬಲ ರಾಜವಾಡಿ, ಕಿಶೋರ್, ಶ್ರವಣ್, ಗಿಲ್ಲಿ, ಪ್ರಕಾಶ್ ತೂಮಿನಾಡು ಮುಂತಾದವರು ತಾರಾಗಣದಲ್ಲಿದ್ದಾರೆ.

ಈ ವಾರ ಏಳು ಸಿನಿಮಾಗಳು ತೆರೆಗೆ

ದಿ ರೈಸ್ ಆಫ್ ಅಶೋಕ

ಸತೀಶ್ ನೀನಾಸಂ, ಸಪ್ತಮಿ ಗೌಡ ಮುಖ್ಯಭೂಮಿಕೆಯಲ್ಲಿರುವ ಚಿತ್ರ. ನಿರ್ದೇಶಕ ವಿನೋದ್ ದೋಂಡಾಳೆ ಅವರ ಅಕಾಲಿಕ ಮರಣದಿಂದ ಮನು ಶೆಡ್ಗಾರ್ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ. ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್ ಅಡಿ ವರ್ಧನ್ ನರಹರಿ, ಜೈಷ್ಣವಿ ಜೊತೆ ಸೇರಿ ಸತೀಶ್ ನೀನಾಸಂ ಕೂಡಾ ಸಿನಿಮಾ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ.

70ರ ದಶಕದಲ್ಲಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸಿನಿಮಾವಿದು. ಚಿತ್ರದಲ್ಲಿ ಸತೀಶ್ ನೀನಾಸಂ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತ ಸಾಗುವ ಕಥೆ ಇದಾಗಿದೆ.

ದಯಾನಂದ್ ಟಿ.ಕೆ ಕಥೆ ಬರೆದಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮನು ಶೆಡ್ಗಾರ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ.



ಸಪ್ತಮಿ ಗೌಡ

ವೀರ ಕಂಬಳ

ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ಸಿನಿಮಾ ತುಳುನಾಡಿನ ಕಂಬಳದ ಕುರಿತಾದ ಕಥೆ ಹೊಂದಿದೆ. ಚಿತ್ರದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ.

'ಡೆಡ್ಲಿ ಸೋಮ' ಖ್ಯಾತಿಯ ಆದಿತ್ಯ ನಾಯಕನಾಗಿ ನಟಿಸಿದ್ದಾರೆ. ವಿಜಯ್‌ಕುಮಾರ್ ಕೊಡಿಯಾಲ್ ಬೈಲ್ ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ವಿನಿತ ವಿಜಯ್ ಕುಮಾರ್ ರೆಡ್ಡಿ ಹಾಗೂ ಅರುಣ್ ರೈ ತೊಡಾರ್ ನಿರ್ಮಾಣ ಮಾಡಿದ್ದಾರೆ. ಪ್ರಕಾಶ್ ರಾಜ್, ರವಿಶಂಕರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದರೆ, ರಾಧಿಕಾ ಚೇತನ್ ವಿಶೇಷ ಪಾತ್ರಕ್ಕೆ ಜೀವ ತುಂಬಿದ್ದಾರೆ. ನವೀನ್ ಪಡೀಲ್, ಗೋಪಿನಾಥ್ ಭಟ್, ಭೋಜರಾಜ್ ವಾಮಂಜೂರು ಸೇರಿದಂತೆ ಪ್ರಸಿದ್ಧ ತುಳು ರಂಗಭೂಮಿ ಹಿನ್ನೆಲೆಯ ನಟರು ನಟಿಸಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ, ಆರ್.ಗಿರಿ ಛಾಯಾಚಿತ್ರಗ್ರಹಣ, ಶ್ರೀನಿವಾಸ್ ಎಸ್. ಬಾಬು ಸಂಕಲನ ಚಿತ್ರಕ್ಕಿದೆ.

ಪ್ರೇಮಿ

ಎಸ್.ಪ್ರದೀಪ್ ವರ್ಮ ನಿರ್ದೇಶನದ ಪ್ರೀತಿ ಕುರಿತಾದ ಕಥೆ ಹೊಂದಿರುವ ಸಿನಿಮಾ.

'ದಾವಣಗೆರೆ, ದೇವರ ಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಟಿ.ಎಸ್.ಅಕ್ಕಮಹಾದೇವಿ ಕಥೆ ಬರೆದಿದ್ದಾರೆ' ಎಂದು ನಿರ್ದೇಶಕ ಹೇಳಿದ್ದಾರೆ.

ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಈ ಚಿತ್ರಕ್ಕಿದೆ. ಅದ್ವಿಕ್ ಚಿತ್ರದ ನಾಯಕ. ಸಾತ್ವಿಕ, ಶೋಭಿತ, ಎಚ್.ಜಿ. ವೀರೇಶ್, ದ್ವಿತ ಕೆ. ಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಆಯುಧ

ದೇವರಾಜ್ ಕುಮಾರ್ ನಿರ್ಮಿಸಿ, ನಿರ್ದೇಶಿಸಿ, ನಟಿಸಿರುವ ಸಿನಿಮಾ. ಹೊನ್ನಾವರ, ಬೈಂದೂರು, ಚನ್ನಪಟ್ಟಣ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣಗೊಂಡಿದೆ. ನಾಲ್ಕು ಹಾಡುಗಳು ಹಾಗೂ ನಾಲ್ಕು ಸಾಹಸ ಸನ್ನಿವೇಶಗಳಿರುವ ಈ ಚಿತ್ರವು ಆ್ಯಕ್ಷನ್, ಥ್ರಿಲ್ಲರ್ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ.

ಸಿನಿಮಾದಲ್ಲಿ ನಾಯಕಿಯರಾಗಿ ಅಮೃತ ಹಾಗೂ ಸಂಹಿತ ವಿನ್ಯ ನಟಿಸಿದ್ದು, ರಘು, ಸೂರಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸತೀಶ್ ಸ್ಟೀವನ್ ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ಚಂದ್ರು ಬಂಡೆ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಸೂಪರ್ ಹಿಟ್

ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ, ಗೌರವ್ ಶೆಟ್ಟಿ ನಾಯಕರಾಗಿ ನಟಿಸಿರುವ ಚಿತ್ರ. ಕಾಮಿಡಿ, ಥ್ರಿಲ್ಲರ್ ಜಾನರ್‌ನ ಚಿತ್ರಕ್ಕೆ ವಿಜಯಾನಂದ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಈ ಸಿನಿಮಾದ ಶೀರ್ಷಿಕೆಯೇ ಸೂಪರ್ ಹಿಟ್. ರನ್ನಿಂಗ್ ಸಕ್ಸಸ್‌ಫುಲಿ ಎಂಬ ಟ್ಯಾಗ್ ಲೈನ್ ಇದೆ. ಏಕೆ ಈ ಶೀರ್ಷಿಕೆ ಇಡಲಾಗಿದೆ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು. ಇಡೀ ಸಿನಿಮಾ ಆರಂಭದಿಂದ ಕೊನೆಯವರೆಗೂ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಪ್ರೇಕ್ಷಕರನ್ನು ಬೆರಗಾಗಿಸುವಂಥ ಅಂಶಗಳು, ತಿರುವುಗಳನ್ನು ಹೊಂದಿದೆ' ಎಂದಿದ್ದಾರೆ ನಿರ್ದೇಶಕ.

ಜಿ.ಉಮೇಶ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಶ್ವೇತಾ ನಾಯಕಿಯಾಗಿ ಜೊತೆಯಾಗಿದ್ದಾರೆ. ನಾಗೇಂದ್ರ ಪ್ರಸಾದ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆರ್.ಡಿ ನಾಗಾರ್ಜುನ ಛಾಯಾಚಿತ್ರಗ್ರಹಣ, ಶ್ರೀಕಾಂತ್ ಸಂಕಲನ, ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಡ್ರ್ಯಾಗನ್ ಮಂಜು, ಸಾಧು ಕೋಕಿಲ, ಸೀನು ಭಾಯ್, ನಾಗವರ್ಧನ್, ಪ್ರಮೋದ್ ಶೆಟ್ಟಿ ಮುಂತಾದವರು ಚಿತ್ರದಲ್ಲಿದ್ದಾರೆ.



ಸೂಪರ್ ಹಿಟ್ ಚಿತ್ರದ ಪೋಸ್ಟರ್

ಹೈ ವೋಲ್ಟೇಜ್ ರಕ್ಷಕ

ರಾಜೇಶ್ ಮೂರ್ತಿ ನಿರ್ದೇಶನದ ಆ್ಯಕ್ಷನ್, ಥ್ರಿಲ್ಲರ್ ಜಾನರ್‌ನ ಚಿತ್ರ. ಯಶಸ್ವಾ ಮೂರ್ತಿ ನಾಯಕನಾಗಿ ನಟಿಸಿದ್ದಾರೆ. ಮನು ಪಾಂಡ್ಯ ಹಾಗೂ ನೇವಿ ಮಂಜು ಈ ಚಿತ್ರದ ನಿರ್ಮಾಪಕರು.

'ದೇಹ ಬದಲಿಸುವ ವಿಭಿನ್ನ ಪರಿಕಲ್ಪನೆ ಕುರಿತಾದ ಚಿತ್ರವಿದು. ವಿಶ್ವ ಯುದ್ಧ ಸಮಯದಲ್ಲಿ ಇಂಥ ಪ್ರಯೋಗ ಮಾಡುತ್ತಿದ್ದರು. ಚಿತ್ರದಲ್ಲಿ ನಾಯಕ ವಿಧಿವಿಜ್ಞಾನ ವಿಭಾಗದಲ್ಲಿ ಕೆಲಸ ಮಾಡುವ ತಂತ್ರಜ್ಞ. ಆತ ಈ ದೇಹ ಬದಲಿಸುವ ತಂತ್ರವನ್ನು ಕಂಡುಹಿಡಿಯುತ್ತಾನೆ. ಅದರಿಂದ ಏನೆಲ್ಲ ಆಗುತ್ತದೆ ಎಂಬುದೇ ಚಿತ್ರಕಥೆ. ಸೈನ್ಸ್, ಫಿಕ್ಷನ್ ಕಥೆಯ ಸಿನಿಮಾವಿದು' ಎಂದಿದ್ದಾರೆ ನಿರ್ದೇಶಕ.

ಬೆಂಗಳೂರು, ಕೆಜಿಎಫ್ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ಸತೀಶ್ ಕುಮಾರ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿನೋದ್ ಛಾಯಾಚಿತ್ರಗ್ರಹಣವಿದೆ. ರಾಜೇಶ್ ಮೂರ್ತಿ ನಿರ್ದೇಶನದ ಜತೆಗೆ ಸಂಕಲನದ ಜವಾಬ್ದಾರಿಯನ್ನೂ ನಿರ್ವಹಿಸಿದ್ದಾರೆ. ನಾಯಕಿಯಾಗಿ ಹರ್ಶಿತಾ ಗೌರಿ ನಟಿಸಿದ್ದಾರೆ.

ಹಯಗ್ರೀವ

ಧನ್ವೀರ್‌ಗೆ ಸಂಜನಾ ಆನಂದ್ ಜೋಡಿಯಾಗಿ ನಟಿಸಿರುವ ಚಿತ್ರವಿದು. ರಘುಕುಮಾರ್ ನಿರ್ದೇಶನದ ಚಿತ್ರಕ್ಕೆ ಸಮೃದ್ಧಿ ಮಂಜುನಾಥ್ ಬಂಡವಾಳ ಹೂಡಿದ್ದಾರೆ. 'ಪೌರಾಣಿಕ ಕಥೆ ಆಧಾರಿತ ಚಿತ್ರವಿದು. ಆ್ಯಕ್ಷನ್ ಜತೆಗೆ ಮನರಂಜನೀಯ ಅಂಶಗಳಿವೆ' ಎಂದಿದ್ದಾರೆ ನಿರ್ದೇಶಕ. ಸಾಧು ಕೋಕಿಲ, ರಂಗಾಯಣ ರಘು, ಶರತ್ ಲೋಹಿತಾಶ್ವ, ಶೋಭರಾಜ್, ಅಶ್ವಿನಿ ಗೌಡ, ಗಿಲ್ಲಿ ನಟ ಮುಂತಾದವರು ತಾರಾಬಳಗದಲ್ಲಿದ್ದಾರೆ. ಜ್ಯೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಗಿರೀಶ್ ಆರ್. ಗೌಡ ಛಾಯಾಚಿತ್ರಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಸಂಕಲನವಿದೆ.



ಸಂಜನಾ ಆನಂದ್



ಯಶಸ್ವಾ ಮೂರ್ತಿ

‘ಆರ್‌ಟಿಐ ಅಡಿ ಐಟಿ ವಿವರ ನೀಡಿಕೆ ಸಲ್ಲ’

ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ರದ್ದುಪಡಿಸಿದ ಹೈಕೋರ್ಟ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈವಾಹಿಕ ವ್ಯಾಜ್ಯಗಳಲ್ಲಿ ದಂಪತಿಗಳ ಆದಾಯ ತೆರಿಗೆ ಪಾವತಿ ವಿವರವನ್ನು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಪಡೆಯುವುದಕ್ಕೆ ಅವಕಾಶ ಇಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಪತಿಯ ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದ ವಿವರವನ್ನು ಪತ್ನಿಗೆ ಒದಗಿಸಬೇಕು’ ಎಂದು ಪ್ರಕರಣವೊಂದರಲ್ಲಿ ಕೇಂದ್ರ ಮಾಹಿತಿ ಆಯೋಗ ನೀಡಿದ್ದ ಆದೇಶ ಪ್ರಶ್ನಿಸಿ ತೆರಿಗೆ ಇಲಾಖೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅಂತೆಯೇ, ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ರದ್ದುಪಡಿಸಿದೆ.

‘ಪಕ್ಷಗಾರರ ಆದಾಯಕ್ಕೆ ಸಂಬಂಧಿಸಿದಂತೆ ವಿವಾದಗಳಿದ್ದಲ್ಲಿ ಆದಾಯ ತೆರಿಗೆ ಪಾವತಿ ಮತ್ತು ಹಣಕಾಸು ದಾಖಲೆ ಸೇರಿದಂತೆ ಅಗತ್ಯ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳಲು ಆದಾಯ ತೆರಿಗೆ ಇಲಾಖೆ, ಬ್ಯಾಂಕ್ ಸೇರಿದಂತೆ ಆರ್ಥಿಕ ವ್ಯವಹರಗಳ ಸಂಸ್ಥೆಗಳಿಗೆ ವಿಚಾರಣಾ ನ್ಯಾಯಾಲಯ ಸಮನ್ಸ್ ಜಾರಿಗೊಳಿಸುವ ಅಧಿಕಾರವನ್ನು ಸ್ವಯಂ ಪ್ರೇರಿತವಾಗಿ ಬಳಸಿಕೊಳ್ಳಬಹುದಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.



ಈ ಸಂಬಂಧ ವಿಚಾರಣಾ ನ್ಯಾಯಾಲಯಗಳು ಮತ್ತು ಆದಾಯ ತೆರಿಗೆ ಇಲಾಖೆ ಅನುಸರಿಸಬೇಕಾದಂತೆ ಕೆಲವು ಮಾರ್ಗಸೂಚಿಗಳನ್ನು ನ್ಯಾಯಪೀಠ ರೂಪಿಸಿದೆ. ‘ಪತಿ ಅಥವಾ ಪತ್ನಿಯ ಹಣಕಾಸಿಗೆ ಸಂಬಂಧಿಸಿದ ಮಾಹಿತಿ ಮತ್ತು ದಾಖಲೆಗಳನ್ನು ಪಡೆಯಬೇಕಾದಲ್ಲಿ ಸಂಗಾತಿಗಳು ವಿಚಾರಣಾ ನ್ಯಾಯಾಲಯಕ್ಕೆ ಅರ್ಜಿ ಅಲ್ಲಿಸಬೇಕು. ಈ ಅರ್ಜಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಪಾವತಿಯ ಮಾಹಿತಿ ಪಡೆದುಕೊಳ್ಳುವ ಅಗತ್ಯದ ಕುರಿತು ನ್ಯಾಯಾಲಯ ಪರಿಶೀಲಿಸಬೇಕು. ಮಾಹಿತಿ ಪಡೆಯಬೇಕಾದ ಅಗತ್ಯವಿದ್ದಲ್ಲಿ ಮುಚ್ಚಿದ ಲಕೋಟೆಯಲ್ಲಿ ವಿವರ ಒದಗಿಸಲು ಆದೇಶಿಸಬೇಕು’ ಎಂದು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

‘ಮಾರ್ಗಸೂಚಿಗಳು ಲಿಂಗ ತಟಸ್ಥವಾಗಿದ್ದು, ಗಂಡ ಮಾಹಿತಿ ಕೋರಿ ಪತ್ನಿ ಸಲ್ಲಿಸುವ ಮತ್ತು ಪತ್ನಿ ಮಾಹಿತಿ ಕೋರಿ ಪತಿ ಸಲ್ಲಿಸುವ ಅರ್ಜಿಗಳಿಗೆ ಸಮಾನವಾಗಿ ಅನ್ವಯವಾಗಲಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಇಲಾಖೆ, ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ), ಬ್ಯಾಂಕುಗಳು ಮತ್ತು ಸಂಗಾತಿಯ ಆರ್ಥಿಕ ವಹಿವಾಟು ಹೊಂದಿರುವ ಇತರೆ ಸಂಸ್ಥೆಗಳಿಂದ ಕೋರಿದ ಹಣಕಾಸು ದಾಖಲೆಗಳನ್ನು ಪಡೆಯುವುದಕ್ಕೆ ಈ ಮಾರ್ಗಸೂಚಿ ಅನ್ವಯವಾಗಲಿದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಹೈಕೋರ್ಟ್: 226 ಹುದ್ದೆ ಸೃಜಿಸಿ ಆದೇಶ

ಬೆಂಗಳೂರು: ಹೈಕೋರ್ಟ್‌ನ ಬೆಂಗಳೂರಿನ ಪ್ರಧಾನ ಹಾಗೂ ಕಲಬುರಗಿ–ಧಾರವಾಡ ಪೀಠಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತ್ವರಿತ ವಿಲೇವಾರಿಗೆ ಅನುವಾಗುವಂತೆ 226 ಹುದ್ದೆಗಳನ್ನು ಸೃಜಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಬೆಂಗಳೂರಿನ ಪ್ರಧಾನ ಪೀಠಕ್ಕೆ 68, ಧಾರವಾಡಕ್ಕೆ 97 ಮತ್ತು ಕಲಬುರಗಿ ಪೀಠಕ್ಕೆ 61 ಹುದ್ದೆಗಳನ್ನು ಸೃಷ್ಟಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

‘ಹೈಕೋರ್ಟ್‌ನ ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಹೆಚ್ಚಿನ ಪ್ರಕರಣಗಳು ಬಾಕಿ ಇವೆ. ಪ್ರತಿ ವರ್ಷ ಹೊಸದಾಗಿ ದಾಖಲಾಗುವ ಪ್ರಕರಣಗಳೂ ಹೆಚ್ಚುತ್ತಿವೆ. ಹಾಗಾಗಿ, ನ್ಯಾಯಪೀಠಗಳ ಕಾರ್ಯನಿರ್ವಹಣೆ ಕಷ್ಟಕರವಾಗಿದೆ. ಹಾಲಿ ಸಿಬ್ಬಂದಿಗೆ ಪ್ರಕರಣಗಳ ದಾಖಲಾತಿ, ವಿಲೇವಾರಿ, ಲೋಕ ಅದಾಲತ್ ಮತ್ತು ಮಧ್ಯಸ್ಥಿಕೆ ಚಟುವಟಿಕೆಗಳಿಂದಾಗಿ ಕೆಲಸದ ಹೊರೆ ಎದುರಾಗಿದೆ. ನಿಗದಿತ ಸಮಯದಲ್ಲಿ ಕಾರ್ಯ ನಿರ್ವಹಿಸುವುದು ಕಷ್ಟಕರವಾಗಿದೆ’ ಎಂದು ರಿಜಿಸ್ಟ್ರಾರ್ ಜನರಲ್ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

‘ಕೈಗಾರಿಕಾ ಸ್ನೇಹಿ ವಾಣಿಜ್ಯ ಸಂಸ್ಕೃತಿ ರೂಪಿಸಲು ಯತ್ನ’

ಎನ್‌ಒಸಿ ಅವಧಿ ಇಳಿಕೆ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆಗಳ ಸ್ಥಾಪನೆಗೆ ವಿವಿಧ ಇಲಾಖೆಗಳಿಂದ ಅಗತ್ಯವಾಗಿ ಪಡೆದುಕೊಳ್ಳಬೇಕಾದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಹಾಗೂ ಅನುಮತಿ ನೀಡಲು ಇರುವ ಅವಧಿಯನ್ನು ಇಳಿಕೆ ಮಾಡಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.



ಎಂ.ಬಿ. ಪಾಟೀಲ

ಗುರುವಾರ ವಿಧಾನ ಸೌಧದಲ್ಲಿ ‘ಸುಲಲಿತ ವಾಣಿಜ್ಯ ಸಂಸ್ಕೃತಿ ಮತ್ತು ಏಕಗವಾಕ್ಷಿ ಸಮಿತಿ’ಗಳ ಸಭೆ ನಡೆಸಿದ ಅವರು ಈ ಕುರಿತು ವಿವರ ನೀಡಿದರು.

‘ಅಗ್ನಿಶಾಮಕ ದಳದ ಎನ್‌ಒಸಿಗೆ 60 ದಿನ ಕಾಲಾವಕಾಶ ಇದ್ದು, ಅದನ್ನು 21 ದಿನಕ್ಕೆ ಇಳಿಸಲಾಗಿದೆ. ವಿದ್ಯುತ್ ಸೌಲಭ್ಯಕ್ಕೆ ಬೇಕಾದ ಅನುಮತಿಯ ಕಾಲಾವಕಾಶವನ್ನು 25 ದಿನಗಳಿಂದ 10 ದಿನಕ್ಕೆ, ಲಿಫ್ಟ್/ಎಸ್ಕಲೇಟರ್ ಬಳಕೆಗೆ ಬೇಕಾದ ಅನುಮತಿಗೆ 40 ದಿನಗಳಿಂದ 20 ದಿನಕ್ಕೆ, ಹೊಸ ನಲ್ಲಿ ಸಂಪರ್ಕ ಬೇಕಿದ್ದ ಎನ್‌ಒಸಿಗೆ 42 ದಿನಗಳಿಂದ 30 ದಿನಕ್ಕೆ ಇಳಿಸಲು ತೀರ್ಮಾನಿಸಲಾಗಿದೆ’ ಎಂದರು.

ಕಾರ್ಮಿಕ ಇಲಾಖೆಯು ಕೈಗಾರಿಕಾ ಯೋಜನೆ ಮತ್ತು ಲೈಸೆನ್ಸ್, ಬಾಯ್ಲರ್ ನೋಂದಣಿಗಳನ್ನು ಇನ್ನು ಮುಂದೆ 30 ದಿನಗಳ ಬದಲು 14 ದಿನಗಳಲ್ಲಿ ನೀಡಲಿದೆ. ಈ ಎಲ್ಲ ನಿಯಮಗಳಿಗೆ ತರಬೇಕಾದ ತಿದ್ದುಪಡಿಗಳಿಗೆ ಸಂಬಂಧಿಸಿ, ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಸದ್ಯದಲ್ಲೇ ಕಾನೂನಿನ ರೂಪ ನೀಡಲಾಗುವುದು ಎಂದು ಹೇಳಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯಲ್ಲಿ ಕೂಡ ವಿವಿಧ ರೀತಿಯ ಅನುಮತಿಗಳಿಗೆ ಇದುವರೆಗೆ ಇದ್ದ ಕಾಲಾವಧಿಯನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ. ಭೂ ಬಳಕೆ ಉದ್ದೇಶ ಪರಿವರ್ತನೆಗೆ ಅನುಮತಿ ನೀಡಲು ಬೆಂಗಳೂರಿನ ಪರಿಮಿತಿಯಲ್ಲಿ ಈವರೆಗೆ 120 ದಿನಗಳ ಕಾಲಾವಕಾಶವಿತ್ತು. ಇನ್ನು ಮುಂದೆ ಇದು 45 ದಿನಗಳಲ್ಲಿ ಇಳಿಕೆಯಾಗಲಿದೆ ಎಂದು ಅವರು ವಿವರಿಸಿದರು.

‘ನೆರೆ ರಾಜ್ಯಗಳಿಗಿಂತ ಕೈಗಾರಿಕಾ ಸ್ನೇಹಿಯಾದ ವ್ಯವಸ್ಥೆಯನ್ನು ತರಲು ಪಣ ತೊಟ್ಟಿದ್ದೇವೆ. ಏಕಗವಾಕ್ಷಿ ಯೋಜನೆಯಡಿ ಇದುವರೆಗೆ 20 ಇಲಾಖೆಗಳ 115 ಸೇವೆಗಳನ್ನು ಜೋಡಣೆ ಮಾಡಿದ್ದು, ಬಾಕಿ ಇರುವ 28 ಸೇವೆಗಳನ್ನು ಆದ್ಯತಾ ಕ್ಷೇತ್ರಗಳೆಂದು ಪರಿಗಣಿಸಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ’ ಎಂದು ಎಂ.ಬಿ. ಪಾಟೀಲ ಅವರು ಹೇಳಿದರು.

ಮುಖ್ಯಾಂಶಗಳು

- ಅಗ್ನಿಶಾಮಕ ದಳದ ಎನ್‌ಒಸಿ 21 ದಿನಕ್ಕೆ
- ವಿದ್ಯುತ್ ಸೌಲಭ್ಯಕ್ಕೆ ಬೇಕಾದ ಅನುಮತಿ 10 ದಿನಕ್ಕೆ ಇಳಿಕೆ
- ಏಕಗವಾಕ್ಷಿ: 115 ಸೇವೆಗಳ ಜೋಡನೆ

16 ಚಿನ್ನದ ಪದಕಗಳ ‘ಖುಷಿ’

ಬೀದರ್‌ನ ಕರ್ನಾಟಕ ಪಶು ವಿವಿಯ ಘಟಿಕೋತ್ಸವ ಇಂದು

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಉಡುಪಿಯ ಮಂದಾರ್ತಿ ಗ್ರಾಮದ ಖುಷಿ ಅವರು ‘ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬೆಂಡರಿ ’ (ಬಿವಿಎಸ್‌ಸಿ ಆ್ಯಂಡ್ ಎಎಚ್) ಪದವಿಯಲ್ಲಿ 16 ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ.

ಬೀದರ್‌ನಲ್ಲಿ ಶುಕ್ರವಾರ (ಫೆ.27) ಬೆಳಿಗ್ಗೆ 11ಕ್ಕೆ ನಡೆಯಲಿರುವ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 15ನೇ ಘಟಿಕೋತ್ಸವ ದಲ್ಲಿ ಖುಷಿ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಳ್ಳಲಿದ್ದಾರೆ.

ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿನ 2023–24ನೇ ಬ್ಯಾಚ್‌ನ ವಿದ್ಯಾರ್ಥಿನಿ ಖುಷಿ, ಚಿನ್ನದ ಪದಕ ಪಡೆಯುವ ಗುರಿಯೊಂದಿಗೆ ಕಷ್ಟಪಟ್ಟು ಓದಿದವರು. ‘ಆದರೆ, 16 ಚಿನ್ನದ ಪದಕಗಳು ಒಲಿದು ಬರುತ್ತವೆ ಎಂದು ಕನಸು ಮನಸ್ಸಿನಲ್ಲೂ ಯೋಚಿಸಿರಲಿಲ್ಲ. ಈ ವಿಷಯ ಗೊತ್ತಾದ ನಂತರ ‘ಖುಷಿ’ ವ್ಯಕ್ತಪಡಿಸಲು ಪದಗಳು ಸಾಲುತ್ತಿಲ್ಲ’ ಎಂದು ಅವರು ‘ಪ್ರಜಾವಾಣಿ’ಯೊಂದಿಗೆ ಸಂತಸ ಹಂಚಿಕೊಂಡರು.

ಖುಷಿ ಅವರು ಪಿಯು ವಿಜ್ಞಾನದಲ್ಲಿ ಶೇ 98ರಷ್ಟು ಅಂಕ ಗಳಿಸಿ ರಾಜ್ಯಕ್ಕೆ 6ನೇ ರ‍್ಯಾಂಕ್ ಬಂದಿದ್ದರು. ವಿಶೇಷವೆಂದರೆ ಎಸ್‌ಎಸ್‌ಎಲ್‌ಸಿಯಲ್ಲೂ ಇಷ್ಟೇ ಅಂಕ ಪಡೆದಿದ್ದರು.

‘ಕಾಲೇಜಿನಲ್ಲಿ ಪ್ರಾಧ್ಯಾಪಕರ ಉತ್ತಮ ಪಾಠ, ಮನೆಯಲ್ಲಿ ಉತ್ತಮ ಬೆಂಬಲ ಸಿಕ್ಕಿದ್ದರಿಂದ ನಿತ್ಯ ಆರೇಳು ತಾಸು ಓದುತ್ತಿದ್ದೆ. ಭವಿಷ್ಯದಲ್ಲಿ ಐಎಎಸ್ ಮಾಡಿ, ನಾಗರಿಕ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡುವ ಆಸೆ ಇದೆ’ ಎಂದು ಹೇಳಿದರು.

ಅಂದ ಹಾಗೆ, ಖುಷಿ ಅವರ ತಂದೆ ದುಬೈನಲ್ಲಿ ಬಿಸಿನೆಸ್ ಸೂಪರ್‌ವೈಸರ್ ಆಗಿದ್ದಾರೆ. ತಾಯಿ ಗೃಹಿಣಿ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಉಡುಪಿಯ ಬಾರ್ಕೂರಿನಲ್ಲಿ, ಆನಂತರ ಉಡುಪಿಯ ವಿದ್ಯೋದಯ ಕಾಲೇಜಿನಲ್ಲಿ ಪಿಯು ಮುಗಿಸಿ, ಬಳಿಕ ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿನಲ್ಲಿ ಬಿವಿಎಸ್‌ಸಿ ಆ್ಯಂಡ್ ಎಎಚ್ ಕೋರ್ಸ್ ಸೇರಿದರು.



ನಾನು ಮೊಬೈಲ್ ಕಡಿಮೆ ಬಳಸುತ್ತೇನೆ. ಪುಸ್ತಕಗಳೇ ನನ್ನ ಸಂಗಾತಿ. ಮೊಬೈಲ್‌ನಿಂದ ಸಾಧ್ಯವಾದಷ್ಟು ದೂರವಿದ್ದು, ಪುಸ್ತಕ ಓದುವ ಅಭಿರುಚಿ ಬೆಳೆಸಿಕೊಂಡರೆ ಅದು ನಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯುತ್ತದೆ

ಖುಷಿ, ವಿದ್ಯಾರ್ಥಿನಿ

ಇಬ್ಬರಿಗೆ ತಲಾ 6, ಒಬ್ಬರಿಗೆ 4 ಚಿನ್ನದ ಪದಕ

2024–25ನೇ ಸಾಲಿನಲ್ಲಿ ಬೆಂಗಳೂರಿನ ಹೆಬ್ಬಾಳದ ಹೈನು ವಿಜ್ಞಾನ ಕಾಲೇಜಿನ ಬಿ.ಟೆಕ್ (ಹೈನು ತಂತ್ರಜ್ಞಾನ) ಪದವಿ ವಿದ್ಯಾರ್ಥಿನಿ ಭೂಮಿಕಾ ಕೆ.ಆರ್. ಮತ್ತು 2023–24ನೇ ಸಾಲಿನಲ್ಲಿಎಂವಿಎಸ್‌ಸಿ ಕುಕ್ಕುಟಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ವಿಜಯಕುಮಾರ್ ಎಂ.ಸಿ. ಅವರಿಗೆ ತಲಾ 6 ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ. ಇವರಿಬ್ಬರು ಕ್ರಮವಾಗಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕಳಂಬೆಳ್ಳ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮೈಲಾಂಡ್ಲಹಳ್ಳಿಯವರು.

ಕಲಬುರಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನ ಅರಳಗುಂಡಗಿ ಗ್ರಾಮದ ದೇವರಾಜ್ ಅವರು 2023–24ನೇ ಸಾಲಿನ ಬಿವಿಎಸ್‌ಸಿ ಆ್ಯಂಡ್ ಎಎಚ್ ಕೋರ್ಸ್‌ನಲ್ಲಿ 4 ಚಿನ್ನದ ಪದಕ ಪಡೆದಿದ್ದಾರೆ. ಇವರು ಬೀದರ್ ಪಶು ವಿವಿಯಲ್ಲಿ ಓದಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಶಾಸಕ ಸುಬ್ಬಾರೆಡ್ಡಿ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.



ಸುಬ್ಬಾರೆಡ್ಡಿ

ಸುಬ್ಬಾ ರೆಡ್ಡಿ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಪೀಠವು ಶುಕ್ರವಾರ ನಡೆಸಲಿದೆ.

‘ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಮತ್ತು ನನ್ನನ್ನೇ ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು’ ಎಂದು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಸಿ.ಮುನಿರಾಜು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿ ಫೆಬ್ರುವರಿ 16ರಂದು ಆದೇಶ ಹೊರಡಿಸಿತ್ತು.

2023ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಎಸ್.ಎನ್.ಸುಬ್ಬಾರೆಡ್ಡಿ 82,128 ಮತಗಳನ್ನು ಪಡೆದು ಜಯಗಳಿಸಿದ್ದರು. ಸಿ.ಮುನಿರಾಜು 62,949 ಮತ ಪಡೆದು ಸೋಲುಂಡಿದ್ದರು.

ಸುಬ್ಬಾರೆಡ್ಡಿ ಆಯ್ಕೆ ಪ್ರಶ್ನಿಸಿ ಸಿ.ಮುನಿರಾಜು 2023ರ ಜೂನ್ 24ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

‘ಸುಬ್ಬಾರೆಡ್ಡಿ 2023ರ ಏಪ್ರಿಲ್ 20ರಂದು ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸುವಾಗ ಯಾವುದೇ ಉಮೇದುವಾರ ತನ್ನ ಪತ್ನಿ ಮತ್ತು ಅವಲಂಬಿತರಿಗೆ ಸೇರಿದ ಆಸ್ತಿಗಳು, ಹೊಣೆಗಾರಿಕೆಗಳ ವಿವರಗಳ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು. ಬಾಂಡ್, ಶೇರ್‌ಗಳಲ್ಲಿನ ಹೂಡಿಕೆ, ಸಾಲಪತ್ರಗಳು, ಕಂಪನಿಗಳ ವಿವರ, ಮ್ಯೂಚುವಲ್ ಫಂಡ್, ವೈಯಕ್ತಿಕ ಸಾಲ ಸೇರಿದಂತೆ ಎಲ್ಲಾ ರೀತಿಯ ಹಣಕಾಸು ವಹಿವಾಟುಗಳ ಪಾರದರ್ಶಕ ಮಾಹಿತಿ ಒದಗಿಸಬೇಕು. ಆದರೆ, ಸುಬ್ಬಾರೆಡ್ಡಿ ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಮಗೆ ಸೇರಿದ ಸಂಪತ್ತು, ಸಾಲಗಳು, ಹೊಣೆಗಾರಿಕೆ, ಹೂಡಿಕೆ ಸೇರಿದಂತೆ ಅನೇಕ ಮಹತ್ವದ ಮಾಹಿತಿಗಳನ್ನು ಬಹಿರಂಗಪಡಿಸಿಲ್ಲ’ ಎಂದು ಆಕ್ಷೇಪಿಸಿದ್ದರು.

56,432 ಹುದ್ದೆಗೆ ನೇಮಕ

ಒಂದನೇ ಪುಟದಿಂದ...

ಬೆಳಗಾವಿಯಲ್ಲಿ ಈಚೆಗೆ ನಡೆದ ಅಧಿವೇಶನದಲ್ಲಿ ಅನುಮೋದನೆಗೊಂಡಿದ್ದ ಈ ಮಸೂದೆಯನ್ನು ಅಂಕಿತಕ್ಕಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಕಳುಹಿಸಲಾಗಿತ್ತು. ಈ ಮಸೂದೆಯು ರಾಜ್ಯಪಾಲರ ಮುಂದಿದ್ದು, ಗುರುವಾರ ಅನುಮೋದನೆ ನೀಡಿದ್ದಾರೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ. ಪಾಟೀಲ ಅವರು, ‘ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿರುವ ವಿಷಯವು ನ್ಯಾಯಾಲಯದಲ್ಲಿರುವ ಕುರಿತು ಸುದೀರ್ಘ ಚರ್ಚೆ ನಡೆಯಿತು. ಮೀಸಲು ಪ್ರಮಾಣ ಹೆಚ್ಚಿಸಿರುವುದಕ್ಕೆ ಸಂಬಂಧಿಸಿದಂತೆ ಹಲವು ಪ್ರಕರಣಗಳು ಕೋರ್ಟ್ ಮುಂದಿವೆ. 2025ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದಾಗಿ, ಸುಮಾರು 56,432 ಹುದ್ದೆಗಳ ನೇಮಕ ಸ್ಥಗಿತವಾಗಿದೆ’ ಎಂದರು.

‘ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರಿಸಬೇಕಾಗಿದೆ. ಹೀಗಾಗಿ, 2022ರ ಡಿಸೆಂಬರ್ 28ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ, ರೋಸ್ಟರ್ ಬಿಂದುಗಳ ಅನ್ವಯ ಹೊಸ ನೇಮಕಕ್ಕೆ ಅಧಿಸೂಚನೆ ಹೊರಡಿಸಲಾಗುವುದು. ಒಟ್ಟು ಮೀಸಲಾತಿ ಪ್ರಮಾಣ ಅಂದು ಜಾರಿಯಲ್ಲಿದ್ದಂತೆ ಶೇ 50ಕ್ಕೆ ಸೀಮಿತವಾಗಿದ್ದು, ಅದರ ಅನ್ವಯವೇ ನೇಮಕಾತಿ ಮಾಡಲಾಗುತ್ತದೆ. ಈ ಸಂಬಂಧ ಅಡ್ವೊಕೇಟ್ ಜನರಲ್ ಅಭಿಪ್ರಾಯ ಪಡೆಯಲಾಗಿದೆ’ ಎಂದು ಹೇಳಿದರು.

ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ ಶೇ 17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಿ ಈ ಹಿಂದೆ ಆದೇಶ ಹೊರಡಿಸಲಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡೇ ನೇಮಕ ಮಾಡಲಾಗುತ್ತಿದೆ. ನೇಮಕಾತಿಗೆ ಸಂಬಂದಿಸಿದ ಅಧಿಸೂಚನೆ ಹೊರಡಿಸುವಾಗ ಇದನ್ನು ಸ್ಪಷ್ಟಪಡಿಸಲಾಗುತ್ತದೆ. ಹಣಕಾಸಿನ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ವಿವರಿಸಿದರು.

‘ಹಣಕಾಸು ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳಿಗೂ ನೇಮಕಾತಿ ವಿಚಾರವಾಗಿ ಮುಖ್ಯಮಂತ್ರಿಯವರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ’ ಎಂದು ಪಾಟೀಲ ಹೇಳಿದರು.

ನಿರುದ್ಯೋಗಿಗಳ ಆಕ್ರೋಶ: ರಾಜ್ಯದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷ ಹುದ್ದೆ ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡುವಂತೆ ನಿರುದ್ಯೋಗಿಗಳು ಹಲವು ಹಂತಗಳಲ್ಲಿ ಪ್ರತಿಭಟನೆ ನಡೆಸಿದ್ದರು. ಧಾರವಾಡದಲ್ಲಿ ಮೂರು ಬಾರಿ, ಬೆಂಗಳೂರಿನಲ್ಲಿ ಒಂದು ಭಾರಿ ಬೃಹತ್ ಪ್ರತಿಭಟನೆ ನಡೆಸಿದ್ದ ನಿರುದ್ಯೋಗಿ ಯುವಕ-ಯುವತಿಯರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು. ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ನಿರುದ್ಯೋಗಿಗಳ ಕೂಗಿಗೆ ಧ್ವನಿಗೂಡಿಸಿದ್ದರು.

ಪ್ರತಿಭಟನೆ ಕುರಿತು ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಸರ್ಕಾರಿ ಉದ್ಯೋಗ ಪಡೆದು ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕೆಂಬ ಕನಸು ಹೊತ್ತಿರುವ ಉದ್ಯೋಗಾಕಾಂಕ್ಷಿಗಳ ಆಸೆ - ಆಕಾಂಕ್ಷೆಯನ್ನು ರಕ್ಷಿಸಿ, ಅರ್ಹರಿಗೆ ಸೂಕ್ತ ಉದ್ಯೋಗ ಖಚಿತಪಡಿಸಲು ನಮ್ಮ ಸರ್ಕಾರ ಬದ್ಧ’ ಎಂದು ಪ್ರತಿಪಾದಿಸಿದ್ದರು.

‘ನಾವು (ಕಾಂಗ್ರೆಸ್) ಅಧಿಕಾರಕ್ಕೆ ಬಂದಾಗ 2.64 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇದ್ದವು. ಹಿಂದಿನ ಬಿಜೆಪಿ ಸರ್ಕಾರ ಸಕಾಲದಲ್ಲಿ ನೇಮಕಾತಿಗಳನ್ನು ಆರಂಭಿಸದಿರುವುದು ಮತ್ತು ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಯೋಜನೆ ರೂಪಿಸದ ಕಾರಣ ದೊಡ್ಡ ಸಂಖ್ಯೆಯಲ್ಲಿ ಹುದ್ದೆಗಳು ಖಾಲಿ ಉಳಿದಿವೆ’ ಎಂದಿದ್ದರು.

‘ಬಿಜೆಪಿ ಸರ್ಕಾರದ ಅವಧಿಯಲ್ಲಿ (2019–2023) ನೇಮಕಾತಿಯಲ್ಲಿ ನಡೆದ ಅಕ್ರಮಗಳು ಮತ್ತು ಭ್ರಷ್ಟಾಚಾರಗಳು ಇಂದಿನ ಈ ದುಸ್ಥಿತಿಗೆ ಕಾರಣ. ಒಳಮೀಸಲಾತಿ ವಿಷಯವು ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿದ್ದ ಕಾರಣದಿಂದ ಹಲವು ನೇಮಕಾತಿ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಈ ವಿಳಂಬದಿಂದ ಅರ್ಹ ಅಭ್ಯರ್ಥಿಗಳು ಅನ್ಯಾಯಕ್ಕೊಳಗಾಗದಂತೆ ತಡೆಯಲು ಮುಂಬರುವ ನೇಮಕಾತಿಗಳಿಗೆ ಗರಿಷ್ಠ ವಯೋಮಿತಿಯನ್ನು 5 ವರ್ಷ ಸಡಿಲಿಸಲಾಗಿದೆ’ ಎಂದು ಹೇಳಿದ್ದರು.

ಅಭಿಮತ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಿನ್ನನ್ನು ನೀನು ನಂಬದ ಹೊರತು ನಿನಗೆ ದೇವರಲ್ಲಿ ನಂಬಿಕೆ ಬಾರದು.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ತರಕಾರಿಯಲ್ಲಿ ಸೀಸ, ಕೀಟನಾಶಕ ವ್ಯವಸ್ಥೆಯ ಪರಾಮರ್ಶೆ ನಡೆಯಲಿ

ಬೆಂಗಳೂರು ಮಹಾನಗರದ ಸುತ್ತಮುತ್ತ ಮಾರಾಟವಾಗುವ ನಾಲ್ಕನೇ ಒಂದು ಭಾಗದಷ್ಟರಲ್ಲಿ ಹೆಚ್ಚಿನ ತರಕಾರಿಗಳು ಸೀಸ ಹಾಗೂ ಕೀಟನಾಶಕಗಳನ್ನು ಅಪಾಯಕರ ಮಟ್ಟದಲ್ಲಿ ಹೊಂದಿವೆ ಎನ್ನುವ 'ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ' (ಸಿಪಿಸಿಬಿ) ವರದಿ ಕಳವಳ ಹುಟ್ಟಿಸುವಂತಿದೆ. ಹೊಲಗಳಿಂದ ಮಾರುಕಟ್ಟೆಯವರೆಗೆ ಸುರಕ್ಷತಾ ಕ್ರಮಗಳ ನಿಯಂತ್ರಣ ಇಲ್ಲದಿರುವ ವ್ಯವಸ್ಥೆಯ ನಿರ್ಲಕ್ಷ್ಯವನ್ನು ಈ ವರದಿ ಎತ್ತಿ ತೋರಿಸಿದೆ. 'ರಾಷ್ಟ್ರೀಯ ಹಸಿರು ಮಂಡಳಿ' ಸೂಚನೆಯ ಮೇರೆಗೆ ನಡೆದಿರುವ ಅಧ್ಯಯನದಲ್ಲಿ, ಪರೀಕ್ಷೆಗೊಳಪಡಿಸಲಾದ 72 ತರಕಾರಿ ಮಾದರಿಗಳಲ್ಲಿ 19ರಲ್ಲಿ ಅನುಮತಿಸಿರುವ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದ ಸೀಸ ಕಂಡುಬಂದಿದೆ. ಸಾಮಾನ್ಯ ಬದನೆಕಾಯಿ ಮಾದರಿಯಲ್ಲಿ ನಿಗದಿಪಡಿಸಿರುವುದಕ್ಕಿಂತಲೂ 20 ಪಟ್ಟು ಹೆಚ್ಚು ಮಾಲಿನ್ಯಕಾರಕ ಕಣಗಳು ಕಂಡುಬಂದಿವೆ. ಇಷ್ಟೊಂದು ದೊಡ್ಡ ಪ್ರಮಾಣದ ವಿಷಯುಕ್ತ ತರಕಾರಿಗಳು ಯಾವುದೇ ಪರಿಶೀಲನೆ ಇಲ್ಲದೆ ಮಾರುಕಟ್ಟೆಗಳನ್ನು ಪ್ರವೇಶಿಸುತ್ತಿರುವುದು ವ್ಯವಸ್ಥೆಯ ವೈಫಲ್ಯವನ್ನು ಸೂಚಿಸುವಂತಿದೆ. ಬೆಂಗಳೂರಿನ ಈ ಸಮಸ್ಯೆಗೂ ನೀರಿನ ಬಿಕ್ಕಟ್ಟಿಗೂ ಸಂಬಂಧವಿದೆ. 'ಸಿಪಿಸಿಬಿ' ತಂಡ 26 ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದ್ದು, ಅವುಗಳಲ್ಲಿ 23 ಮಾದರಿಗಳು ಮಾಲಿನ್ಯಕಾರಕ ಅಂಶಗಳನ್ನು ಹೊಂದಿರುವುದು ಕಂಡುಬಂದಿದೆ. ನಗರ ವ್ಯಾಪ್ತಿಯಲ್ಲಿನ ರೈತರು ಪುನರಾವರ್ತಿತ ಬರ ಹಾಗೂ ಅಂತರ್ಜಲದ ಕೊರತೆಯಿಂದ, ನಗರ ಪ್ರದೇಶದಲ್ಲಿನ ಸಂಸ್ಕರಣೆಗೆ ಒಳಪಡದ ತ್ಯಾಜ್ಯನೀರನ್ನು ಕೃಷಿಗೆ ಅವಲಂಬಿಸಿರುವುದನ್ನು ವರದಿಯು ದೃಢಪಡಿಸಿದೆ.



ಬೆಂಗಳೂರು ಸುತ್ತಮುತ್ತ ಮಾರಾಟವಾಗುವ ಶೇ 25ರಷ್ಟು ತರಕಾರಿಗಳು ಅಪಾಯಕಾರಿ ರಾಸಾಯನಿಕಗಳನ್ನು ಹೊಂದಿವೆ. ನಮ್ಮ ಊಟದ ತಟ್ಟೆಯಲ್ಲಿ ನಿಧಾನವಿಷ ಸೇರಿಕೊಂಡಿರುವುದು ಕಳವಳದ ಸಂಗತಿ.

ತರಕಾರಿಗಳಲ್ಲಿ ಭಾರ ಲೋಹಗಳು ಇರುವುದು ಸಮಸ್ಯೆಯ ಒಂದು ಮುಖವಷ್ಟೇ. ಪರೀಕ್ಷೆಗೊಳಪಡಿಸಲಾದ ತರಕಾರಿಗಳಲ್ಲಿ 12 ಕೀಟನಾಶಕಗಳು ಸುರಕ್ಷಾ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬಂದಿದೆ. ಇವುಗಳಲ್ಲಿ, 2023ರಲ್ಲಿ ಭಾರತದಲ್ಲಿ ನಿಷೇಧಕ್ಕೊಳಗಾದ ಅತ್ಯಂತ ವಿಷಕಾರಿ ಆರ್ಗನೊಫಾಸ್ಫೇಟ್ ವರ್ಗಕ್ಕೆ ಸೇರಿದ ಮೊನೊಕ್ರೊಟೊಫಾಸ್ ಕೂಡ ಸೇರಿದೆ. ನಿಷೇಧದ ನಂತರವೂ ವಿಷಕಾರಿ ರಾಸಾಯನಿಕದ ಬಳಕೆ ಮುಂದುವರಿದಿರುವುದನ್ನು ಅಧ್ಯಯನವು ಬೆಳಕಿಗೆ ತಂದಿದೆ. ಆಡಳಿತ ಯಂತ್ರದಲ್ಲಿನ ಲೋಪಗಳಿಂದಾಗಿ, ಹಳೆಯ ಸಂಗ್ರಹ ಅಥವಾ ಕಾನೂನುಬಾಹಿರ ಪೂರೈಕೆಯ ಮೂಲಕ ಅಪಾಯಕಾರಿ ರಾಸಾಯನಿಕ ಬಳಕೆಯಲ್ಲಿದೆ. ಭಾರ ಲೋಹಗಳು ಮತ್ತು ಕೀಟನಾಶಕಗಳ ಒಗ್ಗೂಡುವಿಕೆಯು ಅತ್ಯಂತ ಅಪಾಯಕಾರಿಯಾಗಿದ್ದು, ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ. ಅಧಿಕ ಪ್ರಮಾಣದ ಸೀಸ ಮೆದುಳು ಮತ್ತು ಮೂತ್ರಪಿಂಡಗಳನ್ನು ತೀವ್ರವಾಗಿ ಗಾಸಿಗೊಳಿಸಬಹುದು, ಹೃದ್ರೋಗದ ಸಮಸ್ಯೆಗಳಿಗೂ ಎಡೆ ಮಾಡಿಕೊಡಬಹುದು. ಆಹಾರ ಪದಾರ್ಥಗಳಲ್ಲಿನ ಕೀಟನಾಶಕಗಳು ನರಸಂಬಂಧಿ ಸಮಸ್ಯೆಗಳು, ಕ್ಯಾನ್ಸರ್ ಉಂಟುಮಾಡಬಹುದು ಹಾಗೂ ಹಾರ್ಮೋನ್‌ಗಳ ಕಾರ್ಯಾಚರಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಅಗೋಚರ ಮಾಲಿನ್ಯಕಾರಕಗಳು ಬೆಂಗಳೂರಿನ ನಾಗರಿಕರ ಮೇಲೆ ಸದ್ದಿಲ್ಲದೆ ಹೇರಿರುವ 'ಆರೋಗ್ಯ ತೆರಿಗೆ'ಯಂತಿವೆ. ಹಣ್ಣು ತರಕಾರಿಗಳನ್ನು ಸ್ವಚ್ಛವಾಗುವಂತೆ ತೊಳೆಯುವುದು, ಸಿಪ್ಪೆ ಮತ್ತು ಬೇರುಗಳನ್ನು ತೆಗೆಯುವುದು, ತರಕಾರಿ ಮೂಲಗಳನ್ನು ವೈವಿಧ್ಯಗೊಳಿಸುವುದು ಹಾಗೂ ಋತುಮಾನ ಆಧಾರಿತ ಕೃಷಿ ಉತ್ಪನ್ನಗಳನ್ನು ಬಳಸುವಂತಹ ಸುರಕ್ಷತಾ ಕ್ರಮಗಳಿಂದ ಸಮಸ್ಯೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದು. ಆದರೆ, ಸಸ್ಯಗಳ ದೇಹದಲ್ಲೇ ತುಂಬಿಕೊಂಡ ವಿಷವನ್ನು ಬೇರ್ಪಡಿಸುವುದು ಹೇಗೆ?

'ಸಿಪಿಸಿಬಿ' ಅಧ್ಯಯನವು ಬೆಂಗಳೂರಿಗೆ ತರಕಾರಿ ಪೂರೈಕೆಯಾಗುವ ಒಂದು ಭಾಗಕ್ಕಷ್ಟೇ ಸೀಮಿತವಾಗಿದ್ದು, ಮಹಾನಗರಕ್ಕೆ ತರಕಾರಿ ಪೂರೈಕೆಯಾಗುವ ಎಲ್ಲ ಮೂಲಗಳನ್ನು ಸಮಗ್ರವಾಗಿ ಒಳಗೊಂಡಿಲ್ಲ ಎನ್ನುವುದನ್ನು ಗಮನಿಸಬೇಕು. ಈ ಸೀಮಿತ ಚೌಕಟ್ಟಿನಲ್ಲೂ ಅಧ್ಯಯನದ ಮಾದರಿಗಳ ಫಲಿತಾಂಶವು ಸಮಸ್ಯೆಯ ವಿರಾಟ್ ಸ್ವರೂಪವನ್ನು ಅಂದಾಜು ಮಾಡಲು ನೆರವಾಗುವಂತಿದೆ. ತರಕಾರಿ ಬೆಳೆಯಲು ತ್ಯಾಜ್ಯ ನೀರು ಬಳಸುವ ಹಾಗೂ ಸುರಕ್ಷತಾ ಕ್ರಮಗಳ ಮೇಲ್ವಿಚಾರಣೆ ಇಲ್ಲದ ಪ್ರದೇಶಗಳಲ್ಲಿ, ಪಟ್ಟಣ ಹಾಗೂ ಇತರ ನಗರ ಪ್ರದೇಶಗಳಲ್ಲೂ ಪರಿಸ್ಥಿತಿ ಇಷ್ಟೇ ಗಂಭೀರವಾಗಿರಬಹುದು ಅಥವಾ ಇನ್ನೂ ಹೆಚ್ಚು ತೀವ್ರವಾಗಿರಬಹುದು. ವಿಷಕಾರಿ ರಾಸಾಯನಿಕಗಳನ್ನು ಒಳಗೊಂಡ ತರಕಾರಿಗಳ ಸಮಸ್ಯೆ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದುದಲ್ಲ. ಅದು, ಏರುಗತಿಯ ನಗರ ವಿಸ್ತರಣೆ, ಕೈಗಾರಿಕಾ ಮಾಲಿನ್ಯ ಹಾಗೂ ಕೃಷಿ ಸಮಸ್ಯೆಗಳು ಒಗ್ಗೂಡುವುದರ ಪರಿಣಾಮವನ್ನು ಸೂಚಿಸುವ ಎಚ್ಚರಿಕೆಯ ಗಂಟೆಯಾಗಿದೆ. ಆಹಾರದ ಸುರಕ್ಷತೆಯು ಮುಂದೆಂದೋ ಸರಿಪಡಿಸಬಹುದಾದ ಸಮಸ್ಯೆಯಾಗಿರದೆ, ಮಣ್ಣು, ನೀರು, ಮಾರುಕಟ್ಟೆಯಿಂದ ಅನ್ನದ ತಟ್ಟೆಯವರೆಗಿನ ವ್ಯವಸ್ಥೆಯಲ್ಲಿ ಆಗಬೇಕಾಗಿರುವ ಆಮೂಲಾಗ್ರ ಬದಲಾವಣೆಯಾಗಿದೆ.

ಸೌಲಭ್ಯ ಮರೀಚಿಕೆ



ಊರಿಗೆ ಸರಿಯಾದ ರಸ್ತೆ ಇಲ್ಲ. ಆಸ್ಪತ್ರೆಯಲ್ಲಿ ಔಷಧವಿಲ್ಲ. ಯುವಕರಿಗೆ ಉದ್ಯೋಗ ಇಲ್ಲ. ಹೋಗಲಿ, ಗ್ಯಾರಂಟಿಗಳು ಸರಿಯಾಗಿ ಸಿಗುತ್ತಿವೆಯೆ? ಅದೂ ಇಲ್ಲ. ಹೀಗಿರುವಾಗ ಇಂತಹ ಸರ್ಕಾರವನ್ನು ಜನ ಮತ್ತೊಮ್ಮೆ ಅಧಿಕಾರಕ್ಕೆ ತರುತ್ತಾರೆಯೆ?

ಮಧುಕರ ಆರ್. ಮಯ್ಯ, ವಕೀಲ, 'ಎಕ್ಸ್'ನಿಂದ

ಕಿಡಿನುಡಿ



ಅಮೆರಿಕದ ಜೊತೆಗೆ ಭಾರತ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದವು ದೇಶದ ಕೃಷಿಯ ಬೆನ್ನೆಲುಬನ್ನು ಮುರಿಯಲಿದೆ. ನಾವು ನಿತ್ಯ ಅನ್ನ ತಿನ್ನುತ್ತೇವೆ; ಅನ್ನ ನೀಡುವವರನ್ನೇ ಮರೆಯುವುದು ಸರಿಯೆ?

ರಾಹುಲ್ ಗಾಂಧಿ, ಲೋಕಸಭೆ ವಿರೋಧಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 27-2-2001

• **ಐಎಎಸ್ ಅಧಿಕಾರಿ ಪುತ್ರರು ಸೇರಿ 4 ಮಕ್ಕಳು ನಾಪತ್ತೆ**

ಬೆಂಗಳೂರು, ಫೆ. 26– ಆಟ ಆಡಲು ಹೋದ ಮೈಸೂರು ವಿಭಾಗಾಧಿಕಾರಿ ಎಚ್. ಭಾಸ್ಕರ್ ಅವರ ಇಬ್ಬರು ಪುತ್ರರು ಸೇರಿದಂತೆ ಒಟ್ಟು ನಾಲ್ಕು ಮಂದಿ ಬಾಲಕರು ಕಳೆದ ಶನಿವಾರದಿಂದ (ಫೆ. 24) ನಾಪತ್ತೆಯಾಗಿದ್ದಾರೆ.

ಭಾಸ್ಕರ್ ಪುತ್ರರಾದ ಅಂಚಿತ್ (13) ಹಾಗೂ ಅಬಿನಿತ್ (11) ಕಾಣೆಯಾಗಿರುವ ಮಕ್ಕಳು. ಇವರ ಜತೆ ಪಕ್ಕದ ಮನೆಯ ಡಾ. ನಾರಾಯಣ ಎಂಬುವರ ಮಗ ಎಂ.ವಿ. ರಾಜು (11) ಮತ್ತು ವೇಲು ಎಂಬುವರ ಮಗ ವಿಶಾಲ್ (13) ಕೂಡ ನಾಪತ್ತೆಯಾಗಿದ್ದಾನೆ. ಭಾಸ್ಕರ್ ಅವರ ಪತ್ನಿ ಜಯನಗರ ಪೊಲೀಸರಿಗೆ ಕಾಣೆಯಾಗಿರುವ ಬಗ್ಗೆ ದೂರು ನೀಡಿದ್ದಾರೆ. ಪ್ರಕರಣವನ್ನು ಕೆಲವರು ಅಪಹರಣ ಎಂದು ಬಣ್ಣಿಸಿದ್ದು, ಅದನ್ನು ಪೊಲೀಸರು ನಿರಾಕರಿಸಿದ್ದಾರೆ.

• **ಸರ್ ಬ್ರಾಡ್ಮನ್ ಇನ್ನಿಲ್ಲ**

ಸಿಡ್ನಿ, ಫೆ. 26– ವಿಶ್ವ ಕ್ರಿಕೆಟ್ ರಂಗದ ಅನರ್ಘ್ಯ ರತ್ನ ಸರ್ ಡೊನಾಲ್ಡ್ ಬ್ರಾಡ್ಮನ್ ಇನ್ನಿಲ್ಲ. ಅರ್ಧ ಶತಮಾನದ ಹಿಂದೆ ವಿಶ್ವ ಕ್ರಿಕೆಟ್ ರಂಗದಲ್ಲಿ ತಾನೇ ತಾನಾಗಿ ಮೆರೆದಿದ್ದ ಆಸ್ಟ್ರೇಲಿಯಾದ ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ ಬ್ರಾಡ್ಮನ್ ಭಾನುವಾರ ಅಡಿಲೇಡ್‌ನ ತಮ್ಮ ಸ್ವಗೃಹದಲ್ಲಿ ನಿಧನರಾದರು.

ಅವರಿಗೆ 92 ವರ್ಷ ವಯಸ್ಸಾಗಿತ್ತು. 1927ರಲ್ಲಿ ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಆಡಲು ಇಳಿದ ಬ್ರಾಡ್ಮನ್ ನಂತರ 21 ವರ್ಷ ದಾಖಲೆ ಮಾಡುತ್ತಾ ಹೋದರು.

75 ವರ್ಷಗಳ ಹಿಂದೆ


ಮಂಗಳವಾರ, 27-2-1951

• **ಭಾರತ-ಪಾಕಿಸ್ತಾನ ವ್ಯಾಪಾರ ಒಪ್ಪಂದಕ್ಕೆ ಸಹಿ**

ಕರಾಚಿ, ಫೆ. 26– ಭಾರತ–ಪಾಕಿಸ್ತಾನ ವಾಣಿಜ್ಯ ಒಪ್ಪಂದಕ್ಕೆ ನಿನ್ನೆ ಮಧ್ಯಾನ್ಹ ನಾಲ್ಕು ಗಂಟೆಗೆ ಇಲ್ಲಿ ಸಹಿ ಬಿತ್ತು. ನಿನ್ನೆ ದಿನ ಸೇರಿದ್ದ ಪಾಕಿಸ್ತಾನ ಮಂತ್ರಿಮಂಡಳದ ಸಭೆಯು ಒಪ್ಪಂದವನ್ನು ಅನುಮೋದಿಸಿತು. ಭಾರತದ ಮಂತ್ರಿಮಂಡಳವೂ ಅನುಮೋದಿಸಿದ ಮೇಲೆ ಸೋಮವಾರ ಸಂಜೆ ಐದು ಗಂಟೆಗೆ ಒಪ್ಪಂದವನ್ನು ದೆಹಲಿ–ಕರಾಚಿಗಳೆಡರಲ್ಲೂ ಏಕಕಾಲಕ್ಕೆ ಪ್ರಕಟಿಸಲಾಯಿತು.

ಮತದಾರನೇ ಮಂಕುತಿಮ್ಮನು!

ಅನುಸಂಧಾನ



ರವೀಂದ್ರ ಭಟ್ಟ

> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರನಷ್ಟು ಅಸಹಾಯಕ ಬೇರೊಬ್ಬರಿಲ್ಲ ಎನ್ನುವುದಕ್ಕೆ ಕರ್ನಾಟಕದಲ್ಲಿನ ಸದ್ಯದ ಸ್ಥಿತಿ ನಿದರ್ಶನದಂತಿದೆ. ಮುಖ್ಯಮಂತ್ರಿ ಕುರ್ಚಿಯ ಸುತ್ತ ಗಿರಕಿ ಹೊಡೆಯುತ್ತಿರುವ ರಾಜಕಾರಣದಿಂದಾಗಿ ಆಡಳಿತ ಯಂತ್ರ ತೂಕಡಿಸುತ್ತಿದೆ; ಅಭಿವೃದ್ಧಿ ಚಟುವಟಿಕೆಗಳು ಕುಂಟುತ್ತಿವೆ. ಮತದಾರನೀಗ ಇಂಗು ತಿಂದ ಮಂಗ.

'ಸರಕಾರ ಹರಿಗೋಲು, ತೆರೆಸುಳಿಗಳತ್ತಿತ್ತ, ಸುರೆಕುಡಿದವರು ಕೆಲರು ಹುಟ್ಟು ಹಾಕುವರು, ಬಿರುಗಾಳಿ ಬೀಸುವುದು, ಜನವೆದ್ದು ಕುಣಿಯುವುದು, ಉರುಳದಿಹುದಚ್ಚರಿಯು–ಮಂಕುತಿಮ್ಮ'.

ಸುಮಾರು ಎಂಟು ದಶಕಗಳ ಹಿಂದೆ ಡಿವಿಜಿ ಅವರು ಇಂತಹ ಮಾತೊಂದನ್ನು ಹೇಳಿದ್ದರು. ಆಗ ರಾಜಕೀಯ ಇಷ್ಟು ಕೆಟ್ಟಿರಲಿಲ್ಲ. ಸಾರ್ವಜನಿಕ ಜೀವನವೂ ಇಷ್ಟು ಹಾಳಾಗಿರಲಿಲ್ಲ. ರಾಜಕಾರಣಿಗಳಲ್ಲಿ ಅಷ್ಟೋ ಇಷ್ಟೋ ಪ್ರಾಮಾಣಿಕತೆ ಇತ್ತು. ಅಂತಹ ಸಂದರ್ಭದಲ್ಲಿಯೇ ಡಿವಿಜಿ ಇಂತಹ ಮಾತನ್ನು ಹೇಳಿದ್ದಾರೆಂದರೆ, ಈಗ ಅವರು ಬದುಕಿದ್ದರೆ ಏನು ಹೇಳುತ್ತಿದ್ದರೋ ಏನೋ?

'ಮಂಕುತಿಮ್ಮನ ಕಗ್ಗ'ದಲ್ಲಿ ಬರುವ ಈ ಪದ್ಯ ಇಂದಿನ ರಾಜಕೀಯಕ್ಕೆ ಎಷ್ಟು ಹತ್ತಿರವಾಗಿದೆ ಎಂದರೆ, ಇಂದಿನ ಸ್ಥಿತಿಯನ್ನು ನೋಡಿಯೇ ಅವರು ಬರೆದಿದ್ದಾರೇನೋ ಎನ್ನುವಂತಿದೆ. ಸರಕಾರವೆಂಬುದು ಒಂದು ದೋಣಿಯಂತೆ. ರಾಜಕೀಯ ಅಸ್ಥಿರತೆಗೆ ಸಿಕ್ಕು ಅದು ಅಲುಗಾಡುತ್ತಿದೆ. ಅಧಿಕಾರದ ಅಹಂಕಾರ ಮತ್ತು ಭ್ರಷ್ಟಾಚಾರದಲ್ಲಿ ಮಗ್ನರಾಗಿರುವ ನಾಯಕರು ದೋಣಿಯನ್ನು ಮುನ್ನಡೆಸುತ್ತಿದ್ದಾರೆ. ರಾಜಕೀಯ ಅಸ್ಥಿರತೆ ಮತ್ತು ಜನಾಕ್ರೋಶದ ಬಿರುಗಾಳಿ ಬೀಸುತ್ತಿದೆ. ಆದರೂ ದೋಣಿ ಮುಳುಗದೇ ಇರುವುದು, ಅಂದರೆ ಸರ್ಕಾರ ನಡೆಯುತ್ತಿರುವುದೇ ಅಚ್ಚರಿ ಎಂಬುದು ಅವರ ಮಾತಿನ ಸಾರಾಂಶ. ಸದ್ಯದ ರಾಜ್ಯ ರಾಜಕೀಯ ಮತ್ತು ಸರ್ಕಾರದ ನಡೆಯನ್ನು ನೋಡಿದರೆ ನಮಗೂ ಹಾಗೆಯೇ ಅನ್ನಿಸುತ್ತದೆ.

ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಕೇಳಿಬರುತ್ತಿರುವ ಎರಡೇ ಶಬ್ದಗಳೆಂದರೆ ಅದು 'ಅಧಿಕಾರ ಹಸ್ತಾಂತರ'. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡ್ತಾರಾ? ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗ್ತಾರಾ? ಎನ್ನುವ ಪ್ರಶ್ನೆಗಳ ಸುತ್ತಲೇ ರಾಜ್ಯದ ರಾಜಕೀಯ ಗಿರಕಿ ಹೊಡೆಯುತ್ತಿದೆ. ಇದರಿಂದಾಗಿ ಆಡಳಿತ ಯಂತ್ರವೂ ಸ್ಥಗಿತವಾಗಿದೆ. ಅಭಿವೃದ್ಧಿ ಕೆಲಸಗಳಿಗೆ ಗ್ರಹಣ ಹಿಡಿದಿದೆ. ಅಧಿಕಾರಶಾಹಿಗಳು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅಧಿಕಾರ ಹಸ್ತಾಂತರ ಸಮಸ್ಯೆ ಬಗೆಹರಿಯಲಿ. ಆ ನಂತರವೇ ಕೆಲಸ ಮಾಡಿದರಾಯಿತು ಎನ್ನುವ ಮೂಡಿನಲ್ಲಿದ್ದಾರೆ. 'ಬಡವನ ಸಿಟ್ಟು ದವಡೆಗೆ ಮೂಲ' ಎನ್ನುವ ಹಾಗೆ ಜನಸಾಮಾನ್ಯರ ಆಕ್ರೋಶ ಪ್ರಭುತ್ವವನ್ನು ತಾಗುತ್ತಿಲ್ಲ. ಜನರು ಚುನಾವಣೆ ಬರುವವರೆಗೆ ಕಾಯಬೇಕು ಅಷ್ಟೆ. ಅವರು ಬಡಿಗೆ ಹಿಡಿದುಕೊಂಡು ಕಾಯುತ್ತಿದ್ದಾರೆ. ರಾಜ್ಯದ ಆಡಳಿತ ಪಕ್ಷದಲ್ಲಿ ಭಿನ್ನಮತ ಸ್ಫೋಟಗೊಂಡಾಗಲೆಲ್ಲ ಮತದಾರರು ತಮ್ಮ ಕೈಯಲ್ಲಿರುವ ಲಾಠಿ ಬೀಸಿದ್ದಾರೆ. ರಾಜಕಾರಣಿಗಳಿಗೆ ಬುದ್ಧಿ ಕಲಿಸಿದ್ದಾರೆ. ಆದರೂ ಅವರು ಪಾಠ ಕಲಿತಿಲ್ಲ.

ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಖಳನಾಯಕನ ಸ್ಥಾನದಲ್ಲಿ ನಿಂತಿದೆ. ಒಂದು ನಿರ್ದಿಷ್ಟ ತೀರ್ಮಾನವನ್ನು ಕೈಗೊಳ್ಳದೆ ಪಕ್ಷದ ರಾಜ್ಯ ಘಟಕವನ್ನೂ, ರಾಜ್ಯವನ್ನೂ ಅಸ್ಥಿರತೆಯಲ್ಲಿ ಸಿಲುಕಿಸಿದ ಹೊಣೆಯನ್ನು ಕಾಂಗ್ರೆಸ್ ಹೈಕಮಾಂಡ್ ಹೊರಲೇಬೇಕಿದೆ. ಎರಡೂವರೆ ವರ್ಷದ ನಂತರ ಅಧಿಕಾರ ಬಿಟ್ಟುಕೊಡುವ ಬಗ್ಗೆ ಸಿದ್ದರಾಮಯ್ಯ ಮತ್ತು ತಮ್ಮ ನಡುವೆ ಒಪ್ಪಂದವಾಗಿದೆ. ಇದು ನಾಲ್ಕು ಗೋಡೆಯ ನಡುವೆ ನಡೆದ ರಹಸ್ಯ ಒಪ್ಪಂದವಲ್ಲ. ಹೈಕಮಾಂಡ್ ಎದುರಿಗೇ ಆಗಿದೆ ಎಂದು ಡಿ.ಕೆ. ಶಿವಕುಮಾರ್ ಪದೇ ಪದೇ ಹೇಳುತ್ತಿದ್ದಾರೆ. ಅಂತಹ ಯಾವುದೇ ಒಪ್ಪಂದ ಆಗಿಲ್ಲ. ಸಿದ್ದರಾಮಯ್ಯ ಐದು ವರ್ಷಕ್ಕೆ ಮುಖ್ಯಮಂತ್ರಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಬೆಂಬಲಿಗರು ಹೇಳುತ್ತಾರೆ. ಒಪ್ಪಂದ ಆಗಿದೆ ಅಥವಾ ಇಲ್ಲ ಎಂದು ಹೇಳುವ ಹೊಣೆ ಕಾಂಗ್ರೆಸ್ ಹೈಕಮಾಂಡ್‌ನದ್ದೇ ಆಗಿದೆ. ಯಾವುದೇ ನಿರ್ದಿಷ್ಟ ನಿರ್ಧಾರ ಕೈಗೊಳ್ಳಲು ಹೈಕಮಾಂಡ್‌ಗೆ ಹಲವಾರು ಸಮಸ್ಯೆ ಇರಬಹುದು. ಆದರೆ, ಅದು ರಿಸ್ಕ್ ತೆಗೆದುಕೊಳ್ಳದಿದ್ದರೆ ಕರ್ನಾಟಕದ ಮತದಾರ ಒಂದು ಗಟ್ಟಿ ನಿರ್ಧಾರಕ್ಕೆ ಬರುವುದಂತೂ ನಿಜ.

ಕೇರಳ, ತಮಿಳುನಾಡು, ಅಸ್ಸಾಂ ರಾಜ್ಯಗಳಲ್ಲಿ ಚುನಾವಣೆ ಇದೆ. ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಿದರೆ ತಪ್ಪು ಸಂದೇಶ ಹೋಗಬಹುದು ಎಂಬ ಭಯ ಹೈಕಮಾಂಡ್ ಅನ್ನು ಕಾಡುತ್ತಿರಬಹುದು. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ಪ್ರದರ್ಶಿಸುತ್ತಿರುವ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರನ್ನು ಇಳಿಸುವ ತೀರ್ಮಾನ ಕೈಗೊಂಡರೆ, ಈ ವರ್ಗಗಳು ಪಕ್ಷದಿಂದ ದೂರ ಸರಿಯಬಹುದು ಎಂಬ ಭೀತಿಯೂ ಇರಬಹುದು. ಅಂತಹ ನಿರ್ಧಾರದಿಂದ ದೇಶದಾದ್ಯಂತ ನಡೆಸುತ್ತಿರುವ ಹೋರಾಟಕ್ಕೆ ಹಿನ್ನಡೆಯಾಗಬಹುದು ಎಂಬ ಆತಂಕವೂ ಇರಬಹುದು. ಯಾವುದೇ ನಿರ್ಧಾರ ಕೈಗೊಳ್ಳದೆ ಇದ್ದು, ನಡೆಯುವಷ್ಟು ದಿನ ನಡೆಯಲಿ ಎಂಬ ಉದಾಸೀನವೂ ಇರಬಹುದು. ಆದರೆ, ಇದೆಲ್ಲವೂ ರಾಜ್ಯದ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದೇ ಒಂದು ಮತ್ತೊಂದು ರಾಜ್ಯದಲ್ಲಿ. ಈಗಲೂ ಗಟ್ಟಿ ನಿರ್ಧಾರ ಕೈಗೊಳ್ಳದೇ ಇದ್ದರೆ ಇದ್ದ ಒಂದು ರಾಜ್ಯವೂ ಕೈ ತಪ್ಪಿ ಹೋಗಬಹುದು.

ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಡಿ.ಕೆ.ಶಿವಕುಮಾರ್ ಅವರ ಪಾತ್ರವೂ ಇದೆ. ಅವರ ಸಂಘಟನಾ ಚಾತುರ್ಯ ಕೆಲಸ ಮಾಡಿದೆ. ಒಕ್ಕಲಿಗ ಸಮುದಾಯದವರು ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಿರುವುದರಲ್ಲಿ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂಬ ಮುಂದಾಲೋಚನೆ ಇತ್ತು. ಶಿವಕುಮಾರ್ ಅವರ ಸಂಘಟನಾ ಶಕ್ತಿ ಏನು ಎನ್ನುವುದು ಹೈಕಮಾಂಡ್‌ಗೆ ಗೊತ್ತಿಲ್ಲದ ವಿಷಯ ಏನಲ್ಲ. ಅದು ಅಸ್ಸಾಂ ಆಗಲಿ, ಗುಜರಾತ್ ಆಗಲಿ, ತೆಲಂಗಾಣ ಆಗಲಿ, ಎಲ್ಲಿಯಾದರೂ ಪಕ್ಷಕ್ಕೆ ಸಂಕಷ್ಟ ಬಂದಿದೆ ಎಂದಾದರೆ ಮೊದಲು ಕರೆ ಬರುವುದು ಶಿವಕುಮಾರ್ ಅವರಿಗೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಶಿವಕುಮಾರ್ ಈಗ ಮುಖ್ಯಮಂತ್ರಿ ಆಗದೇ ಇದ್ದರೆ ಒಕ್ಕಲಿಗರು ಮುನಿಸಿಕೊಂಡಾರು ಎಂಬ ಭಯವೂ ಹೈಕಮಾಂಡ್‌ಗೆ ಇದೆ. ಕೇರಳ ಮತ್ತು ಅಸ್ಸಾಂನಲ್ಲಿ ಪಕ್ಷಕ್ಕೆ ಒಳ್ಳೆಯ ವಾತಾವರಣ ಇದೆ. ತಮಿಳುನಾಡಿನಲ್ಲಿ ಪಕ್ಷ ಅಧಿಕಾರಕ್ಕೆ ಬರುವ ಯಾವ ಸಾಧ್ಯತೆಯೂ ಇಲ್ಲ. ಹೀಗಿರುವಾಗ ಇಲ್ಲಿ ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಲು ಅಡ್ಡಿ ಏನು ಎಂಬುದು ಅವರ ಬೆಂಬಲಿಗರ ವಾದ. ಸಂಕಷ್ಟ ಪರಿಹಾರಕ್ಕೆ ಬೇಕು; ಅಧಿಕಾರಕ್ಕೆ ಬೇಡ ಎಂದರೆ ಇದ್ಯಾವ ಸೀಮೆ ನ್ಯಾಯ ಎಂದು ಶಿವಕುಮಾರ್ ಬೆಂಬಲಿಗರು ಕೇಳುತ್ತಿದ್ದಾರೆ. ಆದರೂ ಕಾಂಗ್ರೆಸ್ ಹೈಕಮಾಂಡ್ ಮುಗುಂ ಆಗಿಯೇ ಇದೆ.

ಇನ್ನು ಮತದಾರರ ಕತೆ ಕೇಳಿ. ಅವರಿಗೆ ಯಾರು ಮುಖ್ಯಮಂತ್ರಿಯಾಗಿದ್ದಾರೆ; ಯಾರು ಮುಖ್ಯಮಂತ್ರಿಯಾಗುತ್ತಾರೆ ಎನ್ನುವುದು ಮುಖ್ಯವೇ ಅಲ್ಲ. ಅಧಿಕಾರ ಹಸ್ತಾಂತರದ ಒಪ್ಪಂದ ಆಗಿದೆಯೋ ಇಲ್ಲವೋ ಎನ್ನುವುದೂ ಅವರಿಗೆ ಬೇಕಾಗಿಲ್ಲ. ಕುರುಬನೋ, ಒಕ್ಕಲಿಗನೋ, ದಲಿತನೋ ಯಾವುದೇ ಜಾತಿಯವನು ಮುಖ್ಯಮಂತ್ರಿಯಾಗಲಿ. ಜನರ ಕಷ್ಟ ಸುಖ ವಿಚಾರಿಸಲಿ, ಆಡಳಿತ ಸರಿಯಾಗಿ ನಡೆಸಲಿ. ರಾಜ್ಯವನ್ನು ಅಭಿವೃದ್ಧಿಯ ಹಾದಿಯಲ್ಲಿ ನಡೆಸಿಕೊಂಡುಹೋಗಲಿ. ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗಿರಲಿ. ಭ್ರಷ್ಟಾಚಾರ ಕಡಿಮೆಯಾಗಲಿ. ಇದನ್ನೆಲ್ಲ ಮಾಡುವವನೊಬ್ಬ ಮುಖ್ಯಮಂತ್ರಿಯಾಗಲಿ ಎನ್ನುವುದಷ್ಟೇ ಅವರ ಬಯಕೆ. ಅದಕ್ಕೊಂದು ದಾರಿಯನ್ನು ಕಾಂಗ್ರೆಸ್ ಹೈಕಮಾಂಡ್ ಹುಡುಕಬೇಕಾಗಿದೆ.

ಮುಖ್ಯಮಂತ್ರಿ ಸ್ಥಾನದಲ್ಲಿರುವ ಸಿದ್ದರಾಮಯ್ಯ ಅವರು ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಬಯಸುವುದು ಸಹಜ ಕ್ರಿಯೆ. ಅದಕ್ಕೆ ಅವರು ತಮ್ಮ ಪ್ರಭಾವವನ್ನೂ ಬಳಸುತ್ತಾರೆ. ತಂತ್ರಗಳನ್ನು ಹೆಣೆಯುತ್ತಾರೆ. ದಲಿತ ಮುಖ್ಯಮಂತ್ರಿ ಎಂಬ ಬಾಣವನ್ನೂ ಬಿಡುತ್ತಾರೆ. ಜಾತಿಯನ್ನು ಪ್ರಸ್ತಾಪಿಸುತ್ತಾರೆ. 'ಅಹಿಂದ ಕಾರ್ಡ್' ಬಳಸುತ್ತಾರೆ. ಎಲ್ಲವೂ ಸಹಜ. ಅಧಿಕಾರದಿಂದ ಇಳಿಯುವುದು ಯಾರಿಗೂ ಖುಷಿ ಕೊಡುವ ಸಮಾಚಾರ ಅಲ್ಲ. ಉಳಿಸಿಕೊಳ್ಳಲು ಸರ್ವ ಪ್ರಯತ್ನವನ್ನೂ ನಡೆಸುವುದು ಸರಿಯೇ ಸರಿ. ಅವರ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಯತೀಂದ್ರ ಅಂತೂ ದಿನಾ ಬೆಳಿಗ್ಗೆ ತನ್ನ ತಂದೆ ಐದೂ ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ ಎಂದು ಹೇಳುತ್ತಲೇ ಇರುತ್ತಾರೆ. ಸಿದ್ದರಾಮಯ್ಯ ಬೆಂಬಲಿಗರೂ ಅಷ್ಟೆ. ಇದರಲ್ಲಿ ಅಚ್ಚರಿ ಎನ್ನುವುದು ಏನೂ ಇಲ್ಲ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೂ ಮುಖ್ಯಮಂತ್ರಿ ಗಾದಿಯನ್ನು ಪಡೆಯಲು ಯತ್ನ ನಡೆಸುತ್ತಲೇ ಇದ್ದಾರೆ. ಅವರ ಬೆಂಬಲಿಗರೂ ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮುಹೂರ್ತವನ್ನು ನಿಗದಿ ಮಾಡುತ್ತಲೇ ಇದ್ದಾರೆ. ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಅವರು ತಮ್ಮ ಅಣ್ಣ ಶಿವಕುಮಾರ್ ಮುಖ್ಯಮಂತ್ರಿಯಾಗುವ ದಿನಕ್ಕಾಗಿ ಕಾಯುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ಶಿವಕುಮಾರ್ ಬೆಂಬಲಿಗರೂ ತಂತ್ರಗಳನ್ನು ಹೆಣೆಯುತ್ತಾರೆ. ಅದೂ ಸಹಜ. ಎಷ್ಟೇ ಪ್ರಭಾವಿಯಾಗಿದ್ದರೂ ಅಧಿಕಾರದ ಗದ್ದುಗೆ ಏರುವುದು ಕಷ್ಟ. ಎಷ್ಟೇ ದುರ್ಬಲನಾಗಿದ್ದರೂ ಅಧಿಕಾರದಿಂದ ಇಳಿಸುವುದು ಕಷ್ಟ. ಇದು ಈಗ ಶಿವಕುಮಾರ್ ಅರಿವಿಗೆ ಬಂದಿರಬಹುದು.

ಗ್ಯಾರಂಟಿಯನ್ನು ನಂಬಿಯೋ, ಬಿಜೆಪಿ ಸರ್ಕಾರದ ಆಡಳಿತದ ವೈಖರಿಗೆ ಕಂಗೆಟ್ಟೋ, ಅಂತೂ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದ ಕರ್ನಾಟಕದ ಮತದಾರರ ಸ್ಥಿತಿ ಏನಾಗಿದೆ? ಇಂಗು ತಿಂದ ಮಂಗನಂತಾಗಿದೆ. ಮತದಾರನೇ ಈಗ 'ಮಂಕುತಿಮ್ಮ' ಎನ್ನುವುದೂ ಸಾಬೀತಾಗಿದೆ. ಮತದಾರ 'ಮಂಕುತಿಮ್ಮ'ನಾದರೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನ ಸ್ಥಿತಿ? ಅವ 'ಮಂಕುತಿಮ್ಮ'ನ ತಮ್ಮ ಅಷ್ಟೆ.



ವಾಚಕರ ವಾಣಿ

ದಲಿತ ಸಿಎಂ: ಪೂರ್ಣಾವಧಿಗೆ ಇರಲಿ

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಕೂಗು ತಾರಕಕ್ಕೇರಿದೆ. ದಲಿತರಿಗೆ ಸಿಎಂ ಪಟ್ಟ ನೀಡಲಿ ಎಂದು ಕೆಲವರು ಕೇಳುತ್ತಿರುವುದು ತಪ್ಪೇನಲ್ಲ. ಆದರೆ, ಅಧಿಕಾರ ಬಿಟ್ಟುಕೊಡುವ ಮನಸ್ಸು ಸಿದ್ದರಾಮಯ್ಯನವರಿಗೆ ಇದ್ದಂತಿಲ್ಲ. ನನ್ನ ಬದಲು ದಲಿತರಲ್ಲಿ ಇಂಥವರು ಸಿಎಂ ಆಗಲಿ ಎಂದು ಹೇಳಿ ಕುರ್ಚಿ ಬಿಟ್ಟುಕೊಟ್ಟರೆ ಅವರಿಗೆ ಹೆಚ್ಚಿನ ಗೌರವ ಪ್ರಾಪ್ತವಾಗುತ್ತದೆ. ಆದರೆ, ಅವರಿಗೆ ಮನಸ್ಸಿಲ್ಲ; ಸದ್ಯಕ್ಕೆ ಅಂತಹ ಸನ್ನಿವೇಶವೂ ಹದಗೊಂಡಿಲ್ಲ. ಸರ್ಕಾರದ ಅವಧಿ ಇನ್ನು ಎರಡು ವರ್ಷವಷ್ಟೇ ಇದೆ. ಈ ಅರೆಕಾಲಿಕ ಅವಧಿಗೆ ದಲಿತರಿಗೆ ಸಿಎಂ ಗಾದಿ ಕೇಳುವ ಬದಲು, ಮುಂದೆ ಪೂರ್ಣಾವಧಿಗೆ ಸಿಎಂ ಆಗುವುದೇ ಸೂಕ್ತವೂ ತೃಪ್ತಿಕರವೂ ಆಗುತ್ತದೆಯಲ್ಲವೇ?

ಗೋವಿಂದು, ಬೆಂಗಳೂರು

ಜನರ ಜೀವ ಹಿಂಡುತ್ತಿದೆ ವಿಷಕಾರಿ ಹೊಗೆ

ಸಂವಿಧಾನದ 21ನೇ ಅನುಚ್ಛೇದದ ಬದುಕುವ ಹಕ್ಕಿನಡಿ ಆರೋಗ್ಯಕರ ಮತ್ತು ಮಾಲಿನ್ಯರಹಿತ ವಾತಾವರಣವು ಪ್ರತಿಯೊಬ್ಬ ಭಾರತೀಯನ ಮೂಲಭೂತ ಹಕ್ಕು. ರಾಜ್ಯ ನೀತಿ ನಿರ್ದೇಶಕ ತತ್ತ್ವದ ಅಡಿ ಸ್ವಚ್ಛ ವಾತಾವರಣ ಕಾಪಾಡುವುದು ರಾಜ್ಯದ ಕರ್ತವ್ಯ. ಅನುಚ್ಛೇದ 51ಎ(ಜಿ) ಅಡಿ ಪ್ರಕೃತಿ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಸಂವಿಧಾನದ ಆಶಯದಂತೆ ಮೂಲಭೂತ ಹಕ್ಕನ್ನು ಕಾಪಾಡಲು ಕೊಪ್ಪಳ ಜಿಲ್ಲೆಯಲ್ಲಿ ಬಲ್ಡೋಟಾ ಕಾರ್ಖಾನೆಯಿಂದ ಆಗುತ್ತಿರುವ ಪರಿಸರ ಮಾಲಿನ್ಯದ ವಿರುದ್ಧ ಜನತೆ ಹೋರಾಡುತ್ತಿದ್ದಾರೆ. ಆದರೆ, ಸರ್ಕಾರ ಪರಿಹಾರಾತ್ಮಕ ಕ್ರಮ ಕೈಗೊಳ್ಳುತ್ತಿಲ್ಲ. ಆಡಳಿತ ನಡೆಸುವವರು ಸಂವಿಧಾನ ಪಾಲಿಸದೆ ತೋರುವ ಅಸಡ್ಡೆ ಸರಿಯಲ್ಲ. ಪ್ರಜಾತಂತ್ರದಲ್ಲಿ ಪ್ರಜೆಗಳ ಆಶಯ ಮತ್ತು ಅವಶ್ಯಕತೆಗಿಂತ ಮಿಗಿಲಾದುದು ಏನಿದೆ?

ಮಾದಪ್ಪ ಎಸ್. ಕಠಾರಿ, ವಿಜಯಪುರ

ಉದ್ಯೋಗ 'ಗ್ಯಾರಂಟಿ' ಆಗಬೇಕಲ್ಲವೆ?

ಕಳೆದ ಮೂರು ವರ್ಷಗಳಲ್ಲಿ ಸುಮಾರು ನಲವತ್ತು ಸಾವಿರ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿರುವುದಾಗಿ ರಾಜ್ಯ ಸರ್ಕಾರ ನೀಡಿರುವ ಹೇಳಿಕೆ ಪ್ರಶ್ನಾರ್ಹ. ಅಧಿಕೃತ ದಾಖಲೆ ಪ್ರಕಾರ, 8,251 ಹುದ್ದೆಗಳಷ್ಟೆ ಭರ್ತಿಯಾಗಿವೆ. ಸುಳ್ಳು ಮಾಹಿತಿ ನೀಡಿ ದಾರಿ ತಪ್ಪಿಸುವುದು ಸರಿಯಲ್ಲ. ಇದು ಉದ್ಯೋಗ ಆಕಾಂಕ್ಷಿಗಳಲ್ಲಿ ಅಸಮಾಧಾನವನ್ನು ಹೆಚ್ಚಿಸಲಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವುದಷ್ಟೇ ಸರ್ಕಾರದ ಜವಾಬ್ದಾರಿಯಲ್ಲ. ಯುವಕರಿಗೆ ಉದ್ಯೋಗ ನೀಡುವುದೂ ಗ್ಯಾರಂಟಿಯಲ್ಲವೆ? ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಹೊಸ ನೇಮಕಾತಿಗೆ ಅಧಿಸೂಚನೆ ಪ್ರಕಟಿಸಲಿ.

ಮುತ್ತು ಕುಂಟೋಜಿ, ದೇವರಹಿಪ್ಪರಗಿ

ರಾಜ್ಯ ಸರ್ಕಾರದ ಹಳಿ ತಪ್ಪಿದ ಆರ್ಥಿಕ ಸ್ಥಿತಿ

'ಹಿಂದಿನ ಸರ್ಕಾರದಲ್ಲಿ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು; ತಮ್ಮ ಅವಧಿಯಲ್ಲಿ ಸರಿಪಡಿಸಿ ಗ್ಯಾರಂಟಿಗಳ ಜೊತೆಗೆ ಅಭಿವೃದ್ಧಿಪರ ಆಡಳಿತ ನೀಡುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸದನದಲ್ಲಿ ಹೇಳಿದ್ದರು. ಆದರೆ, ಈಗ ಸರ್ಕಾರಿ ನೌಕರರಿಗೆ ಸಂಬಳ ಕೊಡಲು ಒದ್ದಾಟ. ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿಸಿಲ್ಲ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ನೀಡದಿರುವುದರಿಂದ ಬೀದಿಗಿಳಿದಿದ್ದಾರೆ. ನೇಮಕಾತಿಗೆ ಮನಸ್ಸು ಮಾಡುತ್ತಿಲ್ಲ. ಈ ಎಲ್ಲಾ ಬೆಳವಣಿಗೆ ನೋಡಿದರೆ ರಾಜ್ಯದ ಆರ್ಥಿಕ ಸ್ಥಿತಿ ದಿವಾಳಿ ಅಂಚಿಗೆ ತಲಪಿದೆಯೇ ಎಂಬ ಗುಮಾನಿ ಕಾಡದಿರದು.

ಸುರೇಶ್ ಬಾಗಿಲ್ಮನೆ, ಕುರುಗೋಡು

ಎಂಜಿನ್ ಆಫ್ ಮಾಡಿ, ಪರಿಸರ ಸಂರಕ್ಷಿಸಿ

ರಸ್ತೆಯಲ್ಲಿ ಕೆಲವು ರೆಡ್ ಸಿಗ್ನಲ್‌ಗಳ ಬಳಿ ಕಾಯುವ ಸಮಯ 100 ಸೆಕೆಂಡಿಗಿಂತ ಹೆಚ್ಚಿರುತ್ತದೆ. ಈ ವೇಳೆ ವಾಹನದ ಎಂಜಿನ್ ಸ್ವಿಚ್‌ಆಫ್ ಮಾಡುವುದು ಎರಡು ರೀತಿಯಲ್ಲಿ ಫಲಕಾರಿ: ಮೊದಲನೆಯ ಲಾಭ ಇಂಧನ ಉಳಿತಾಯ. ವಾಹನದ ಎಂಜಿನ್ ಅನ್ನು ಮತ್ತೆ ಚಾಲನೆಗೊಳಿಸಲು ಸ್ವಲ್ಪ ಹೆಚ್ಚು ಇಂಧನ ಖರ್ಚು ಆದರೂ ಒಟ್ಟಾರೆ ಇಂಧನ ಉಳಿತಾಯ ಆಗುತ್ತದೆ. ಬೆಂಗಳೂರಿನಲ್ಲಿ ಕೋಟಿಗೂ ಹೆಚ್ಚು ವಾಹನಗಳಿವೆ. ಈ ಪೈಕಿ ದಿನವೊಂದರಲ್ಲಿ ಅರ್ಧದಷ್ಟು ವಾಹನಗಳು ರಸ್ತೆಗೆ ಇಳಿಯುತ್ತವೆ. ಪ್ರತಿ ವಾಹನವು 1 ಮಿ.ಲೀ ಇಂಧನ ಉಳಿತಾಯ ಮಾಡುತ್ತದೆಂದು ಅಂದಾಜಿಸಿದರೂ 5 ಸಾವಿರ ಲೀ. ನಷ್ಟು ಇಂಧನ ಉಳಿಯುತ್ತದೆ. ಎರಡನೆಯದಾಗಿ, ಎಂಜಿನ್ ಹೊಗೆ ಕಡಿಮೆ ಆಗಿ ಸುತ್ತಲಿನ ಪರಿಸರ ಮಾಲಿನ್ಯದಿಂದ ಮುಕ್ತವಾಗುತ್ತದೆ. ಇದರ ಲಾಭವನ್ನು ಹಣದಿಂದ ಅಳೆಯಲಾಗದು.

ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು

ಗಿರಿ–ಗುರಿ

ಶಾಸಕರ ಬಯಕೆ
ಮಂತ್ರಿಗಿರಿ!
ನಿರುದ್ಯೋಗಿಗಳ ಕೋರಿಕೆ
ಸರ್ಕಾರಿ ನೌಕರಿ!
ಸಿಎಂ ಒಪ್ಪುತ್ತಾರೆ
ಇಬ್ಬರದೂ ಸರಿ ಸರಿ!
ಆದರೆ, ಈಡೇರಿಸುವವರಾರು
ಡಿಸಿಎಂ ಅವರ ಗುರಿ!

ಮ.ಗು. ಬಸವಣ್ಣ, ಮೈಸೂರು

ವಿಷಯುಕ್ತ ಹಣ್ಣುಗಳ ಬಗ್ಗೆ ಇರಲಿ ಜಾಗೃತಿ

ಮಾರುಕಟ್ಟೆಯಲ್ಲಿ ವಿಷಕಾರಿ ಹಣ್ಣು, ತರಕಾರಿ ಮಾರಾಟ ಹೆಚ್ಚಾಗುತ್ತಿದೆ. ಇದರಿಂದ ನಾಗರಿಕರು ಗಾಬರಿಪಡುವಂತಾಗಿದೆ. ಈಗ ಬಿಸಿಲಿನ ಝಳ ಹೆಚ್ಚುತ್ತಿದ್ದು, ಕಲ್ಲಂಗಡಿ ಹಣ್ಣು ತಿನ್ನೋಣವೆಂದರೂ ಭಯ ಆವರಿಸಿದೆ. ದಿನನಿತ್ಯದ ಬಳಕೆಗೆ ತರಕಾರಿಗಳನ್ನು ಖರೀದಿಸಲು ಭಯಪಡುವಂತಾಗಿದೆ. ಸಾವಯವ ತರಕಾರಿಯಲ್ಲೂ ಸೀಸದ ಅಂಶ ಹೆಚ್ಚಾಗಿರುವ ಸುದ್ದಿಯು ಭೀತಿ ಹೆಚ್ಚಿಸಿರುವುದು ಸುಳ್ಳಲ್ಲ. ಇಷ್ಟಾದರೂ ಸರ್ಕಾರ ಸುಮ್ಮನಿದೆ. ನಿರ್ಲಕ್ಷ್ಯ ಮಾಡದೆ ತುರ್ತು ಕ್ರಮಕೈಗೊಳ್ಳಬೇಕಿದೆ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಚುರುಮುರಿ



ಬೆಂಗಳೂರಂ!

• ಬಿ.ಎನ್. ಮಲ್ಲೇಶ್

'ಲೇ ಗುಡ್ಡೆ, ಎರಡು ಪ್ರಶ್ನೆ... ಒಂದು, ನಾನೂ ಮಂತ್ರಿಗಿರಿ ಕೇಳಬೋದಾ? ಎರಡು, ಎಐನಿಂದ ನಮ್ ಮಂಜಮ್ಮನ ಚಾದಂಗಡಿಗೆ ಹೊಡ್ತ ಬೀಳುತ್ತಾ?' ಹರಟೆಕಟ್ಟೆಯಲ್ಲಿ ಕೊಟ್ರೇಶಿ ಕೇಳಿದ.

'ಮಂತ್ರಿಗಿರಿ ನೀನೂ ಕೇಳಬೋದು, ಕೊಡೋರು ಬೇಕಲ್ಲ... ಆದ್ರೆ ಒಂದ್ ಐಡಿಯಾ, ಏನಾದ್ರೂ ಮಾಡಿ ಒಂದು ನಿಗಮನೋ, ಬೋರ್ಡೋ ಹೊಡ್ಕೋ... ಅದಕ್ಕೆ ಸಚಿವರ ಸ್ಥಾನಮಾನ ಸಿಕ್ರೆ ನೀನೂ ಮಂತ್ರಿ ಆದಂಗೇ ಅಲ್ವಾ? ಟ್ರೈ ಮಾಡು...'

'ಕರೆಕ್ಟ್... ಆಮೇಲೆ ನಮ್ ಮಂಜಮ್ಮನ ಚಾದಂಗಡಿ ಕತೆ?'

'ಲೇಯ್, ನನ್ ಚಿಂತಿ ಬಿಡ್ರಿ, ನಾನು ಒಂದು ರೊಬೋಟ್ ತರ್ತಿದೀನಿ. ಅದಕ್ಕೆ ದುಡ್ಡು ಹಾಕಿದ್ರೆ ಅದೇ ಚಾ ಕೊಡುತ್ತೆ...' ಮಂಜಮ್ಮ ನಕ್ಕಳು.

'ಹೌದಾ? ಉದ್ರಿ ಕೇಳಿದ್ರೆ?'

'ಕಪಾಳಕ್ಕೆ ಹೊಡೆಯುತ್ತೆ...'

'ಥೋ ಬ್ಯಾಡಪ್ಪ, ಮಂಜಮ್ಮ ಇದ್ರೇನೇ ಚಾದಂಗಡಿ, ನಿನ್ ಕೈರುಚಿ ರೊಬೋಟ್‌ಗೆ ಬರಾಕೆ ಸಾಧ್ಯನಾ? ರೊಬೋಟ್ ಜತಿ ಈ ತರ ಹರಟೆ ಹೊಡೆಯೋಕೆ ಸಾಧ್ಯನಾ?' ತೆಪರೇಸಿ ತಲೆ ಒಗೆದ.

'ಅಲ್ಲ, ಎಐನಿಂದ ವೈಟ್ ಕಾಲರ್ ಕೆಲ್ಸ ಎಲ್ಲ ಹೋಗ್ತಾವಂತೆ? ಇನ್ಮುಂದೆ ಎಲ್ಲ ಕೆಲ್ಸನ ರೊಬೋಟೇ ಮಾಡ್ತಾವಂತೆ?' ದುಬ್ಬೀರನಿಗೆ ಆತಂಕ.

'ವೈಟ್ ಕಾಲರ್ ಹೋದ್ರೆ ಬೇರೆ ಕೆಲ್ಸ ಮಾಡಿದ್ರಾತು, ರಾಜಸ್ಥಾನದಲ್ಲಿ ದನ ಕಾಯೋರಿಗೆ ಹತ್ತು ಸಾವಿರ ಸಂಬಳ ಕೊಡ್ತಾರಂತೆ. ಈ ಕೆಲ್ಸನ ರೊಬೋಟ್ ಮಾಡಾಕಾಗುತ್ತಾ?' ತೆಪರೇಸಿ ಧೈರ್ಯ ಹೇಳಿದ.

'ಈಗ ಎಐ ವಿಷ್ಯ ಬಿಡ್ರಪ್ಪ, ಕೇರಳನ 'ಕೇರಳಂ' ಅಂತ ಮಾಡಿದಾರಂತೆ, ನಾವ್ಯಾಕೆ ಬೆಂಗಳೂರನ್ನ 'ಬೆಂಗಳೂರಂ' ಅಂತ ಮಾಡ್ಕಾಬಾರ್ದು?' ಕೊಟ್ರೇಶಿ ತನ್ನದೂ ಒಂದಿರಲಿ ಎಂದು ಸಲಹೆ ಒಗೆದ.

'ವಾವ್! ಬೆಂಗಳೂರಂ! ಈ 'ರಂ' ಅಂತ ಕೇಳೋಕೇ ಒಂಥರಾ ಮಜ...' ಎಂದ ಗುಡ್ಡೆ.

'ಥು ನಿನ್ ಮಕ್ಕೆ' ಎಂದಳು ಮಂಜಮ್ಮ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಗುರುವಿನ ಗರಡಿಮನೆಯಲ್ಲಿ ವಿಜ್ಞಾನದ ಬೆಳಕು

ವಿದ್ಯಾರ್ಥಿಗಳಲ್ಲಿ ವೈಚಾರಿಕತೆ ಬೆಳೆಸುವುದು ಶಿಕ್ಷಕರ ಹೊಣೆಗಾರಿಕೆ. ಸಮರ್ಥ ಗುರುವಿನ ಗರಡಿಯಲ್ಲಿ ಮಕ್ಕಳು ವೈಜ್ಞಾನಿಕ ಮನೋಭಾವ ರೂಢಿಸಿಕೊಳ್ಳುವಂತೆ ಆಗಬೇಕು.

• ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ


ಸರಿಯಾಗಿ ಬೆಳಗಿನ 9.45ಕ್ಕೆ ಶಾಲೆಯ ಗಂಟೆ ಢಣ ಢಣ ಢಣವೆಂದು ಢಂಕಾನಾದಗೈದು ಮೂಕವಾಯಿತು. ಅಂಗಳದ ತುಂಬಾ ಚೆದುರಿಬಿದ್ದಿದ್ದ ಮಲ್ಲಿಗೆಯ ಹೂವುಗಳಂತೆ ಎಲ್ಲೆಡೆ ಹರಡಿದ್ದ ಮಕ್ಕಳು ಪ್ರಾರ್ಥನಾ ಸ್ಥಳಕ್ಕೆ ದೌಡಾಯಿಸಿ ಲಗುಬಗೆಯಿಂದ ನಾಡಗೀತೆ ಹಾಡಿಮುಗಿಸಿ ಹಾಲು ಕುಡಿಯಲು ಅನುವಾದರು. ಆಗ ಐದನೇ ತರಗತಿಯ ಮಕ್ಕಳು ಗುಂಪು ಕಟ್ಟಿಕೊಂಡು ಶಿಕ್ಷಕರ ಬಳಿಬಂದರು. ಅವರಲ್ಲಿ ಓರ್ವ ಪುಟಾಣಿ 'ಮಿಸ್ ಮಿಸ್ ಈಕೀ ನಿಂಬೆಣ್ ದಾಟಿ ಬುಟಾಳ್ ಮಿಸ್. ನಿಂಬೆಣ್ ದಾಟಿದ್ರ ಕಾಲಾಗೆಲ್ಲಾ ಗುಳ್ಳ್ಯಾಗಿ ನೌವಕಾವ್ ಮಿಸ್' ಎಂದು ಒಂದೇ ಉಸುರಿಗೆ ಉಲಿಯಿತು.

ಹಾವು ತುಳಿದಂತೆ ಹೆದರಿ ಗುಬ್ಬಿಯಾಗಿದ್ದ ಆ ಮಗು ತನಗೇನೋ ಕೇಡು ಕಾದಿದೆಯೆಂಬ ಆತಂಕದಲ್ಲಿತ್ತು. ಮೂರು ದಾರಿಗಳು ಸೇರುವ ಕಡೆಗಳಲ್ಲಿ ಅಮಾವಾಸ್ಯೆ ಮತ್ತು ಹುಣ್ಣಿಮೆ ಸಂದರ್ಭದಲ್ಲಿ ನಿಂಬೆಹಣ್ಣು, ವೀಳ್ಯದೆಲೆ, ಅಡಿಕೆ ಹಾಗೂ ಒಂದು ರೂಪಾಯಿ ನಾಣ್ಯ ಇಟ್ಟುಹೋಗಿರುವುದನ್ನು ಗ್ರಾಮೀಣ ಭಾರತದಲ್ಲಿ ನೋಡದವರಿಲ್ಲ. ಅಂಥ ನಿಂಬೆಹಣ್ಣುಗಳನ್ನು ದಾಟುವುದು ಅಪಾಯಕರ ಎನ್ನುವುದು ಗ್ರಾಮೀಣರ ನಂಬಿಕೆ. ರಸ್ತೆಯಲ್ಲಿ ಚೆಲ್ಲಿದ ನಿಂಬೆಹಣ್ಣು, ಉಪ್ಪು, ಒಣ ಮೆಣಸಿನಕಾಯಿಗಳನ್ನು ತುಳಿಯದಂತೆ ಹಾಗೂ ದಾಟದಂತೆ ಪೋಷಕರು ಮಕ್ಕಳಿಗೆ ಹೇಳುವುದಿದೆ. ರಸ್ತೆಯಲ್ಲಿನ ಈ ವಸ್ತುಗಳು ಮಕ್ಕಳ ಕಣ್ಣಿಗೆ ಭಯೋತ್ಪಾದಕರಂತೆ ಕಾಣಿಸುವುದಿದೆ. ಹೀಗೆ ರಸ್ತೆಯಲ್ಲಿ ಚೆಲ್ಲಿದ್ದ ನಿಂಬೆಹಣ್ಣನ್ನು ದಾಟಿದ ಆತಂಕ ಮಗುವಿನದಾಗಿತ್ತು.

ಮೌಢ್ಯಗಳು ಬಲವಾಗಿ ಬೇರೂರಿರುವ ದೇಶದ ಅಸಂಖ್ಯ ಹಳ್ಳಿಗಳಲ್ಲಿ ಶಾಲೆಗಳು ಮಾತ್ರ ವೈಚಾರಿಕತೆ ಹಾಗೂ ವೈಜ್ಞಾನಿಕತೆಯನ್ನು ಬಿತ್ತಲು ಸಾಧ್ಯ. ಆದರೆ ಇಲ್ಲೊಂದು ಸಮಸ್ಯೆಯಿದೆ. ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಾದ ಶಿಕ್ಷಕರು, ಅದರಲ್ಲೂ ವಿಶೇಷವಾಗಿ ವಿಜ್ಞಾನ ವಿಷಯ ಬೋಧಿಸುವ ಶಿಕ್ಷಕರು ಎಷ್ಟರಮಟ್ಟಿಗೆ ವೈಚಾರಿಕತೆ ಅಳವಡಿಸಿಕೊಂಡಿದ್ದಾರೆ? ಅವರ ಬದುಕಿನಲ್ಲಿ ವೈಜ್ಞಾನಿಕ ಮನೋಭಾವ ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿದೆ?

ತರಗತಿಯಲ್ಲಿ ಬರೀ ಪಾಠಬೋಧನೆಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಅನೇಕ ಶಿಕ್ಷಕರು 'ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಲ್ಲಿ ಅಪಘಾತಗಳು ಹೆಚ್ಚು' ಎಂಬಂಥ ಸಂಗತಿಯನ್ನು ಯಾವುದೇ ಪೂರ್ವಾಪರ ಅಧ್ಯಯನವಿಲ್ಲದೆ ಥಾಳಾಗಿ ನಂಬುತ್ತಾರೆ. ತಮ್ಮ ಪೂರ್ವಗ್ರಹವನ್ನು ಮಕ್ಕಳ ಸಮ್ಮುಖದಲ್ಲಿ ಸಾರುತ್ತಾರೆ. ಇಂಥ ನಡವಳಿಕೆ ವಿಜ್ಞಾನಕ್ಕೆ ಹಾಗೂ ವೈಚಾರಿಕತೆಗೆ ಮಾಡುವ ಅಪಚಾರವಲ್ಲದೇ ಮತ್ತೇನಲ್ಲ.

'ಮೂಢನಂಬಿಕೆ ಹೊಂದಿರುವ ಒಬ್ಬ ಅವಿದ್ಯಾವಂತ ವ್ಯಕ್ತಿಗಿಂತಲೂ ಮೂಢನಂಬಿಕೆ ಹೊಂದಿರುವ ಒಬ್ಬ ವಿದ್ಯಾವಂತ ವ್ಯಕ್ತಿ ಹೆಚ್ಚು ಅಪಾಯಕಾರಿ' ಎಂಬ ಮಾತು ಈ ಸಂದರ್ಭಕ್ಕೆ ಅತ್ಯಂತ ಸೂಕ್ತವಾಗಿದೆ. ಯಾವುದೇ ವ್ಯಕ್ತಿ ತಾನು ಮೌಢ್ಯಕ್ಕೆ ಬಲಿಯಾಗುವುದಕ್ಕೂ ಮುಂಚೆ ಒಬ್ಬ ಸಾಮಾನ್ಯ ಪ್ರಜೆ ಆಗಿರುತ್ತಾನೆ. ಆತ ಬೆಳೆದ ಮನೆಯ ವಾತಾವರಣದಲ್ಲೋ ಅಥವಾ ಬೆಳೆದು ಬಂದ ಪರಿಸರದಲ್ಲೋ ಬೆಸೆದುಕೊಂಡಿದ್ದ ಮೂಢನಂಬಿಕೆಗಳು ಆತನ ಸುಪ್ತ ಮನಸ್ಸಿನ ಮೇಲೆ ಪ್ರಭಾವ ಬೀರಿರುತ್ತವೆ. ಇಂತಹ ವ್ಯಕ್ತಿ ಮೂಢನಂಬಿಕೆಗಳಿಗೆ ಬಲಿಯಾಗುವುದರಿಂದ ಆಗುವ ಅಪಾಯಕ್ಕಿಂತ ಅದೇ ವ್ಯಕ್ತಿ ಶಿಕ್ಷಣ ಪಡೆದ ಮೇಲೂ ಮೂಢನಂಬಿಕೆಗಳಿಗೆ ಬಲಿಯಾದರೆ ಉಂಟಾಗುವ ಅಪಾಯಗಳು ಅನೂಹ್ಯವಾಗಿರುತ್ತವೆ.



ಶಿಕ್ಷಣ ಪಡೆದ ವ್ಯಕ್ತಿ ಶಿಕ್ಷಕನಾಗಿ ಬದಲಾದಮೇಲೂ ಮೌಢ್ಯಗಳನ್ನು ಹೊತ್ತು ಮೆರೆಯುವಂತಾದರೆ ಅದು ಘೋರ ದುರಂತವೇ ಸರಿ. ಶಿಕ್ಷಕರಾದವರು ಮೊದಲು ಅಧ್ಯಯನಶೀಲರಾಗಬೇಕು, ತಮ್ಮೊಳಗಿನ ಅಂಧಕಾರವನ್ನು ಅಳೆಯಬೇಕು ಹಾಗೂ ನಿಧಾನವಾಗಿ ಅವುಗಳನ್ನು ಮನದ ಪುಟದಿಂದ ಅಳಿಸಬೇಕು ಮತ್ತು ಇದಕ್ಕಾಗಿ ಸಾಕಷ್ಟು ಅಧ್ಯಯನ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ವ್ಯಕ್ತಿತ್ವವನ್ನು ಹುರಿಗೊಳಿಸಿಕೊಳ್ಳಬೇಕು; ತಾವು ಗಳಿಸಿದ ಅರಿವನ್ನು ಮಕ್ಕಳಲ್ಲಿ ಬಿತ್ತಬೇಕು. ಬೆಳೆಯುತ್ತಿರುವ ಮಕ್ಕಳ ಹೆಜ್ಜೆ ಹೆಜ್ಜೆಯಲ್ಲೂ ಕಾಣುವ ಮೂಢನಂಬಿಕೆಗಳ ಅಳಿಸುವಲ್ಲಿ ಅವಿರತವಾಗಿ ಶ್ರಮಿಸಬೇಕು. ಇಲ್ಲವಾದರೆ ಪೀಳಿಗೆಯಿಂದ ಪೀಳಿಗೆಗೆ ಸಾಗುವ ಪಿಡುಗಾಗಿ ಮೂಢನಂಬಿಕೆಗಳು ಕಾಲಕಾಲಕ್ಕೆ ಹೊಸ ಹೊಸ ರೂಪ ಪಡೆದು ಗಟ್ಟಿ ಆಗುವ ವೈರಸ್‌ಗಳಂತಾಗುತ್ತವೆ. ಮಕ್ಕಳ ಮೂಲಕ ಕುಟುಂಬ ಹಾಗೂ ಸಮಾಜವನ್ನು ತಲಪುವ ಅವಕಾಶ ಇರುವುದರಿಂದ ಎಳೆಯರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿರುತ್ತದೆ.

ಮಕ್ಕಳಲ್ಲಿ ವೈಚಾರಿಕತೆ ಮೂಡಿಸುವುದು ಶಿಕ್ಷಕರ ಹೊಣೆಗಾರಿಕೆ ಎನ್ನುವುದರಲ್ಲಿ ಅನುಮಾನವೇನೂ ಇಲ್ಲ. ಆದರೆ, ಮೌಢ್ಯ ನಿವಾರಣೆ ಎನ್ನುವುದು ಶಿಕ್ಷಕರ ಜವಾಬ್ದಾರಿ ಮಾತ್ರವಲ್ಲ; ಅವರೊಂದಿಗೆ ಪೋಷಕರು, ಜನಸಾಮಾನ್ಯರು ಹಾಗೂ ವ್ಯವಸ್ಥೆ ಕೂಡ ಪ್ರಧಾನ ಪಾತ್ರವಹಿಸುತ್ತದೆ.

ಮೌಢ್ಯ ಮತ್ತು ಕಂದಾಚಾರಗಳನ್ನು ನಿವಾರಿಸಲು ಸರ್ಕಾರಗಳು ಶಾಲಾ ಕಾಲೇಜುಗಳಲ್ಲಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಬೇಕು. ಜನಸಾಮಾನ್ಯರಿಗಾಗಿ ಬೀದಿನಾಟಕ, ಉಚಿತ ಕಾರ್ಯಾಗಾರ, ಕಾನೂನು ತಿಳಿವಳಿಕೆ ಹಾಗೂ ಮೌಢ್ಯ ವಿರೋಧಿ ಸಹಾಯವಾಣಿ ತರಬೇಕು. ಶಾಲಾ–ಕಾಲೇಜುಗಳಲ್ಲಿ ಕಾಲಕಾಲಕ್ಕೆ ಶಿಕ್ಷಕರಿಗೆ ತರಬೇತಿ, ಸೌಲಭ್ಯ ಹಾಗೂ ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ಮೌಢ್ಯ-ಮೂಢನಂಬಿಕೆಗಳು ಸಮುದಾಯದಿಂದ ದೂರವಾಗುವ ಪ್ರಕ್ರಿಯೆಗೆ ವೇಗ ದೊರೆಯುತ್ತದೆ.

ದೇಶದ ಅಭಿವೃದ್ಧಿಗೆ ತೊಡಕಾಗಿರುವ ಮೂಢನಂಬಿಕೆಗಳನ್ನು ತೊಡೆದುಹಾಕಲು ಪ್ರತಿಯೊಬ್ಬರೂ ಕೈಜೋಡಿಸಬೇಕು. ಇದು ಸಾಧ್ಯವಾದಲ್ಲಿ ಶಿಕ್ಷಣದ ಪ್ರಮುಖ ಉದ್ದೇಶವಾದ ಅರಿವು ಸಿದ್ಧಿಸಿದಂತಾಗುತ್ತದೆ. ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ ಸಿದ್ಧಪಡಿಸುವುದಷ್ಟೇ ಶಿಕ್ಷಕರ ಕರ್ತವ್ಯವಾಗಿರದೆ, ಮಕ್ಕಳ ವ್ಯಕ್ತಿತ್ವ ನಿರ್ಮಾಣವೂ ಅವರ ಹೊಣೆಯಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೆಕ್ಸಿಕೊದಲ್ಲಿ ಮಾದಕ ವಸ್ತು ಕಳ್ಳಸಾಗಣೆಯ ಕೂಟವೊಂದರ ಮುಖ್ಯಸ್ಥನನ್ನು ಸೇನೆ ಹೊಡೆದುರುಳಿಸಿದ ಬೆನ್ನಲ್ಲೆ ವ್ಯಾಪಕ ಹಿಂಸಾಚಾರ ಹುಟ್ಟಿಕೊಂಡಿದೆ. ಗುಂಪಿನ ಮುಖ್ಯಸ್ಥನನ್ನು ಕೊಂದರೆ, ಜಾಲದ ಅಂತ್ಯವಲ್ಲ, ಹೊಸ ಜಾಲವೊಂದರ ಹುಟ್ಟಿನ ಆರಂಭ ಎನ್ನುವುದು ಅಲ್ಲಿ ಹೊಸ ವಿಚಾರವೇನಲ್ಲ. ಹಲವು ಹಂತಗಳ, ಹಲವು ಗುಂಪುಗಳ, ಹಲವು ಪ್ರದೇಶಗಳನ್ನು ಆಧರಿಸಿದ, ಅಂತರರಾಷ್ಟ್ರೀಯ ಮಟ್ಟದಲ್ಲಿ ನೆಲೆ ಕಂಡುಕೊಂಡಿರುವ ಡ್ರಗ್ಸ್ ಕಳ್ಳಸಾಗಣೆಯ ಕೂಟಗಳ ಹಿಂದೆ ಅಲ್ಲಿನ ರಾಜಕಾರಣಿಗಳ, ಅಧಿಕಾರಿಗಳ, ಉದ್ಯಮಿಗಳ ಪಾಲೂ ಇದೆ ಎನ್ನಲಾಗುತ್ತಿದೆ

ಪಾತಕಿ ಹತ್ಯೆ ನಂತರ ದೇಶದ ಹಲವೆಡೆ ಹಿಂಸಾಚಾರ; ಮಾದಕ ವಸ್ತು ಕಳ್ಳಸಾಗಣೆ ಕೂಟದ ಹಿಂದಿದೆ ವ್ಯವಸ್ಥಿತ ಜಾಲ

ಡ್ರಗ್ಸ್ ಹುತ್ತವ ಒಡೆದು ಹುಯಿಲೆಬ್ಬಿಸಿದ ಮೆಕ್ಸಿಕೊ




ಮೆಕ್ಸಿಕೊದ ಜಾಲಿಸ್ಕೊ ರಾಜ್ಯದ ಝಪೊಪಾನ್ ಪ್ರದೇಶದಲ್ಲಿ ನಡೆದ ಹಿಂಸಾಚಾರದಲ್ಲಿ ಬಸ್‌ಗೆ ಬೆಂಕಿ ಹಚ್ಚಲಾಗಿತ್ತು ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಉತ್ತರ ಅಮೆರಿಕ ಖಂಡಕ್ಕೆ ಸೇರಿದ ಮೆಕ್ಸಿಕೊ ದೇಶದ ಹಲವು ಭಾಗಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಭಯದ ವಾತಾವರಣ ಸೃಷ್ಟಿಯಾಗಿದ್ದು, ಯಾವ ಕ್ಷಣ ಏನಾಗುವುದೋ ಎನ್ನುವ ಆತಂಕ ಇದೆ. ವಿಚಿತ್ರ ಏನೆಂದರೆ, ಇಂಥ ಹಿಂಸಾಚಾರಕ್ಕೆ ಕಾರಣ, ಡ್ರಗ್ ಮಾಫಿಯಾದ ನೇತೃತ್ವ ಹೊತ್ತಿದ್ದ ಕುಖ್ಯಾತನನ್ನು ಸೇನೆ ಹತ್ಯೆ ಮಾಡಿರುವುದು. ಸೈನಿಕರ ಗುಂಡಿಗೆ ಬಲಿಯಾದವನ ಹೆಸರು ಎಲ್ ಮೆಂಚೊ.

ಎಲ್ ಮೆಂಚೊಗೆ ಇನ್ನೊಂದು ಹೆಸರಿದೆ: ನೆಮೆಸಿಯೊ ಒಸೆಗುರಾ ಸೆರ್ವಾಂಟೆಸ್. ಇವನು ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್ (ಸಿಜೆಎನ್‌ಜಿ) ಎನ್ನುವ ಮಾದಕ ವಸ್ತು ಸಾಗಣೆ ಜಾಲದ ಅಧಿಪತಿಯಾಗಿದ್ದ. ಅಮೆರಿಕಕ್ಕೆ ಫೆಂಟಾನಿಲ್, ಮೆಥಾಂಫೆಟಮೈನ್ ಮತ್ತು ಕೊಕೇನ್ ಮುಂತಾದ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡುವುದು ಈ ಕೂಟದ ಮುಖ್ಯ ದಂಧೆ. ಮಾನವ ಕಳ್ಳಸಾಗಣೆ ಅದರ ಇನ್ನೊಂದು ದಂಧೆ.


ಎಲ್ ಮೆಂಚೊ

ಜಗತ್ತಿನ ಪ್ರತಿ ಭಾಗಕ್ಕೂ ಇದು ವಿಸ್ತರಣೆಗೊಂಡಿದೆ. ಆಹಾರ ಪದಾರ್ಥಗಳಲ್ಲಿ ಬಳಸಲಾಗುವ ಅವಕಾಡೊಗಳನ್ನು (ಬೆಣ್ಣೆ ಹಣ್ಣು) ಬೆಳೆಯುವುದರಿಂದ ಹಿಡಿದು ಅಮೆರಿಕಕ್ಕೆ ವಲಸಿಗರನ್ನು ಕಳ್ಳ ಮಾರ್ಗಗಳಲ್ಲಿ ಕಳುಹಿಸುವವರೆಗೆ ಇದು ಹಲವು ರೀತಿಯ ಅಕ್ರಮಗಳಲ್ಲಿ ತೊಡಗಿದೆ. ಆದರೆ, ಇದರ ಮುಖ್ಯ ದಂಧೆ, ಅಮೆರಿಕಕ್ಕೆ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡುವುದು.

ಜಗತ್ತಿನ ಅತಿ ದೊಡ್ಡ ಮಾದಕ ವಸ್ತು ಜಾಲದ ಮುಖ್ಯಸ್ಥನಾಗಿ, ಕಿರೀಟವಿಲ್ಲದ ದೊರೆಯಂತೆ ಮೆರೆಯುತ್ತಿದ್ದ ಎಲ್ ಮೆಂಚೊ ಮೇಲೆ ಭಾನುವಾರ ಮೆಕ್ಸಿಕೊ ಸೇನೆ ಮುಗಿಬಿದ್ದಿತ್ತು. ಸೇನೆಯ ಕೈಯಲ್ಲಿ ಎಲ್ ಮೆಂಚೊ ಹತನಾಗಿದ್ದ. ಅಲ್ಲಿಗೆ ಸಿಜೆಎನ್‌ಜಿ ಕಥೆ ಮುಗಿಯಿತು ಎಂದೇ ಹಲವರು ಭಾವಿಸಿದ್ದರು. ಆದರೆ, ನಂತರದ ಬೆಳವಣಿಗೆಗಳು, ಇದು ಅಂತ್ಯ ಅಲ್ಲ, ಹೊಸ ಕಥೆಯೊಂದರ ಆರಂಭ ಎನ್ನುವುದನ್ನು ತೋರಿಸುತ್ತಿವೆ.

ಮಾದಕ ವಸ್ತುಗಳ ವಿರುದ್ಧದ ಆರು ದಶಕಗಳ ಸುದೀರ್ಘ ಹೋರಾಟದಲ್ಲಿ ಮೆಕ್ಸಿಕೊ ಇಂಥ ಹಲವು ಪಾತಕಿಗಳನ್ನು ಹೊಡೆದುರುಳಿಸಿದೆ.

ಪಾತಕಿ ಹತ್ಯೆಯಾದರೆ ಹಿಂಸಾಚಾರ ಏಕೆ ಭುಗಿಲೇಳುತ್ತದೆ?

ಅದಕ್ಕೆ ಕಾರಣಗಳಿವೆ. ಮೆಕ್ಸಿಕೊದಲ್ಲಿ ಹಲವು ಮಾದಕ ವಸ್ತುಗಳ ಕೂಟಗಳಿವೆ. ಅವುಗಳ ಮುಖ್ಯಸ್ಥರು ಹತ್ಯೆಯಾದರೆ ಅಥವಾ ಸತ್ತರೆ, ಅವನ ಸ್ಥಾನಕ್ಕೆ ಬರಲು ಆ ಕೂಟದೊಳಗೇ ಮುಖಂಡರ ನಡುವೆ ಪೈಪೋಟಿ, ಸಂಘರ್ಷ, ಹೊಡೆದಾಟ ಆರಂಭವಾಗುತ್ತದೆ. ಅದು ಕೂಟದ ಸದಸ್ಯರಿಗೂ ವಿಸ್ತರಣೆಗೊಂಡು, ಹಿಂಸಾಚಾರಕ್ಕೆ ಕಾರಣವಾಗುತ್ತಿದೆ. ಹಲವು ಕೂಟಗಳು ಹೀಗೆ ಒಡೆದು ಚೂರಾಗಿರುವುದೂ ಉಂಟು.

ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್ ಹಿಂದೊಮ್ಮೆ ಮಿಲೆನಿಯೊ ಕಾರ್ಟೆಲ್‌ನ ಭಾಗವಾಗಿತ್ತು. ಅದು 2009ರಲ್ಲಿ ಕೂಟದಿಂದ ಸಿಡಿದು ಪ್ರತ್ಯೇಕ ಕೂಟವಾಗಿತ್ತು. ವಿಶೇಷ ಎಂದರೆ, ಮಿಲೆನಿಯೊ ಕಾರ್ಟೆಲ್ ಸಿನಲೋವಾ ಎಂಬ ಕೂಟದಿಂದ ಸಿಡಿದು ಪ್ರತ್ಯೇಕ ಗುಂಪಾಗಿತ್ತು. ಪ್ರತ್ಯೇಕಗೊಂಡ ಕೂಟಗಳಿಗೆ ಹೊಸ ಮುಖ್ಯಸ್ಥನ ನೇಮಕವಾಗುತ್ತಿತ್ತು. ಸೇನಾ ಕಾರ್ಯಾಚರಣೆಯಿಂದ ಕೂಟದ ಮುಖ್ಯಸ್ಥ ಹತ್ಯೆಯಾದರೆ, ಆ ಸ್ಥಾನಕ್ಕೆ ಮತ್ತೊಬ್ಬ ಏರುತ್ತಿದ್ದ. ಆದರೆ, ಆ ಪ್ರಕ್ರಿಯೆಯು ಸುಲಭವಾಗಿ ನಡೆಯುತ್ತಿರಲಿಲ್ಲ. ಅದು ಕೇವಲ ಆ ಕೂಟದ ಮೇಲಷ್ಟೇ ಅಲ್ಲದೇ ಇಡೀ ಪ್ರದೇಶದ ಜನಜೀವನದ ಮೇಲೆ ಪರಿಣಾಮ ಬೀರುತ್ತದೆ. ಅದಕ್ಕೆ ಸಿನಲೋವಾ ಕೂಟದ ಮೇಲೆ ಸೇನೆ ದಾಳಿ ಮಾಡಿದ ನಂತರ ಆ ಪ್ರದೇಶದಲ್ಲಿ ಹುಟ್ಟಿಕೊಂಡು, ಈಗಲೂ ಮುಂದುವರಿಯುತ್ತಿರುವ ಉದ್ವಿಗ್ನ ಪರಿಸ್ಥಿತಿಯೇ ಕಾರಣ.

ಸಿನಲೋವಾ ಕೂಡ ಸಿಜೆಎನ್‌ಜಿಯಂತೆಯೇ ಮೆಕ್ಸಿಕೊದ ಅತ್ಯಂತ ಕುಖ್ಯಾತ ಕಳ್ಳಸಾಗಣೆ ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸುವವರ ಕೂಟ. ಮಾನವ ಕಳ್ಳಸಾಗಣೆ, ವಲಸೆಗಾರರ ಅಪಹರಣ, ಇಂಧನ ಕಳ್ಳತನ, ಕಳ್ಳನಾಟ ಸಂಗ್ರಹ, ಮಾದಕ ವಸ್ತುಗಳ ಉತ್ಪಾದನೆ ಮತ್ತು ಹಿಂಸಾಚಾರದ ಮೂಲಕ ಅಧಿಕಾರ ಸ್ಥಾಪನೆಗೆ ಈ ಕೂಟವು ಕುಖ್ಯಾತಿ ಪಡೆದಿತ್ತು.

ಅಮೆರಿಕದ ಒತ್ತಡ ಹೆಚ್ಚಾಗಿದ್ದರಿಂದ ಮೆಕ್ಸಿಕೊ 2024ರಿಂದ ಮಾದಕ ವಸ್ತು ಕೂಟಗಳ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿತು. 2024ರಲ್ಲಿ ಸೇನೆಯು ಈ ಕೂಟದ ಮೇಲೆ ದಾಳಿ ಮಾಡಿತು. ಅದರ ಮುಖ್ಯಸ್ಥ ಎಲ್ ಚಾಪೊ ಈಗ ಅಮೆರಿಕದ ಭಾರಿ ಭದ್ರತೆಯ ಜೈಲಿನಲ್ಲಿ ಜೀವಾವಧಿ ಕೈದಿಯಾಗಿದ್ದಾನೆ. ಅದರ ನಂತರ ಕೂಟವು ಎರಡು ಗುಂಪುಗಳಾಗಿ ಒಡೆದಿದ್ದು, ಅವನ ಮಕ್ಕಳು ಮತ್ತು ಆಪ್ತರ ನಡುವೆಯೇ ಕೂಟದ ಮುಖ್ಯಸ್ಥ ಸ್ಥಾನಕ್ಕಾಗಿ ಪೈಪೋಟಿ ನಡೆಯುತ್ತಿದೆ. ಅದರಿಂದಾಗಿ ಮೆಕ್ಸಿಕೊದ ವಾಯವ್ಯ ಪ್ರದೇಶದ ಪರಿಸ್ಥಿತಿ ಈಗಲೂ ಬೂದಿ ಮುಚ್ಚಿದ ಕೆಂಡದಂತಿದೆ. ಕೂಟದೊಳಗಿನ ವಿರೋಧಿಗಳ ತಲೆ ಕತ್ತರಿಸಿ ಸಾರ್ವಜನಿಕವಾಗಿ ನೇತು ಹಾಕುವುದು, ಹಿಂಸಾಚಾರ ಸೃಷ್ಟಿಸುವುದು ಅವುಗಳ ಕಾರ್ಯತಂತ್ರವಾಗಿ ಮಾರ್ಪಟ್ಟಿದೆ.

ಪಾತಕ ಕೂಟಗಳಿಗೂ ಜನರಿಗೂ ಏನು ಸಂಬಂಧ?

ಸಂಬಂಧ ಇರುವುದು ಕೂಟಗಳ ಜಾಣ ಆಡಳಿತ ವ್ಯವಸ್ಥೆಯಲ್ಲಿ. ಮಾಫಿಯಾ ಕೂಟಗಳು ಇತ್ತೀಚಿನ ದಶಕಗಳಲ್ಲಿ ತಮ್ಮ ಆಡಳಿತ ವ್ಯವಸ್ಥೆಯನ್ನು ಬದಲಾಯಿಸಿವೆ. ಕೂಟದ ವಿವಿಧ ಹಂತಗಳ ಕೆಲಸವನ್ನು ಫ್ರಾಂಚೈಸಿಯಂತೆ ನಡೆಸುತ್ತಿವೆ.

ತಳಮಟ್ಟದಿಂದ ಮುಖ್ಯಸ್ಥನವರೆಗೆ ವಿವಿಧ ಹಂತಗಳ, ವಿವಿಧ ಗುಂಪುಗಳ, ವಿವಿಧ ಪ್ರದೇಶಗಳನ್ನು ಆಧರಿಸಿದ ಕಾರ್ಯನಿರ್ವಹಣೆಯ ಜಾಲಗಳನ್ನು ರೂಪಿಸಿಕೊಂಡಿವೆ. ಬೆನ್ನೆಲುಬಾಗಿ ಏಷ್ಯಾ, ಯುರೋಪ್ ರಾಷ್ಟ್ರಗಳವರೆಗೆ ಹರಡಿದ ಅವುಗಳ ಆರ್ಥಿಕ ಜಾಲವೂ ಇದೆ. ಕಂಪನಿಯೊಂದರಂತೆಯೇ ಕೂಟಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತವೆ. ಅವುಗಳದ್ದೇ ಖಾಸಗಿ ಸೈನ್ಯವನ್ನೂ ಹೊಂದಿವೆ.

ಇಂಥ ಕೂಟಗಳನ್ನು ನಿಷ್ಕ್ರಿಯಗೊಳಿಸುವುದು ತಾಳ್ಮೆ ಬೇಡುವ, ದೀರ್ಘಕಾಲದ ಚಟುವಟಿಕೆ ಆಗಿದೆ. ಅತ್ಯುತ್ತಮವಾದ ತನಿಖೆ, ಗುಪ್ತಚರ ವ್ಯವಸ್ಥೆ, ವಿವಿಧ ಹಂತಗಳ ಮತ್ತು ಸ್ಥಳೀಯ ಜನರನ್ನು ಒಳಗೊಂಡ ಕಾರ್ಯಾಚರಣೆಯಿಂದ ಅದು ಸಾಧ್ಯ ಎನ್ನುವ ವಿಶ್ಲೇಷಣೆ ನಡೆಯುತ್ತಿದೆ.

ಆಧಾರ: ರಾಯಿಟರ್ಸ್, ದಿ ನ್ಯೂಯಾರ್ಕ್ ಟೈಮ್ಸ್, ಬಿಬಿಸಿ, ಎಪಿ, ಅಮೆರಿಕದ ವಿದೇಶಾಂಗ ಇಲಾಖೆ

ರಾಜಕೀಯದ ಪಾತ್ರ ಏನು?

ನಿಜವಾದ ಸಮಸ್ಯೆ ಇರುವುದೇ ಇಲ್ಲಿ. ಭಯ ಹುಟ್ಟಿಸುವ ಕಾರ್ಯಶೈಲಿಯನ್ನು ಅಳವಡಿಸಿಕೊಂಡಿರುವ, ಅವುಗಳಿಂದಲೇ ಕುಖ್ಯಾತಿ ಪಡೆದಿರುವ ಕೂಟಗಳು, ವಿವಿಧ ತಂತ್ರಗಳ ಮೂಲಕ ಉದ್ಯಮಿಗಳು, ರಾಜಕಾರಣಿಗಳು, ಅಧಿಕಾರಿಗಳನ್ನೂ ತಮ್ಮ ಜಾಲದ ಭಾಗವನ್ನಾಗಿ ಮಾಡಿಕೊಂಡಿವೆ. ದೇಶದ ಆಡಳಿತದ ಪ್ರಮುಖ ಅಂಗಗಳಲ್ಲಿ ಕೂಟಗಳ ಹಿತಾಸಕ್ತಿ ರಕ್ಷಿಸುವ ಜನರು ಇದ್ದಾರೆ. ಅಂಥ ವ್ಯವಸ್ಥೆಯನ್ನು ನಾಶ ಮಾಡದೇ ಕೇವಲ ಕೂಟದ ಮುಖ್ಯಸ್ಥನನ್ನು ಕೊಲ್ಲುವುದರಿಂದ ಯಾವ ಪ್ರಯೋಜನವೂ ಇಲ್ಲ ಎನ್ನುವುದು ಹಲವರ ವಿಶ್ಲೇಷಣೆ.



ಫಿಫಾ ಫುಟ್‌ಬಾಲ್ ವಿಶ್ವಕಪ್ ಮೇಲೆ ಕರಿನೆರಳು

ಹಿಂಸಾಚಾರವು ಜೂನ್–ಜುಲೈನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿ ಮೇಲೆ ಕರಿನೆರಳು ಬೀಳುವಂತೆ ಮಾಡಿದೆ. ಈ ಬಾರಿಯ ಫಿಫಾ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯು ಜೂನ್ 11ರಿಂದ ಜುಲೈ 19ರವರೆಗೆ ನಡೆಯಲಿದ್ದು, ಅಮೆರಿಕ, ಕೆನಡಾದೊಂದಿಗೆ ಮೆಕ್ಸಿಕೊ ಕೂಡ ಆತಿಥ್ಯ ವಹಿಸಿಕೊಂಡಿದೆ. ಜಾಗತಿಕ ಮಟ್ಟದ ದೊಡ್ಡ ಕ್ರೀಡಾ ಹಬ್ಬಗಳಲ್ಲಿ ಫಿಫಾ ವಿಶ್ವಕಪ್ ಕೂಡ ಒಂದು. ಫುಟ್‌ಬಾಲ್ ಪ್ರಿಯರು ದೊಡ್ಡ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸುತ್ತಾರೆ.

‘ಈಗ ನಡೆಯುತ್ತಿರುವ ಹಿಂಸಾಚಾರವು ಫುಟ್‌ಬಾಲ್ ವಿಶ್ವಕಪ್ ಮೇಲೆ ಪರಿಣಾಮ ಬೀರದು’ ಎಂದು ಮೆಕ್ಸಿಕೊ ಅಧ್ಯಕ್ಷೆ ಕ್ಲೌಡಿಯಾ ಶೇನ್‌ಬಾಮ್ ಹೇಳಿದ್ದಾರೆ. ಫಿಫಾದ ಅಧ್ಯಕ್ಷ ಗಿಯಾನಿ ಇನ್‌ಫ್ಯಾಂಟಿನೊ ಕೂಡ, ‘ಹಿಂಸಾಚಾರದಿಂದಾಗಿ ಟೂರ್ನಿಗೆ ತೊಂದರೆಯಾಗದು’ ಎಂದಿದ್ದಾರೆ.

ಅಮೆರಿಕದ ಒತ್ತಡ, ನೆರವು

ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕ ಆಡಳಿತದ ಒತ್ತಡದ ಕಾರಣಕ್ಕೆ ಮೆಕ್ಸಿಕೊದ ವಿಶೇಷ ಭದ್ರತಾ ಪಡೆಗಳು ಎಲ್.ಮೆಂಚೊನನ್ನು ಹೊಡೆದುರುಳಿಸಿವೆ. ಈ ಕಾರ್ಯಾಚರಣೆಗೆ ಅಮೆರಿಕದ ಸೇನೆ ನೇತೃತ್ವದ ಕಾರ್ಯಪಡೆಯೊಂದು ನೆರವನ್ನೂ ನೀಡಿದೆ.

ಮೆಂಚೊ ಅಮೆರಿಕಕ್ಕೆ ಅತಿ ಅಗತ್ಯವಾಗಿ ಬೇಕಾದ ಅಪರಾಧಿಯಾಗಿದ್ದ. ಆತನ ಬಗ್ಗೆ ಮಾಹಿತಿ ನೀಡಿದವರಿಗೆ 1.5 ಕೋಟಿ ಡಾಲರ್ ಬಹುಮಾನ ನೀಡುವುದಾಗಿ ಅದು ಘೋಷಿಸಿತ್ತು. ಈತನ ನೇತೃತ್ವದಲ್ಲಿ ಕಾರ್ಯಾಚರಿಸುತ್ತಿದ್ದ ಡ್ರಗ್ಸ್ ಕೂಟವು ಮೆಕ್ಸಿಕೊ ನೆಲದಿಂದ ಅಮೆರಿಕಕ್ಕೆ ಫೆಂಟಾನಿಲ್, ಕೊಕೇನ್, ಹೆರಾಯಿನ್ ಮತ್ತು ಮೆಥಾಂಫೆಟಮೈನ್.. ಮುಂತಾದ ಮಾದಕ ದ್ರವ್ಯಗಳನ್ನು ಸಾಗಿಸುತ್ತಿತ್ತು.

2017ರಿಂದೀಚೆಗೆ ಅಮೆರಿಕದ ಕೊಲಂಬಿಯಾದ ಜಿಲ್ಲಾ ನ್ಯಾಯಾಲಯ ಹಲವು ಪ್ರಕರಣಗಳಲ್ಲಿ ಮೆಂಚೊವನ್ನು ಅಪರಾಧಿ ಎಂದು ಘೋಷಿಸಿತ್ತು. ಇತ್ತೀಚೆಗೆ ಅಂದರೆ 2022ರ ಏಪ್ರಿಲ್ 5ರಂದು ಕಳ್ಳ ಮಾರ್ಗದಲ್ಲಿ ಅಮೆರಿಕಕ್ಕೆ ಡ್ರಗ್ಸ್ ಸಾಗಿಸಿದ ಆರೋಪದಲ್ಲಿ ಶಿಕ್ಷೆಗೆ ಗುರಿಯಾಗಿದ್ದ. ಈತನನ್ನು ಬಂಧಿಸಬೇಕು. ಆತನ ಡ್ರಗ್ಸ್ ಕೂಟವನ್ನು ಮಟ್ಟಹಾಕಬೇಕು ಎಂದು ಅಮೆರಿಕ ಮೆಕ್ಸಿಕೊ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿತ್ತು.

ಟ್ರಂಪ್ ಅವರು ಅಧ್ಯಕ್ಷರಾದ ಮೇಲೆ ಅಮೆರಿಕದಲ್ಲಿ ಡ್ರಗ್ಸ್ ನಿಯಂತ್ರಣದ ಬಗ್ಗೆ ಮಾತನಾಡುತ್ತಲೇ ಬಂದಿದ್ದರು. ಇದೇ ವಿಚಾರ ಮುಂದಿಟ್ಟುಕೊಂಡು ಮೆಕ್ಸಿಕೊ, ವೆನೆಜುವೆಲಾದ ಮೇಲೆ ಟೀಕಾ ಪ್ರಹಾರ ನಡೆಸುತ್ತಲೇ ಬಂದಿದ್ದರು. ವೆನೆಜುವೆಲಾದ ಅಧ್ಯಕ್ಷರಾಗಿದ್ದ ನಿಕೊಲಸ್ ಮಡೂರೊ ಅವರ ವಿರುದ್ಧದ ಕಾರ್ಯಾಚರಣೆಗೆ ಮಾದಕ ವಸ್ತುಗಳನ್ನು ಅಮೆರಿಕಕ್ಕೆ ಕಳ್ಳಸಾಗಣೆ ಮಾಡುತ್ತಿದ್ದುದೂ ಒಂದು ಕಾರಣ ಎಂದು ಟ್ರಂಪ್ ಹೇಳಿಕೊಂಡಿದ್ದರು.


ಮೆಕ್ಸಿಕೊದ ಜಾಲಿಸ್ಕೊ ರಾಜ್ಯದ ಪ್ಯೂರ್ಟೊ ವೆಲ್ಲರ್ಟಾ ಪ್ರದೇಶದಲ್ಲಿನ ಸೇತುವೆಯೊಂದರಲ್ಲಿ ಬೆಂಕಿಗೆ ಆಹುತಿಯಾದ ವಾಹನಗಳ ಅವಶೇಷಗಳು

ಮೆಕ್ಸಿಕೊ ಕೂಡ ಅಮೆರಿಕಕ್ಕೆ ಮಾದಕ ದ್ರವ್ಯಗಳನ್ನು ಕಳ್ಳ ಮಾರ್ಗದ ಮೂಲಕ ಕಳುಹಿಸುತ್ತಿದೆ ಎಂದು ಆರೋಪಿಸುತ್ತಾ ಬಂದಿದ್ದ ಟ್ರಂಪ್, ಮಾದಕ ದ್ರವ್ಯ ಮಾಫಿಯಾದ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೆಕ್ಸಿಕೊ ಸರ್ಕಾರದ ಮೇಲೆ ಒತ್ತಡ ಹಾಕುತ್ತಲೇ ಬಂದಿದ್ದರು.

ಮೆಕ್ಸಿಕೊ–ಅಮೆರಿಕ ಗಡಿಯ ಎರಡೂ ಭಾಗಗಳಲ್ಲಿ ಸಕ್ರಿಯವಾಗಿರುವ ಮಾದಕ ದ್ರವ್ಯಗಳನ್ನು ಕಳ್ಳಸಾಗಣೆ ಮಾಡುವ ಜಾಲದ ಕೂಟಗಳು ಮತ್ತು ಅವುಗಳ ಸದಸ್ಯರ ಮಾಹಿತಿ ಕಲೆ ಹಾಕುವ ಉದ್ದೇಶದಿಂದ ವಿವಿಧ ಇಲಾಖೆಗಳನ್ನು ಒಟ್ಟು ಸೇರಿಸಿ ತಿಂಗಳ ಹಿಂದೆಯಷ್ಟೇ ಅಕ್ರಮ ಕೂಟಗಳ ನಿಗ್ರಹ ಜಂಟಿ ಇಲಾಖೆಗಳ ಕಾರ್ಯಪಡೆಯನ್ನು (ಜೆಐಟಿಎಫ್–ಸಿಸಿ) ಅಮೆರಿಕ ಸ್ಥಾಪಿಸಿತ್ತು. ರಕ್ಷಣೆ, ಗುಪ್ತಚರ, ಕಾನೂನು ಇಲಾಖೆಗಳನ್ನೊಳಗೊಂಡ ಈ ಕಾರ್ಯಪಡೆಯು ಡ್ರಗ್ಸ್ ಜಾಲದ ಬಗ್ಗೆ ಗುಪ್ತಚರ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ.

ಎಲ್ ಮೆಂಚೊ ಮತ್ತು ಆತನ ಕೂಟದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಈ ಕಾರ್ಯಪಡೆಯು ಮೆಕ್ಸಿಕೊಗೆ ಮಾಹಿತಿಗಳನ್ನು ನೀಡಿತ್ತು. ಕಾರ್ಯಾಚರಣೆ ಹೇಗಿರಬೇಕು ಎಂಬುದನ್ನೂ ವಿವರಿಸಿತ್ತು ಎಂದು ಅಮೆರಿಕದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಪೊಲೀಸರ ಗುಂಪೊಂದು ಬೈಕ್‌ಗಳಲ್ಲಿ ಬರುವ ಯುವಕರ ಮೇಲೆ ಹಲ್ಲೆ ನಡೆಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಜರಂಗ ದಳದ ಸದಸ್ಯರು ಮಸೀದಿಯ ಮುಂದೆ ಪ್ರಾರ್ಥನಾ ಸಮಯದಲ್ಲಿ ಗದ್ದಲ ಉಂಟುಮಾಡಲು ಪ್ರಯತ್ನಿಸಿದಾಗ ಪೊಲೀಸರು ಲಾಠಿ ಬೀಸಿ ಅವರನ್ನು ಅಲ್ಲಿಂದ ಓಡಿಸಿದರು ಎಂದು ವಿಡಿಯೊವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಒಂದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ಗೂಗಲ್ ಲೆನ್ಸ್ ಹುಡುಕಾಟವು ನ್ಯೂಸ್ 18 ಮರಾಠಿ ಚಾನೆಲ್‌ನಲ್ಲಿ 2026ರ ಫೆಬ್ರುವರಿ 6ರಂದು ಪ್ರಕಟವಾಗಿದ್ದ ವರದಿಗೆ ಸಂಪರ್ಕ ಕಲ್ಪಿಸಿತು. ವರದಿಯಲ್ಲಿ ಪ್ರಕಟವಾಗಿದ್ದ ವಿಡಿಯೊ ಮತ್ತು ಜಾಲತಾಣಗಳಲ್ಲಿ ಹರಿದಾಡುತ್ತಿದ್ದ ವಿಡಿಯೊ ನಡುವೆ ಸಾಮ್ಯ ಕಂಡುಬಂತು. ಕರ್ನಾಟಕದ ಚಿಂಚಲಿಯಲ್ಲಿ ಮಾಯಕ್ಕ ದೇವಿ ಜಾತ್ರೆ ಅಂಗವಾಗಿ ನಡೆದ ಕುದುರೆ ಗಾಡಿ ರೇಸ್ ವೇಳೆ ಗದ್ದಲ ಉಂಟಾಗಿ, ಪೊಲೀಸರು ಲಾಠಿ ಬೀಸಿದ್ದರು. ರೇಸ್ ಗಾಡಿಗಳು ಮಹಾರಾಷ್ಟ್ರದ ಸಾಂಗ್ಲಿ ಪ್ರವೇಶಿಸುತ್ತಿದ್ದಂತೆ ಅಲ್ಲಿಯೂ ಅದೇ ಪರಿಸ್ಥಿತಿ ಮರುಕಳಿಸಿ, ಗದ್ದಲ ಮಾಡುತ್ತಿದ್ದ ಯುವಕರನ್ನು ಪೊಲೀಸರು ಲಾಠಿ ಏಟು ನೀಡಿ ಚದುರಿಸಿದರು ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಈ ವಿಡಿಯೊಗೆ ಕೆಲವರು ಕೋಮು ಆಯಾಮ ನೀಡಿ ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ದಾರಿದ್ರ್ಯ ದೀಕ್ಷೆ

ನುಡಿ ಬೆಳಗು



ರೇಣುಕಾ ನಿಡಗುಂದಿ

ಲಂಡನ್‌ನ ಗಿಲ್ಡ್ ಹೌಸಿನಲ್ಲಿ ಒಂದು ದೊಡ್ಡ ಸಭೆ. ಅಲ್ಲಿ ಗಾಂಧೀಜಿ ಅವರ ಉಪನ್ಯಾಸ ನಡೆದಿರುತ್ತದೆ. ವಿಷಯ: ‘ದಾರಿದ್ರ್ಯ ದೀಕ್ಷೆ’. ಸಭೆಯಲ್ಲಿ ಕಿಕ್ಕಿರಿದು ಜನ ಸೇರಿರುತ್ತಾರೆ. ಸಭಾಂಗಣ ತುಂಬಿ ಸಾವಿರಾರು ಜನ ಬೀದಿಯಲ್ಲಿ ನಿಂತಿರುತ್ತಾರೆ. ದಾರಿದ್ರ್ಯ ದೀಕ್ಷೆ ಎಂದರೆ ಸ್ವಯಂ ಇಚ್ಛೆಯಿಂದ ಸರಳ ಜೀವನವನ್ನು ಅಳವಡಿಸಿಕೊಂಡು, ಐಶ್ವರ್ಯ ಸಂಪತ್ತಿನ ಆಸೆಗಳನ್ನು ತ್ಯಜಿಸಿ ಸಮಾಜ ಸೇವೆ, ಆತ್ಮಶುದ್ಧಿ ಅಥವಾ ಧಾರ್ಮಿಕ–ನೈತಿಕ ಮೌಲ್ಯಗಳಿಗಾಗಿ ಬದುಕುವ ಸಂಕಲ್ಪ, ಪ್ರತಿಜ್ಞೆ. ಆ ದೀಕ್ಷೆಯನ್ನು ತೆಗೆದುಕೊಂಡು ಆ ರೀತಿ ಬಾಳಿದವರ ಬದುಕಿನ ಪ್ರೇರಣಾದಾಯಕ ಸಂಗತಿಗಳನ್ನು ಜನ ಆಲಿಸುತ್ತಿದ್ದರು. ಉಪನ್ಯಾಸ ಮುಗಿದ ಮೇಲೆ ಅನೇಕರು ಅನೇಕ ಪ್ರಶ್ನೆಗಳನ್ನು ಕೇಳಿದರು. ಗಾಂಧೀಜಿ ಅವುಗಳಿಗೆಲ್ಲ ಸೂಕ್ತವಾದ ಉತ್ತರವನ್ನು ಕೊಡುತ್ತಿದ್ದರು. ಸರಿಯಾದ ಅರ್ಥವನ್ನು ಹೇಳುತ್ತಿದ್ದರು. ಏನನ್ನೂ ಸಂಗ್ರಹಿಸಿಟ್ಟುಕೊಳ್ಳಬಾರದು ಎನ್ನುವ ಬಗ್ಗೆ ಚರ್ಚೆಯಾಗುತ್ತದೆ. ಅಸಂಗ್ರಹದ ವಿಷಯ ಬಂದಾಗ ‘ನಮ್ಮದು ಎನ್ನುವ ಏನನ್ನೂ ಇಟ್ಟುಕೊಳ್ಳದೇ ಇರುವುದು ಹೇಗೆ’ ಎಂಬ ಪ್ರಶ್ನೆ ಬರುತ್ತದೆ.

ಆಗ ಗಾಂಧೀಜಿ ಹೇಳುತ್ತಾರೆ: ‘ನಮ್ಮದೆನ್ನುವ ಏನನ್ನೂ ಇಟ್ಟುಕೊಳ್ಳದೇ ಇರುವುದು ಎಂದರೆ, ನಿಮ್ಮ ಮೇಲಿನ ಬಟ್ಟೆಗಳನ್ನು ಕಳಚಿಬಿಡುವುದು ಎಂದರ್ಥವಲ್ಲ. ನಿಮ್ಮ ಎಲುಬಿನ ಹಂದರಕ್ಕೆ ಅಂಟಿದ ಮಾಂಸವನ್ನೇ ತೆಗೆದಿಟ್ಟಂತೆ. ನೀವು ಕೇಳಬಹುದು, ನಿಮ್ಮ ಮೇಲಿನ ಬಟ್ಟೆ ಇದೆಯಲ್ಲ, ಇಲ್ಲ ಎನ್ನುವುದು ಹೇಗೆ? ಎಂದು. ಅದಕ್ಕೆ ನಾನನ್ನುವುದಿಷ್ಟೇ; ಈ ದೇಹವಿರುವ ತನಕ ಅದಕ್ಕೆ ಏನಾದರೂ ಹೊದಿಸಬೇಕು ಎಂದು ಕಾಣುತ್ತದೆ.’


ಗಾಂಧಿ ಒಳಗೊಳಗೇ ನಗುತ್ತಿದ್ದರು. ನಗುತ್ತಲೇ ಮುಂದುವರಿದು ಹೇಳುತ್ತಾರೆ: ‘ಇಲ್ಲಿರುವವರಿಗೆ ಬೇಕಾದರೆ ಅದನ್ನೂ ತೆಗೆದುಕೊಳ್ಳಬಹುದು, ನಾನೇನು ಪೊಲೀಸರನ್ನು ಕರೆಯುವುದಿಲ್ಲ’.

ಸೇರಿದ ಜನರೆಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿಬಿಡುತ್ತಾರೆ ಗಾಂಧಿ. ಲಂಡನ್‌ನಲ್ಲಿದ್ದಾಗ ಮೈಗಾವಲಿಗಾಗಿ ಬ್ರಿಟಿಷ್ ಸರ್ಕಾರದವರು ಪೊಲೀಸ್ ದಳವನ್ನು ಕೊಟ್ಟಿರುತ್ತಾರೆ. ಗಾಂಧಿ ಅವರ ವಿನೋದದ ಮಾತಿಗೆ ಪೊಲೀಸರೂ ನಗತೊಡಗುತ್ತಾರೆ.

ಲೋಕದಲ್ಲಿ ಎರಡು ಬಗೆಯ ಜನರಿರುತ್ತಾರೆ. ಒಂದು ಬಗೆಯವರಿಗೆ ಅದು ಇದು ಬೇಕುಬೇಡದ್ದನ್ನೆಲ್ಲ ಮನೆ ಹಿಡಿಸಲಾರದಂತೆ ಸಂಗ್ರಹಿಸಿಟ್ಟುಕೊಳ್ಳುವ ಅಭ್ಯಾಸ. ಇನ್ನೊಂದು ಬಗೆಯವರಿಗೆ ಇದ್ದುದನ್ನೆಲ್ಲ ತೊರೆದು ಆದಷ್ಟೂ ಹೊರೆ ಕಡಿಮೆ ಮಾಡಿಕೊಳ್ಳುವ ಬಯಕೆ. ಗಾಂಧಿ ಬಯಸಿದ್ದರೆ ದೊಡ್ಡ ಬಂಗಲೆಯಲ್ಲಿಯೇ ವಾಸಿಸಬಹುದಿತ್ತು. ಅವರು ಎಲ್ಲವನ್ನೂ ತೊರೆದು ಆಶ್ರಮ ವಾಸಿಯಾಗುತ್ತಾರೆ. ಸ್ವಂತ ದುಡಿಮೆಯಾಗಿ ಚರಕವನ್ನು ನೂಲಲು ಕಲಿಸುತ್ತಾರೆ. ಇತರರಿಗೂ ಸರಳ ಜೀವನವನ್ನು ಅನುಸರಿಸಲು ಪ್ರೇರಣೆಯಾಗುತ್ತಾರೆ.

ದೇಶದ ಬಹುಸಂಖ್ಯಾತರು ದಾರಿದ್ರ್ಯದಲ್ಲಿ ಬದುಕುತ್ತಿದ್ದಾರೆ, ಉದ್ಯೋಗವಿಲ್ಲ. ಬಡತನದಲ್ಲಿ, ಒಪ್ಪೊತ್ತಿನ ಊಟಕ್ಕೂ ಹೋರಾಟ ಮಾಡಬೇಕಾದ ಸ್ಥಿತಿ ಇದೆ. ಅಸಂಖ್ಯಾತ ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರವಿಲ್ಲ. ಸರಿಯಾದ ಶಿಕ್ಷಣ ಸಿಗುತ್ತಿಲ್ಲ. ದೇಶದ ಸಂಪತ್ತಿನ ಬಹುಪಾಲು ಉದ್ಯಮಿಗಳ ಕೈಯಲ್ಲಿದೆ. ದಾರಿದ್ರ್ಯ ದೀಕ್ಷೆಯನ್ನು ಅಥವಾ ಸನ್ಯಾಸ ಜೀವನವನ್ನು ಸ್ವೀಕರಿಸಿದವರು ಅನುಸರಿಸುವ ಒಂದು ವ್ರತವೆಂದು ನೋಡುವಾಗ ಅವರೆಲ್ಲ ಐಷಾರಾಮಿ ಜೀವನವನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ. ನಮ್ಮ ದೇಶದ ಬಾಬಾಗಳು, ಸಾಧುಗಳು, ಸನ್ಯಾಸಿಗಳು, ಸಂತರು, ಮಠಾಧಿಪತಿಗಳು ನಡೆಸುವ ವೈಭವದ ಜೀವನ ಶೈಲಿಯನ್ನು ನೋಡಿದಾಗ ಗಾಂಧೀಜಿ ನೆನಪಾಗುತ್ತಾರೆ. ಸಮಾಜ ಸೇವೆಯ ಹೆಸರಿನಲ್ಲಿ ಕೋಟ್ಯಂತರ ಸಂಪತ್ತನ್ನು ಸಂಗ್ರಹಿಸಿಕೊಳ್ಳುವ ಈ ಎಲ್ಲಾ ಜನರು ನಿಜವಾಗಿ ಜನಸೇವೆ, ಸಮಾಜ ಸೇವೆ ಮಾಡಿದ್ದೆಷ್ಟು? ❖

ಗುಂಡಣ್ಣ



ಪದಬಂಧ 6328


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಾವಚಿತ್ರವನ್ನು ತೆಗೆಯುವವನು (4)
3.ಈ ಪರಿ ಬಿಟ್ಟುಬಿಡುವಿಕೆ! (4)
5.ಕಾರಿನಲ್ಲಿ ಕುಳಿತು ಆಡಿರುವ ಬೇಟೆ (3)
6.ಬೀಜ ಬಿತ್ತಲು ಮಾಡಿರುವ ಮಡಿ (2)
7.ಒನಪು ತೋರಿದಾಗ ಜ್ಞಾಪಕ ಬಂದಿತೇ? (3)
9.ಸರಸದ ವಿರುದ್ಧ ಪದ (3)
11.ಏಳು ದಿನಗಳ ಅವಧಿ (2)
12.ಗ್ರಂಥದ ಮೂಲಪ್ರತಿ (3)
14.ಒಳ್ಳೆಯ ಶಿಕ್ಷಣಪಡೆದವನು (4)
15.ಆಸ್ಪತ್ರೆಯನ್ನು ಹೀಗೂ ಹೇಳುವರು (4)

ಮೇಲಿಂದ ಕೆಳಕ್ಕೆ

1.ಅಚ್ಚು ಮಾಡುವ ಸ್ಥಳ (4)
2.ಹಿತಚಿಂತಕನನ್ನು ಹೀಗೆನ್ನಿ (3)
3.ಈ ಪರಿ ಓಡಿ ಹೋಗುವಿಕೆ! (3)
4.ಗರ ಬಡಿದಂತಿರುವ ಪತಿವ್ರತೆ (3)
6.ಭಾಗಸ್ಥ ಇಲ್ಲಿದ್ದಾನೆ (4)
8.ರಾತ್ರಿ ವೇಳೆ ಸಂಚರಿಸುವ ಕಳ್ಳ, ರಾಕ್ಷಸ ಮುಂತಾದವರು (4)
10.ಗುಂಪು ಇಲ್ಲಿ ಕಾಣುತ್ತಿದೆ (4)
11.ವಾರದ ಮೊದಲೇ ದೊರೆತಿರುವ ಒಡೆತನ (3)
12.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
13.ನೀರು ಬೆರೆತ ಮಣ್ಣು (3)



6327ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಭಾರೆ 5.ಬಡನಡು 6.ಪಲ್ಲವಿ 9.ಮಸಣ 10.ಜ್ಞಾತಿಕಲಹ 11.ಪಾವನ 12.ತ್ವರಿತ 14.ಪಶ್ಚಾತ್ತಾಪ 17.ತತ್ತವಣೆ

ಮೇಲಿಂದ ಕೆಳಕ್ಕೆ:
1.ಪರಿತಾಪ 2.ರೆಪ್ಪೆ 3.ಜಂಬ 4.ಕಡುಜಾಣ 7.ವಿಜ್ಞಾನ 8.ಸಂಕರ 9.ಮಹತ್ವ 11.ಪಾರುಪತ್ಯ 13.ತಪಾಸಣೆ 15.ಪರ್ವ 16.ಸಂತ

ಸುಡೊಕು 6712

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		1		3	5		7
7		6	4					1
	3				7	4		
6	1				4			
			8		2	6		4
8	2						1	
		3		2		9		8
9			3		6		7	
4		1		8			6	

6711 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಫೆಬ್ರುವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಏಕಾದಶಿ ಗಂ. 22-33 ನಕ್ಷತ್ರ: ಆರ್ದ್ರಾ ಗಂ. 10-49 ಯೋಗ: ಆಯುಷ್ಮಾನ್ ಗಂ. 19-44 ಕರಣ: ವಣಿಜ ಗಂ 11-33 ಕುಂಭ ಮಾಸದ 14 ನೇ ದಿನ. ಮಳೆ ನಕ್ಷತ್ರ : ಶತಭಿಷ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 ,ಸೂರ್ಯೋದಯ : 06-51 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 9 ರಂಜಾನ್, ದಿನ ವಿಶೇಷ : ಆಮಲಕಿ ಏಕಾದಶಿ, ಅದೃಷ್ಟ ಸಂಖ್ಯೆ : 3, 5

ಮೇಷ: ಕೃಷಿ ಕ್ಷೇತ್ರದಲ್ಲಿನ ಪ್ರಯತ್ನವನ್ನು ನಿಲ್ಲಿಸದೆ ಜಾಗರೂಕತೆಯಿಂದ ಕೆಲಸ ಮುಂದುವರಿಸಿ. ಮೇಲಧಿಕಾರಿಗಳ ಸಲಹೆ ಸೂಚನೆಗಳನ್ನು ಪಾಲಿಸಿ, ಅವರು ನಿಮ್ಮನ್ನು ಒಪ್ಪಿಕೊಳ್ಳಲಿದ್ದಾರೆ.

ವೃಷಭ: ಶತ್ರುಗಳಿಗೂ ಶುಭ ಹಾರೈಸುವ ರೀತಿಯಲ್ಲಿ ವ್ಯಕ್ತಿತ್ವ ರೂಪಿಸಿಕೊಂಡಲ್ಲಿ ಶ್ರೇಯಸ್ಸು ಉಂಟಾಗುವುದು. ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳುವ ಮೊದಲು ಮಹಾಗಣಪತಿಯ ಸೇವೆ ಮಾಡಿರಿ.

ಮಿಥುನ: ಕೌಟುಂಬಿಕ ವಾದ ವಿವಾದಗಳು ನಡೆಯದಂತೆ, ಎಲ್ಲರಲ್ಲೂ ಹೊಂದಾಣಿಕೆ ಇರುವಂತೆ ನಡವಳಿಕೆ ಇರಲಿ. ನಾಯಕತ್ವದ ಗುಣವು ಸಹೋದ್ಯೋಗಿಗಳ ಸಹಕಾರದಿಂದ ಅಭಿವೃದ್ಧಿ.

ಕರ್ಕಾಟಕ: ಯಶೋದಾಯಕ ಭವಿಷ್ಯಕ್ಕಾಗಿ ಯೋಜನೆಗಳನ್ನು ರೂಪಿಸುವಲ್ಲಿ ಪತ್ನಿ ಸಲಹೆಯನ್ನು ಸ್ವೀಕರಿಸಿ. ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವ ತೀರ್ಮಾನ ಮಾಡಬಹುದು.

ಸಿಂಹ: ಮಕ್ಕಳ ಮಾನಸಿಕ ಬೆಳವಣಿಗೆ ಮತ್ತು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ. ಏಕಾಗ್ರತೆಯನ್ನು ಕಾಯ್ದುಕೊಳ್ಳುವ ಮಾರ್ಗ ಕಂಡುಕೊಳ್ಳಿರಿ. ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆ, ರಿಪೇರಿ ಮಾಡುವವರಿಗೆ ಸುದಿನ.

ಕನ್ಯಾ: ಸಕಾರಾತ್ಮಕ ಮನೋಭಾವ ಕಳೆದು ಹೋದಂತಿದ್ದ ಕಲೆಯಲ್ಲಿನ ಆಸಕ್ತಿಯನ್ನು ಮತ್ತೆ ಮರುಕಳಿಸುವಂತೆ ಮಾಡುವುದು. ತಂದೆಯವರಿಗೆ ಇದ್ದ ಹೃದಯ ಸಂಬಂಧಿ ವ್ಯಾಧಿಯು ಉತ್ತಮ ರೀತಿಯಲ್ಲಿ ಸುಧಾರಿಸಲಿದೆ.

ತುಲಾ: ಪೊಲೀಸ್ ಹುದ್ದೆಯಲ್ಲಿ ಇರುವವರಿಗೆ ಕಾರ್ಯಾಚರಣೆಗೆ ಕುಟುಂಬದಿಂದ ದೂರ ಇರುವ ಪರಿಸ್ಥಿತಿ ಅಥವಾ ದೂರ ಸಂಚಾರ ಮಾಡಬೇಕಾಗಬಹುದು. ಸಾಂಸಾರಿಕವಾಗಿ ತಪ್ಪು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ.

ವೃಶ್ಚಿಕ: ಸೋಮಾರಿತನ ಅಥವಾ ಬೇಜವಾಬ್ದಾರಿತನದಿಂದ ಮಾಡಿದ ತಪ್ಪುಗಳಿಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಪ್ರೀತಿಯ ವಿಷಯದಲ್ಲಿ ಮುಂದೇನು ಮಾಡಬೇಕೆಂಬ ಸೂಚನೆ ಲಭಿಸುವುದು. ಕಾರ್ಮಿಕರ ಬೇಡಿಕೆ ಪರಿಶೀಲಿಸುವಿರಿ.

ಧನು: ಅತಿಯಾದ ಆಲಸ್ಯ, ಅಹಂಕಾರ, ಉಚಿತವಲ್ಲದ ಮಾತುಗಾರಿಕೆ ಗೌರವವನ್ನು ಕಡಿಮೆ ಮಾಡುವುದು. ಷೇರು ಪೇಟೆಯ ವ್ಯವಹಾರಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ. ಲಾಭಾಂಶ ಕಡಿಮೆ ಇರುವುದು.

ಮಕರ: ಸ್ನೇಹಿತರ ವ್ಯವಹಾರದಲ್ಲಿ ಸಂಶಯ, ಅಪನಂಬಿಕೆ ಬಾರದಂತೆ ಕಾರ್ಯನಿರ್ವಹಿಸಿ. ಸಂಬಂಧ ಗಟ್ಟಿಯಾಗಿರುತ್ತದೆ. ರಾಜಕೀಯ ವಿಚಾರ ಚರ್ಚಿಸಲು ರಾಜಕೀಯ ಗುರುವಿನ ಸ್ಥಳಕ್ಕೆ ತೆರಳುವ ಸಂಭವ ಇರಲಿದೆ.

ಕುಂಭ: ಹೆಜ್ಜೆ ಬಿರುಸಾಗಿ ಮತ್ತು ಕೇವಲ ನಿಮಗಲ್ಲದೇ ಸಂಸ್ಥೆಗೂ ಲಾಭದಾಯಕವಾಗಲಿದೆ. ಬುದ್ಧಿಯು ಮಂದಗತಿಯಲ್ಲಿ ಸಾಗುವುದು. ಚೋರ ಕೃತ್ಯಗಳಿಗೆ ಪರಿಹಾರವಾಗಿ ವ್ಯವಹಾರ ಕ್ಷೇತ್ರದ ರಕ್ಷಣಾ ದೇವತೆಯನ್ನು ಆರಾಧಿಸಿ.

ಮೀನ: ವ್ಯವಹಾರದಲ್ಲಿ ಆದಾಯ ಕಡಿಮೆ ಎಂದು ಅನಿಸಿದರೂ ಹೆದರುವ ಅಥವಾ ಬದಲು ಮಾಡುವ ಅವಶ್ಯಕತೆ ಇರುವುದಿಲ್ಲ. ಪ್ರೀತಿ ಪಾತ್ರರಲ್ಲಿನ ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ಆನಂದ, ನೆಮ್ಮದಿ ಮೂಡುವುದು.

ಷೇರುಪೇಟೆ ವಹಿವಾಟು
27 ▼ 82,248 ಇಂದಿನ ಅಂತ್ಯ; 82,276 ಹಿಂದಿನ ಅಂತ್ಯ (82400, 82,200, 82,000, 81,800; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ:	25,482
ಇಂದಿನ ಅಂತ್ಯ:	25,496
ದಿನದ ಗರಿಷ್ಠ:	25,572
▲	14

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು	
100 ಕ್ಕೆ	₹550
12 ಕ್ಕೆ	₹80
ಮೈಸೂರು: 100 ಕ್ಕೆ	₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4	₹216.50
ಆರ್‌ಎಸ್‌ಎಸ್-5	₹210
ಗುಡ್ ಲಾಟ್	₹198

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ)	₹455-796
ದ್ವಿತಳಿ (ಬಿ.ವಿ)	₹340-933

ಮುದ್ರಮನೆ ಕಾಫಿ
ಎಪಿ	₹23050
ಎಸಿ	₹13000
ಆರ್‌ಪಿ	₹18300
ಆರ್‌ಸಿ	₹10000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್)	₹1730 (1730)
ಸೋಯಾ (ರಿಫೈನ್ಡ್)	₹1370 (1380)
ಸೂರ್ಯಕಾಂತಿ (ರಿಫೈನ್ಡ್)	₹1590 (1590)
ವಾಮೋಲಿನ್	₹1290 (1295)

ಜಿಡಿಪಿ ಬೆಳವಣಿಗೆ ಶೇ 7.2ರಷ್ಟು ನಿರೀಕ್ಷೆ



ನವದೆಹಲಿ (ಪಿಟಿಐ): ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರ ನಡುವೆ ಇರಬಹುದು ಎಂದು 'ಇ.ವೈ ಎಕಾನಮಿ ವಾಚ್' ವರದಿ ತಿಳಿಸಿದೆ.

2047ರ ವೇಳೆಗೆ ವಿಕಸಿತ ಭಾರತ ಗುರಿ ಸಾಧಿಸಲು, ತೆರಿಗೆ ಸುಧಾರಣೆಗಳ ಮೂಲಕ ದೇಶವು ತನ್ನ ತೆರಿಗೆ–ಜಿಡಿಪಿ ಅನುಪಾತವನ್ನು ಹೆಚ್ಚಿಸಬೇಕಿದೆ ಎಂದು ಗುರುವಾರ ತಿಳಿಸಿದೆ.

ಪ್ರಮುಖ ದೇಶಗಳೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಗಳ ಕಾರಣದಿಂದಾಗಿ ದೇಶದ ಮಧ್ಯಮ ಅವಧಿಯ ಆರ್ಥಿಕ ಸ್ಥಿತಿಯು ಉಜ್ವಲವಾಗಿರುವಂತೆ ಕಾಣುತ್ತಿದೆ. 2026–27ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರ ನಡುವೆ ಇರುವ ಅಂದಾಜಿದೆ ಎಂದು ಇ.ವೈ ಇಂಡಿಯಾದ ಮುಖ್ಯ ನೀತಿ ಸಲಹೆಗಾರ ಡಿ.ಕೆ.ಶ್ರೀವಾಸ್ತವ ಹೇಳಿದ್ದಾರೆ.

ತೊಗರಿ ಖರೀದಿ ಕೇಂದ್ರ: ಬಾರದ ರೈತರು

14 ಜಿಲ್ಲೆಗಳ ಪೈಕಿ 8 ಜಿಲ್ಲೆಗಳಲ್ಲಿ ಮಾತ್ರ ಮಾರಾಟ

• ಇಮಾಮಹುಸೇನ ಗೂಡುನವರ

ಬೆಳಗಾವಿ: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ತೊಗರಿ ಖರೀದಿಗೆಂದೇ ರಾಜ್ಯ ಸರ್ಕಾರವು 14 ಜಿಲ್ಲೆಗಳಲ್ಲಿ ಒಟ್ಟು 567 ಖರೀದಿ ಕೇಂದ್ರಗಳನ್ನು ತೆರೆದಿದೆ. ಎಫ್‌ಎಕ್ಯೂ ಗುಣಮಟ್ಟದ ತೊಗರಿಗೆ ಕ್ವಿಂಟಲ್‌ಗೆ ₹ 8 ಸಾವಿರ ದರ ನಿಗದಿಪಡಿಸಿದೆ.

ಖರೀದಿ ಕೇಂದ್ರಗಳಲ್ಲಿ ಈವರೆಗೆ 97,956 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಆದರೆ, ಈವರೆಗೆ 10,922 ರೈತರು ಮಾತ್ರ 1.72 ಲಕ್ಷ ಕ್ವಿಂಟಲ್ ತೊಗರಿ ಮಾರಿದ್ದಾರೆ. ಉಳಿದ ರೈತರು ಆಸಕ್ತಿ ತೋರುತ್ತಿಲ್ಲ.

ಕಳೆದ ವರ್ಷ ಕೇಂದ್ರ ಸರ್ಕಾರವು ಎಂಎಸ್‌ಪಿ ಅಡಿ ಕ್ವಿಂಟಲ್‌ಗೆ ₹7,550 ದರ ನಿಗದಿಪಡಿಸಿತ್ತು. ರಾಜ್ಯ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ₹450 ಪ್ರೋತ್ಸಾಹಧನ ಘೋಷಿಸಿತ್ತು. ಒಟ್ಟಾರೆ ಕ್ವಿಂಟಲ್‌ಗೆ ₹8 ಸಾವಿರ ದರ ಸಿಕ್ಕಿತ್ತು. 6 ಲಕ್ಷ ಕ್ವಿಂಟಲ್‌ಗೂ ಹೆಚ್ಚು ಖರೀದಿ ಆಗಿತ್ತು.

ತೊಗರಿ ಖರೀದಿ ಕೇಂದ್ರಗಳು

ಜಿಲ್ಲೆ	ಮಾರಾಟ (ಕ್ವಿಂಟಲ್‌ಗಳಲ್ಲಿ)
ಕೊಪ್ಪಳ	49,839
ಬಾಗಲಕೋಟೆ	41,868
ಚಿತ್ರದುರ್ಗ	35,282
ವಿಜಯಪುರ	24,815
ಬೆಳಗಾವಿ	7,336
ರಾಯಚೂರು	6,449
ಬಳ್ಳಾರಿ	6,070
ಗದಗ	594

ಈ ಸಲ ಖರೀದಿ ಪ್ರಕ್ರಿಯೆ ಮುಗಿಯಲು ಇನ್ನೂ 18 ದಿನಗಳಷ್ಟೇ (ಮಾರ್ಚ್ 16 ಕೊನೆಯ) ಬಾಕಿ ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಸಲ ಖರೀದಿ ಪ್ರಮಾಣ ಕುಸಿಯುವ ಸಾಧ್ಯತೆ ಹೆಚ್ಚಿದೆ.



ಅಥಣಿಯಲ್ಲಿ ತೊಗರಿ ಖರೀದಿಗಾಗಿ ತೆರೆದಿರುವ ಕೇಂದ್ರ

ಎಂಟೇ ಜಿಲ್ಲೆಗಳಲ್ಲಿ ಖರೀದಿ: ಬೆಳಗಾವಿ, ಬೀದರ್, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಗದಗ, ಕಲಬುರಗಿ, ಯಾದಗಿರಿ, ಬಾಗಲಕೋಟೆ, ಬಳ್ಳಾರಿ, ಕೋಲಾರ, ಕೊಪ್ಪಳ, ರಾಯಚೂರು, ವಿಜಯನಗರ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ಆದರೆ, ಫೆ.26ರವರೆಗೆ ಎಂಟೇ ಜಿಲ್ಲೆಗಳಲ್ಲಿ ಮಾತ್ರ ಖರೀದಿ ಪ್ರಕ್ರಿಯೆ ನಡೆದಿದೆ. ಉಳಿದ ಕಡೆ ಒಬ್ಬ ರೈತರೂ ತಮ್ಮ ಉತ್ಪನ್ನ ಮಾರಿಲ್ಲ.

'ಮುಕ್ತ ಮಾರುಕಟ್ಟೆಯಲ್ಲಿ ಉತ್ತಮ ದರವಿದೆ. ತೊಗರಿ ಖರೀದಿಸಲು ಖರೀದಿ ಕೇಂದ್ರಗಳಲ್ಲಿ ಇಲ್ಲಸಲ್ಲದ ಕಾರಣಗಳನ್ನು ಕೇಳಲಾಗುತ್ತದೆ. ಹಲವು ದಾಖಲೆಪತ್ರಗಳನ್ನು ಕೇಳಿ ಸತಾಯಿಸಲಾಗುತ್ತಿದೆ. ಖರೀದಿಸಿದ ಬಳಿಕ ಸಕಾಲಕ್ಕೆ ಹಣ ಸಿಗುವುದಿಲ್ಲ. ಅದಕ್ಕೆ ಇದ್ಯಾವುದರ ಗೊಡವೆ ಬೇಡವೆಂದು ಸಿಕ್ಕಷ್ಟು ಹಣಕ್ಕೆ ತೊಗರಿಯನ್ನು ಖಾಸಗಿಯವರಿಗೆ ಮಾರುತ್ತಿದ್ದೇವೆ' ಎಂದು ರೈತರು ತಿಳಿಸಿದರು.

> **ಮುಕ್ತ ಮಾರುಕಟ್ಟೆಯಲ್ಲಿ ಸಿಗುವಷ್ಟೇ ದರ ಕನಿಷ್ಠ ಬೆಂಬಲ ಬೆಲೆ ಯೋಜನೆ ಖರೀದಿ ಕೇಂದ್ರಗಳಲ್ಲಿ ಸಿಕ್ಕರೆ ರೈತರಿಗೇನು ಪ್ರಯೋಜನ? ಹೆಚ್ಚಿನ ದರ ನಿಗದಿಪಡಿಸಿ ರೈತರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಕ್ರಮ ವಹಿಸಬೇಕು**
> **ಮಹಾದೇವ ಮಡಿವಾಳ,** ರೈತ, ಅಥಣಿ

> **ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್ ತೊಗರಿ ದರ ₹7,800 ಇದೆ. ನಮ್ಮ ಕೇಂದ್ರಗಳಲ್ಲಿ ₹8 ಸಾವಿರ ದರ ಇದೆ. ಅದಕ್ಕೆ ಖಾಸಗಿಯವರು ರೈತರ ಬಳಿ ನೇರ ತೊಗರಿ ಖರೀದಿಸುತ್ತಿದ್ದಾರೆ. ರೈತರು ಖರೀದಿ ಕೇಂದ್ರಗಳತ್ತ ಬರುತ್ತಿಲ್ಲ**
> **ಮಹಾದೇವಪ್ಪ ಚಬನೂರ,**
> ಉಪನಿರ್ದೇಶಕ, ಕೃಷಿ ಮಾರಾಟ ಇಲಾಖೆ

ಸುದ್ದಿ 2 ನಿಮಿಷ

ಗ್ರಾಮಾಂತರ ಪ್ರದೇಶಗಳಲ್ಲಿ ವೈ–ಫೈ ಯೋಜನೆಗೆ ಚಾಲನೆ

ಬೆಂಗಳೂರು: ರಾಜ್ಯದ ಕೆಲವು ದುರ್ಗಮ ಪ್ರದೇಶಗಳಲ್ಲಿ ವೈ–ಫೈ ಸೌಲಭ್ಯ ಕಲ್ಪಿಸುವ ಉದ್ದೇಶದ ಯೋಜನೆಗೆ ಕೇಂದ್ರದ ಮಾಜಿ ಸಚಿವ ಅನಂತಕುಮಾರ ಹೆಗಡೆ ಬೆಂಗಳೂರಿನಲ್ಲಿ ಗುರುವಾರ ಚಾಲನೆ ನೀಡಿದರು.

ಇದರ ಭಾಗವಾಗಿ ಉತ್ತರ ಕನ್ನಡ ಜಿಲ್ಲೆಯ ಯಾಣ ಹಾಗೂ ಸಹಸ್ರಲಿಂಗದಲ್ಲಿ ಸಾರ್ವಜನಿಕ ವೈ–ಫೈ ಸೌಲಭ್ಯ ಆರಂಭಿಸಲಾಗಿದೆ ಎಂದು ಜಿಎನ್‌ಎ ಇಂಡಿಯಾ ಕಂಪನಿಯ ಸಿಇಒ ನಾಗರಾಜ ಮುನಿದಾಸಪ್ಪ ತಿಳಿಸಿದರು. ಈ ಕಂಪನಿಯು ಯೋಜನೆಯ ಅಡಿಯಲ್ಲಿ ವೈ–ಫೈ ಕೇಂದ್ರಗಳನ್ನು ಆರಂಭಿಸುತ್ತಿದೆ.

'ಆರಂಭಿಕ ಹೆಜ್ಜೆಯಾಗಿ ನಾವು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಯಾಣ ಹಾಗೂ ಸಹಸ್ರಲಿಂಗದಲ್ಲಿ ಈ ಸೌಲಭ್ಯ ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಇದನ್ನು ರಾಜ್ಯದ ಇನ್ನಷ್ಟು ಸ್ಥಳಗಳಿಗೆ ವಿಸ್ತರಿಸ ಲಿದ್ದೇವೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ, ಇಂಟರ್ನೆಟ್ ಇನ್ನೂ ತಲುಪಿಲ್ಲದ ಸ್ಥಳಗಳನ್ನು ಗುರುತಿಸಿ ಅಲ್ಲಿ ವೈ–ಫೈ ಸೌಲಭ್ಯ ಆರಂಭಿಸಲಾಗುವುದು' ಎಂದು ನಾಗರಾಜ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವೈ–ಫೈ ಸೌಲಭ್ಯ ಕಲ್ಪಿಸಲು ಜಿಎನ್‌ಎ ಕಂಪನಿಯು ಬಿಎಸ್‌ಎನ್‌ಎಲ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಸ್ಥಳಗಳಲ್ಲಿ ಇಂಟರ್ನೆಟ್ ಸೌಲಭ್ಯ ಇಲ್ಲವೆಂದಾದರೆ ಅಲ್ಲಿ ಯುಪಿಐ ಪಾವತಿಯಿಂದ ಆರಂಭಿಸಿ ಇಂಟರ್ನೆಟ್ ಆಧಾರಿಸಿದ ಯಾವ ಅನುಕೂಲಗಳೂ ಲಭ್ಯವಾಗುವುದಿಲ್ಲ. ಹೀಗಾಗಿ ಈ ಯೋಜನೆ ಆರಂಭಿಸಲಾಗಿದೆ ಎಂದು ನಾಗರಾಜ ಹೇಳಿದರು.

'ನಮ್ಮ ಭಾಗದ ಗ್ರಾಮಾಂತರ ಪ್ರದೇಶಗಳನ್ನು ಈ ಯೋಜನೆಯು ಇಂಟರ್ನೆಟ್ ಜಾಲದ ಜೊತೆ ಬೆಸೆಯುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಸೌಲಭ್ಯ ಸಿಗುವ ಪರಿಣಾಮವಾಗಿ ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುತ್ತದೆ' ಎಂದು ಹೆಗಡೆ ಹೇಳಿದರು.

ಕಡಿಮೆ ಬೆಲೆಯ ಫೋನ್‌ಗಳಲ್ಲಿ ಎ.ಐ ವೈಶಿಷ್ಟ್ಯ: ಸ್ಯಾಮ್‌ಸಂಗ್

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಆರಂಭಿಕ ಹಂತದ ಸ್ಮಾರ್ಟ್‌ಫೋನ್‌ಗಳಲ್ಲಿಯೂ ಎ.ಐ ತಂತ್ರಜ್ಞಾನದ ವೈಶಿಷ್ಟ್ಯಗಳು ಇರುವಂತೆ ಮಾಡಲಾಗುವುದು ಎಂದು ಸ್ಯಾಮ್‌ಸಂಗ್ ಹೇಳಿದೆ. ಈ ಮೂಲಕ ಎ.ಐ ತಂತ್ರಜ್ಞಾನವು ಎಲ್ಲರಿಗೂ ಲಭ್ಯವಾಗುವಂತೆ ಮಾಡುವ ಗುರಿಯನ್ನು ಕಂಪನಿ ಇರಿಸಿಕೊಂಡಿದೆ.

ಎ.ಐ ಆಧಾರಿತ ಫೋನ್‌ಗಳು ಮುಂದಿನ ದಿನಗಳಲ್ಲಿ ಸ್ಮಾರ್ಟ್‌ಫೋನ್ ವರ್ಗದಲ್ಲಿ ಹೆಚ್ಚಿನ ಪಾಲು ಹೊಂದಲಿವೆ ಎಂದು ಕಂಪನಿ ಭಾವಿಸಿರುವುದಾಗಿ ಸ್ಯಾಮ್‌ಸಂಗ್ ಇಂಡಿಯಾ ಕಂಪನಿಯ ಹಿರಿಯ ಉಪಾಧ್ಯಕ್ಷ ರಾಜು ಪುಲ್ಲನ್ ಹೇಳಿದ್ದಾರೆ.

ಸ್ಯಾಮ್‌ಸಂಗ್ ಕಂಪನಿಯು ಗ್ಯಾಲಕ್ಸಿ ಎ07 ಮಾದರಿಯನ್ನು ಭಾರತದ ಮಾರುಕಟ್ಟೆಗೆ ಈಚೆಗೆ ಬಿಡುಗಡೆ ಮಾಡಿದೆ. ಇದರ ಆರಂಭಿಕ ಬೆಲೆ ₹15 ಸಾವಿರ. ಬಳಕೆದಾರರ ನಿತ್ಯದ ಕೆಲವು ಕೆಲಸಗಳಿಗೆ ನೆರವಾಗಲು ಇದರಲ್ಲಿ ಎ.ಐ ಆಧಾರಿತ ವೈಶಿಷ್ಟ್ಯಗಳನ್ನು ನೀಡಲಾಗಿದೆ.

'ಈಗ ನಾವು ಎ.ಐ ಸೌಲಭ್ಯವನ್ನು ಆರಂಭಿಕ ಬೆಲೆ ಹಂತದ ಫೋನ್‌ಗಳಲ್ಲಿಯೂ ಒದಗಿಸಲಿದ್ದೇವೆ' ಎಂದು ಪುಲ್ಲನ್ ಹೇಳಿದ್ದಾರೆ. ಕೌಂಟರ್‌ಪಾಯಿಂಟ್ ಸಂಸ್ಥೆಯ ಬಳಿ ಇರುವ ದತ್ತಾಂಶದ ಪ್ರಕಾರ ಭಾರತದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಸ್ಯಾಮ್‌ಸಂಗ್ ಶೇ 13ರಷ್ಟು ಪಾಲು ಹೊಂದಿದೆ.

ಷೇರುಪೇಟೆ ಮಾಹಿತಿ: ವಿವರ ಬಹಿರಂಗಕ್ಕೆ ಸೆಬಿ ಸೂಚನೆ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಷೇರುಪೇಟೆಗೆ ಸಂಬಂಧಿಸಿದ ವಿಷಯವನ್ನು ಹಂಚಿಕೊಳ್ಳುವವರು ತಮ್ಮ ಸೆಬಿ ನೋಂದಣಿ ಹೆಸರು ಮತ್ತು ನೋಂದಣಿ ಸಂಖ್ಯೆಯನ್ನು ತಿಳಿಸುವಂತೆ ಎಲ್ಲ ಸಂಸ್ಥೆಗಳಿಗೆ, ಏಜೆಂಟ್‌ಗಳಿಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಸೂಚನೆ ನೀಡಿದೆ.

ಷೇರು ದಲ್ಲಾಳಿಗಳು, ಮ್ಯೂಚುವಲ್ ಫಂಡ್‌ಗಳು, ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳು (ಎಎಂಸಿ), ಹೂಡಿಕೆ ಸಲಹೆಗಾರರು, ಸಂಶೋಧನಾ ವಿಶ್ಲೇಷಕರು, ಪರ್ಯಾಯ ಹೂಡಿಕೆ ನಿಧಿ (ಎಐಎಫ್), ಪೋರ್ಟ್‌ಫೋಲಿಯೊ ನಿರ್ವಾಹಕರು ಮತ್ತು ಇತರೆ ಮಧ್ಯವರ್ತಿಗಳಿಗೆ ಈ ನಿಯಮ ಅನ್ವಯ ಆಗಲಿದೆ.

ಸಾಮಾಜಿಕ ಜಾಲತಾಣಗಳ ಬಳಕೆ ಹೆಚ್ಚುತ್ತಿದೆ. ಷೇರು ಮಾರುಕಟ್ಟೆಯ ಬಗ್ಗೆ ಅನಧಿಕೃತ ವ್ಯಕ್ತಿಗಳು ಪೋಸ್ಟ್ ಮಾಡುವ ವಿಷಯಗಳನ್ನು ಸೆಬಿ ನೋಂದಾಯಿತ ವ್ಯಕ್ತಿಗಳು ಪೋಸ್ಟ್ ಮಾಡಿದ ವಿಷಯಗಳಿಂದ ಪ್ರತ್ಯೇಕಿಸುವ ಅವಶ್ಯಕತೆಯಿದೆ ಎಂದು ಹೇಳಿದೆ.

ಈ ಹೊಸ ನಿಯಮಗಳು ಪಾರದರ್ಶಕತೆಯನ್ನು ಹೆಚ್ಚಿಸಲಿದ್ದು, ಹೂಡಿಕೆದಾರರನ್ನು ರಕ್ಷಿಸಲಿದೆ ಎಂದು ಹೇಳಿದೆ. ಈ ನಿಯಮ ಮೇ 1ರಿಂದ ಜಾರಿಗೆ ಬರಲಿದೆ.

ಗೋಯಲ್–ಲುಟ್ನಿಕ್ ಭೇಟಿ

ಅಮೆರಿಕದ ಸಚಿವರ ಜೊತೆ ವ್ಯಾಪಾರ ಒಪ್ಪಂದದ ಬಗ್ಗೆ ಚರ್ಚೆ



ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಮತ್ತು ಭಾರತದಲ್ಲಿನ ಅಮೆರಿಕದ ರಾಯಭಾರಿ ಸರ್ಗಿಯೊ ಗೋರ್ ಅವರ ಜೊತೆ ಮಾತುಕತೆ ನಡೆಸಿರುವುದಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಎರಡೂ ದೇಶಗಳ ನಡುವಿನ ವ್ಯಾಪಾರ ಸಂಬಂಧವನ್ನು ವಿಸ್ತರಿಸುವ ವಿಚಾರವಾಗಿ ಮಾತುಕತೆ ನಡೆದಿದೆ ಎಂದು ಗೋಯಲ್ ತಿಳಿಸಿದ್ದಾರೆ.

ಅವರಿಬ್ಬರ ಜೊತೆಗಿನ ಮಾತುಕತೆಯು ಬಹಳ ಫಲಪ್ರದವಾಗಿತ್ತು ಎಂದು ಗೋಯಲ್, ಸಾಮಾಜಿಕ ಜಾಲತಾಣಗಳ ಮೂಲಕ ತಿಳಿಸಿದ್ದಾರೆ.

ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಸಂಬಂಧಿಸಿದ ಕಡತವನ್ನು ಅಂತಿಮಗೊಳಿಸಲು ಎರಡೂ ದೇಶಗಳು ಯತ್ನಿಸುತ್ತಿರುವ ಸಂದರ್ಭದಲ್ಲಿ ಈ ಭೇಟಿ ಮಹತ್ವ ಪಡೆದಿದೆ.

ಭಾರತ ಮತ್ತು ಅಮೆರಿಕದ ಅಧಿಕಾರಿಗಳು ವ್ಯಾಪಾರ ಒಪ್ಪಂದದ ಕುರಿತ ಮಾತುಕತೆಗೆ ವಾಷಿಂಗ್ಟನ್‌ನಲ್ಲಿ ಈ ವಾರ ಸಭೆ ಸೇರಬೇಕಿತ್ತು. ಆದರೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಿದ ಪ್ರತಿಸುಂಕಗಳನ್ನು ಅಲ್ಲಿನ ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ ನಂತರದಲ್ಲಿ ಈ ಸಭೆ ಮುಂದೂಡಿಕೆ ಆಗಿದೆ.

ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾದ ನಂತರದಲ್ಲಿ ಅಮೆರಿಕವು ಎಲ್ಲ ದೇಶಗಳ ಮೇಲೆ 150 ದಿನಗಳ ಅವಧಿಗೆ ಅನ್ವಯವಾಗುವಂತೆ ಶೇ 10ರಷ್ಟು ಸುಂಕ ವಿಧಿಸಿದೆ. ಈ ಸುಂಕವನ್ನು ಶೇ 15ಕ್ಕೆ ಹೆಚ್ಚಿಸಲಾಗುತ್ತದೆ ಎಂದು ಟ್ರಂಪ್ ಅವರು ನಂತರ ಹೇಳಿದ್ದರಾದರೂ, ಅದರ ಕುರಿತಾಗಿ ಆದೇಶ ಆಗಿಲ್ಲ.

ಅಮೆರಿಕದಲ್ಲಿನ ಸುಂಕದ ವಿಚಾರವಾಗಿ ಸ್ಪಷ್ಟತೆ ಸಿಕ್ಕಿದ ನಂತರದಲ್ಲಿ ಭಾರತವು ಆ ದೇಶದ ಜೊತೆ ವ್ಯಾಪಾರ ಒಪ್ಪಂದ ಕುರಿತಾದ ಮಾತುಕತೆಯನ್ನು ಪುನರಾರಂಭಿಸಲಿದೆ ಎಂದು ಗೋಯಲ್ ಅವರು ಮಂಗಳವಾರ ಹೇಳಿದ್ದರು.

ಮುಂಬೈ ಧಾರಣೆ (ಶೇಂಗಾ)

26-02-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1740 (1740)
ಒಂದು ವಾರದ ಡೆಲಿವರಿ	1735 (1735)
ಪಾಮ್ ವಾರದ ಡೆಲಿವರಿ	1288 (1295)
ಸೂರ್ಯಕಾಂತಿ ಎಣ್ಣೆ ಕಚ್ಚಾ	1505 (1505)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,300 (1,58,500)
ಬೆಳ್ಳಿ ಕೆ.ಜಿಗೆ	2,61,500 (2,66,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿನ್ನದ ಬೆಲೆ ಮತ್ತಷ್ಟು ಹೆಚ್ಚಳ ಸಾಧ್ಯತೆ



ಮುಂಬೈ (ಪಿಟಿಐ): ಮುಂದಿನ ಒಂದು ವರ್ಷದಲ್ಲಿ 10 ಗ್ರಾಂ ಚಿನ್ನದ ದರವು ₹1.85 ಲಕ್ಷಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ (ಎಫ್‌ಒಎಫ್‌ಎಸ್‌ಎಲ್) ವರದಿ ಅಂದಾಜಿಸಿದೆ.

ಡಾಲರ್ ಮೌಲ್ಯದಲ್ಲಿನ ಇಳಿಕೆಯಿಂದ ಚಿನ್ನವು ದರವು ಏರಿಕೆಯ ಹಾದಿಯಲ್ಲಿದೆ ಎಂದು ಹೇಳಿದೆ.

'ಪೂರ್ವ ಯುರೋಪ್, ಪಶ್ಚಿಮ ಏಷ್ಯಾ ಮತ್ತು ಏಷ್ಯಾದಲ್ಲಿ ಹೆಚ್ಚುತ್ತಿರುವ ರಾಜಕೀಯ ಬಿಕ್ಕಟ್ಟು, ವ್ಯಾಪಾರದಲ್ಲಿನ ಬಿಕ್ಕಟ್ಟು ಮತ್ತು ಸುಂಕ ಸಂಬಂಧಿತ ಅಡಚಣೆಗಳು ಹಣದುಬ್ಬರ ಮತ್ತು ಕರೆನ್ಸಿ ಚಂಚಲತೆ ಹೆಚ್ಚಿಸಿವೆ. ಈ ಬೆಳವಣಿಗೆಗಳು ಅನಿಶ್ಚಿತ ಸಮಯದಲ್ಲಿ ಚಿನ್ನವನ್ನು ವಿಶ್ವಾಸಾರ್ಹ ಹೂಡಿಕೆಯಾಗಿಸಿವೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಸರಕುಗಳ ಸಂಶೋಧನಾ ಮುಖ್ಯಸ್ಥ ನವನೀತ್ ದಮಾನಿ ಹೇಳಿದ್ದಾರೆ.

ಬೆಳ್ಳಿ ದರ ₹7,400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,300 ಕಡಿಮೆಯಾಗಿ, ₹1,62,900ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹7,400 ಇಳಿಕೆಯಾಗಿ ₹2,70,500ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಭಾರತ–ಇಸ್ರೇಲ್: ಒಪ್ಪಂದಗಳಿಗೆ ಸಹಿ

ಒಂದನೇ ಪುಟದಿಂದ...

ಭಾರತ– ಇಸ್ರೇಲ್‌ಗೆ ಪರಸ್ಪರ ಉಪಯುಕ್ತವಾಗುವ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಶೀಘ್ರದಲ್ಲಿಯೇ ಅಂತಿಮ ರೂಪ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಇದೇ ವೇಳೆ ಹೇಳಿದರು.

ಗಾಜಾಪಟ್ಟಿಯಲ್ಲಿ ಶಾಂತಿ ಸ್ಥಾಪನೆಯಾಬೇಕು ಎನ್ನುವುದನ್ನು ಬಲವಾಗಿ ಪ್ರತಿಪಾದಿಸಿದ ಮೋದಿ ಅವರು, ಮಾನವೀಯತೆಯು ಎಂದಿಗೂ ಸಂಘರ್ಷದ ಬಲಿಪಶುವಾಗಬಾರದು ಎಂದರು.

ತಂತ್ರಜ್ಞಾನಗಳ ವರ್ಗಾವಣೆ ಚೌಕಟ್ಟಿನಡಿ ಜಂಟಿ ಅಭಿವೃದ್ಧಿ ಮತ್ತು ಸೇನಾ ಹಾರ್ಡ್‌ವೇರ್‌ನ ಜಂಟಿ ಉತ್ಪಾದನೆಗೆ ಒತ್ತು ನೀಡಲಾಗುವುದು. ಈ ಮೂಲಕ ಎರಡೂ ದೇಶಗಳ ನಡುವಿನ ನಿಕಟ ರಕ್ಷಣಾ ಪಾಲುದಾರಿಕೆಯನ್ನು ವಿಸ್ತರಿಸಲಾಗುವುದು ಎಂದರು.

ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಮತ್ತು ನಿರ್ಣಾಯಕ ಖನಿಜಗಳ ಕ್ಷೇತ್ರಗಳಲ್ಲಿನ ಸಹಕಾರಕ್ಕೆ ಹೊಸ ವೇಗ ನೀಡಲು ಉಭಯ ದೇಶಗಳು ಸಮ್ಮತಿಸಿವೆ. ಇದಕ್ಕಾಗಿ ಉಭಯ ದೇಶಗಳ ನಡುವೆ ಅತ್ಯಾಧುನಿಕ ತಂತ್ರಜ್ಞಾನಗಳ ಪಾಲುದಾರಿಕೆಯನ್ನು ಸ್ಥಾಪಿಸಲಾಗುವುದು ಎಂದು ಮೋದಿ ಘೋಷಿಸಿದರು. ಇಸ್ರೇಲ್‌ನಲ್ಲಿ ಯುಪಿಐ ಬಳಕೆ ಕುರಿತು ಒಪ್ಪಂದ ಮಾಡಿಕೊಂಡಿರುವುದು ಸಂತಸವಾಗಿದೆ ಎಂದು ಅವರು ಹೇಳಿದರು.

ಭಯೋತ್ಪಾದನೆಗೆ ಸ್ಥಳವಿಲ್ಲ: 'ಜಗತ್ತಿನಲ್ಲಿ ಭಯೋತ್ಪಾದನೆಗೆ ಯಾವುದೇ ಸ್ಥಳವಿಲ್ಲ' ಎಂಬುದು ಭಾರತ ಮತ್ತು ಇಸ್ರೇಲ್‌ನ ದೃಷ್ಟಿಕೋನವಾಗಿದೆ. ಭಯೋತ್ಪಾದನೆ ಮತ್ತು ಅದರ ಬೆಂಬಲಿಗರನ್ನು ಎದುರಿಸುವಲ್ಲಿ ಎರಡೂ ದೇಶಗಳು ಹೆಗಲಿಗೆ ಹೆಗಲು ಕೊಟ್ಟು ಕಾರ್ಯ ನಿರ್ವಹಿಸಲಿವೆ ಎಂದು ತಿಳಿಸಿದರು.

ಭಾರತ–ಪಶ್ಚಿಮ ಏಷ್ಯಾ ಯುರೋಪ್ ಆರ್ಥಿಕ ಕಾರಿಡಾರ್ (ಐಎಂಇಸಿ) ಅನುಷ್ಠಾನ, ಭಾರತ–ಇಸ್ರೇಲ್– ಯುಎಇ–ಅಮೆರಿಕ ನಡುವಿನ ಸಹಕಾರ ವೃದ್ಧಿಯ ಕುರಿತೂ ಚರ್ಚೆ ನಡೆದಿವೆ ಎಂದು ಮೂಲಗಳು ತಿಳಿಸಿವೆ.

'ಮೋದಿ ಸ್ನೇಹಿತನಿಗಿಂತ ಹೆಚ್ಚು'

ಒಂದನೇ ಪುಟದಿಂದ...

ಹಮಾಸ್ ನಡೆಸಿದ ಮಾರಕ ದಾಳಿಯನ್ನು ಆರಂಭದಲ್ಲಿಯೇ ಖಂಡಿಸಿದ ವಿಶ್ವದ ನಾಯಕರಲ್ಲಿ ಮೋದಿ ಕೂಡ ಒಬ್ಬರು. ಈ ದಾಳಿಯಲ್ಲಿ 1,200 ಇಸ್ರೇಲಿಗಳು ಮೃತಪಟ್ಟಿದ್ದರೆ, ಸುಮಾರು 250 ಮಂದಿಯನ್ನು ಅಪಹರಿಸಲಾಗಿತ್ತು.

'ನನ್ನ ಪ್ರೀತಿಯ ಸ್ನೇಹಿತ ನರೇಂದ್ರ ಅವರ ಭೇಟಿಯಿಂದ ನಾನು ಭಾವುಕನಾಗಿದ್ದೇನೆ. ನೀವು ಇಸ್ರೇಲ್‌ನ ಉತ್ತಮ ಸ್ನೇಹಿತ. ಜಾಗತಿಕ ವೇದಿಕೆಯಲ್ಲಿ ಉತ್ತಮ ನಾಯಕ. ನೀವು ನನಗೆ ಸ್ನೇಹಿತನಿಗಿಂತಲೂ ಹೆಚ್ಚು, ಒಬ್ಬ ಸಹೋದರ' ಎಂದು ನೆತನ್ಯಾಹು ಹೇಳಿದರು.

'ಭಾರತ ಒಂದು ದೈತ್ಯ ದೇಶ, ಅಗಾಧ ಶಕ್ತಿ ಹೊಂದಿದೆ. ಅದು ತನ್ನ ಶಕ್ತಿಯೊಂದಿಗೆ ಇಸ್ರೇಲ್‌ಗೆ ಬೆಂಬಲ ನೀಡಿದೆ' ಎಂದರು. 'ಭಾರತವು ಬಾಹ್ಯಾಕಾಶದ ಸೂಪರ್ ಪವರ್ ದೇಶವಾಗಿದ್ದು, ಏಷ್ಯಾದ ಹುಲಿಯಾಗಿದೆ' ಎಂದು ಅವರು ಶ್ಲಾಘಿಸಿದರು.

ಇಸ್ರೇಲ್ ಅಧ್ಯಕ್ಷರಿಗೆ ಭಾರತದ ಆಹ್ವಾನ

ಇಸ್ರೇಲ್ ಅಧ್ಯಕ್ಷ ಐಸ್ಯಾಕ್ ಹೆರ್ಜೋಗ್ ಅವರನ್ನು ಗುರುವಾರ ಭೇಟಿಯಾಗಿ ಮಾತುಕತೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಅಧ್ಯಕ್ಷರನ್ನು ಭಾರತಕ್ಕೆ ಆಹ್ವಾನಿಸಿದರು.

'ಭಾರತಕ್ಕೆ ಭೇಟಿ ನೀಡುವಂತೆ ನಿಮ್ಮನ್ನು ಹೃತ್ಪೂರ್ವಕವಾಗಿ ಆಹ್ವಾನಿಸುತ್ತೇನೆ. ನಿಮ್ಮ ಭೇಟಿಯನ್ನು ದೆಹಲಿಗೆ ಸೀಮಿತಗೊಳಿಸದೇ, ಭಾರತದ ಇತರ ಭಾಗಗಳಲ್ಲೂ ಪ್ರಯಾಣಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳಿ' ಎಂದು ಮೋದಿ ಹೇಳಿದರು.

ಉಭಯ ದೇಶಗಳ ನಡುವೆ ಶಿಕ್ಷಣ, ನವೋದ್ಯಮ, ತಂತ್ರಜ್ಞಾನ ಮತ್ತು ಸಂಪರ್ಕ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸುವ ಕುರಿತು ಇಬ್ಬರೂ ನಾಯಕರು ಈ ವೇಳೆ ಚರ್ಚಿಸಿದರು.

ಸಂಘರ್ಷದ ಸಂದರ್ಭದಲ್ಲಿ ಇಸ್ರೇಲ್‌ಗೆ ಬೆಂಬಲ ನೀಡಿದ್ದಕ್ಕಾಗಿ ಹೆರ್ಜೋಗ್ ಅವರು ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು. ಇದೇ ವೇಳೆ ಅಧ್ಯಕ್ಷರ ಉದ್ಯಾನದಲ್ಲಿ ಭಾರತದ ಪ್ರಧಾನಿ ಸಸಿ ನೆಟ್ಟರು.

ಇಸ್ರೇಲ್ ಕಂಪನಿಗಳಿಗೆ ಆಹ್ವಾನ

ಭಾರತದಲ್ಲಿ ಹೂಡಿಕೆ ಮಾಡಿ, ದೇಶದ ಪ್ರತಿಭಾವಂತ ಯುವ ಜನರೊಂದಿಗೆ ಕೆಲಸ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್‌ನ ತಂತ್ರಜ್ಞಾನ ಕಂಪನಿಗಳಿಗೆ ಆಹ್ವಾನ ನೀಡಿದರು.

ಕೃತಕ ಬುದ್ಧಿಮತ್ತೆ, ಆರೋಗ್ಯ ರಕ್ಷಣೆ, ಕೃಷಿ ಕ್ಷೇತ್ರಗಳಲ್ಲಿನ ನಾವೀನ್ಯ ತಂತ್ರಜ್ಞಾನಗಳ ಪ್ರದರ್ಶನಕ್ಕೆ ನೆತನ್ಯಾಹು ಜತೆಗೆ ಭೇಟಿ ನೀಡಿದ್ದ ಮೋದಿ ಅವರು, 'ತಂತ್ರಜ್ಞಾನ ಪ್ರಪಂಚದ ವಿಶೇಷ ನಾವೀನ್ಯತೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಯದ್ ವಶೇಮ್ ಸ್ಮಾರಕಕ್ಕೆ ಮೋದಿ ಗೌರವ

ಜೆರುಸಲೇಮ್(ಪಿಟಿಐ): ಇಸ್ರೇಲ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಅವರು ಇಲ್ಲಿನ ಯದ್ ವಶೇಮ್ ಸ್ಮಾರಕಕ್ಕೆ ಭೇಟಿ ನೀಡಿ, ಹತ್ಯಾಕಾಂಡ ಸಂತ್ರಸ್ತರಿಗೆ ಗೌರವ ಸಲ್ಲಿಸಿದರು.

ಮೋದಿ ಅವರು ಸ್ಮಾರಕಕ್ಕೆ ಹೂಗುಚ್ಛ ಹಾಗೂ ಮೃತರ ಗೌರವಾರ್ಥ ಶಿಲೆಯೊಂದನ್ನು ಇರಿಸಿ, ನಮಿಸಿದರು. ಪ್ರಧಾನಿ ಬೆಂಜಮಿನ್ ನೆತನ್ಯಾಹು ಈ ವೇಳೆ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಉಭಯ ನಾಯಕರು, ಹತ್ಯಾಕಾಂಡದಲ್ಲಿ ಹತರಾದವರ ಹೆಸರುಗಳಿರುವ 'ಹಾಲ್ ಆಫ್ ನೇಮ್ಸ್'ಗೆ ಭೇಟಿ ನೀಡಿದರು.

ಅಡಿಕೆ ಧಾರಣೆ

ಚಿತ್ರದುರ್ಗ				ಶಿರಸಿ	
ಆಪಿ	55419-55829	ರಾಶಿ	39489-57410	ಬೆಟ್ಟೆ	41298-53429
ಬೆಟ್ಟೆ	37949-38399	ಸಿಪ್ಪೆಗೋಟು	10199-24499	ಬಿಳಿಗೋಟು	28009-40200
ಕೆಂಪುಗೋಟು	31609-32010	**ಶಿವಮೊಗ್ಗ**		ಚಾಲಿ	44099-49199
ರಾಶಿ	54939-55389	ಬೆಟ್ಟೆ	50599-65100	ಕೆಂಪುಗೋಟು	32611-39681
ಕುಮಟಾ		ಗೊರಬಲು	26019-41499	ರಾಶಿ	51299-55349
ಹೊಸಚಾಲಿ	38122-48689	ರಾಶಿ	48009-57659	**ಯಲ್ಲಾಪುರ**	
ಚಾಲಿ	42099-50399	ಸರಕು	51659-96396	ಆಪಿ	63890-64001
ಚಿಪ್ಪು	17491-42669	**ಸಿದ್ದಾಪುರ**		ಬಿಳಿಗೋಟು	22612-38699
ಕೋಕ	14000-43069	ಬಿಳಿಗೋಟು	27899-38889	ಚಾಲಿ	38691-50978
ಸಾಗರ		ಚಾಲಿ	41599-48239	ಕೋಕ	15010-35312
ಬಿಳಿಗೋಟು	21127-37111	ಕೋಕ	22699-36099	ಕೆಂಪುಗೋಟು	22012-40809
ಚಾಲಿ	34827-45229	ಹಳೆಚಾಲಿ	42229-49099	ರಾಶಿ	49699-60399
ಕೋಕ	18227-37500	ಕೆಂಪುಗೋಟು	27719-36111	ತಟ್ಟಿಬೆಟ್ಟೆ	37000-52359
ಕೆಂಪುಗೋಟು	31989-40599	ರಾಶಿ	48999-54699		
		ತಟ್ಟಿಬೆಟ್ಟೆ	38699-51689		

ಕೆನಡಾ ಪ್ರಧಾನಿ ಭಾರತಕ್ಕೆ ಇಂದು ಭೇಟಿ



ಮಾರ್ಕ್ ಕಾರ್ನಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ನಡುವಿನ ಮಾತುಕತೆ ಮಾರ್ಚ್ 2ರಂದು ನಡೆಯಲಿದ್ದು, ಉಭಯ ರಾಷ್ಟ್ರಗಳ ನಡುವಿನ ಭವಿಷ್ಯದ ಪಾಲುದಾರಿಕೆಯನ್ನು ಮುನ್ನಡೆಸಲು ಅವಕಾಶ ಒದಗಿಸುತ್ತದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ.

ಕಾರ್ನಿ ಅವರು ಶುಕ್ರವಾರದಿಂದ ನಾಲ್ಕು ದಿನಗಳವರೆಗೆ ಭಾರತ ಭೇಟಿ ಹಮ್ಮಿಕೊಂಡಿದ್ದಾರೆ. ಪ್ರಧಾನಿಯಾಗಿ ಇದು ಅವರ ಮೊದಲ ಭಾರತದ ಪ್ರವಾಸವಾಗಿದೆ.

ಕೆನಡಾ ಪ್ರಧಾನಿಯು ಮೊದಲು ಮುಂಬೈಗೆ ಭೇಟಿ ನೀಡಲಿದ್ದಾರೆ. ಅಲ್ಲಿ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಭಾರತ ಮತ್ತು ಕೆನಡಾದ ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳ ನಾಯಕರು, ಹಣಕಾಸು ತಜ್ಞರ ಜತೆ ಸಂವಾದ ನಡೆಸಲಿದ್ದಾರೆ. ನಂತರ, ಭಾನುವಾರ ನವದೆಹಲಿಗೆ ತೆರಳಲಿದ್ದಾರೆ.

ಸೋಮವಾರ ಮೋದಿ ಮತ್ತು ಕಾರ್ನಿ ಅವರು ಮಾತುಕತೆ ನಡೆಸಲಿದ್ದಾರೆ. ಈ ವೇಳೆ, ಮುಖ್ಯವಾಗಿ ವ್ಯಾಪಾರ, ಇಂಧನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಕುರಿತು ಚರ್ಚೆ ನಡೆಯಲಿದೆ. ಬಳಿಕ, 'ಭಾರತ–ಕೆನಡಾ ಸಿಇಒಗಳ ಫೋರಂ'ನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಕಾಲೇಜಿನಲ್ಲಿ ಪೊಲೀಸರಿಗೆ ಧ್ಯಾನದ ಪಾಠ

ಬೊಜ್ಜು ಕರಗಿಸಲು ಪಾಠ

ಒಂದನೇ ಪುಟದಿಂದ...

ವೈದ್ಯರು ಆರಂಭದಲ್ಲಿ ಪೊಲೀಸ್ ಅಧಿಕಾರಿ, ಸಿಬ್ಬಂದಿಯನ್ನು ಭೇಟಿಯಾಗಿ ಅವರೊಂದಿಗೆ ಆಪ್ತ ಸಮಾಲೋಚನೆ ನಡೆಸಿದ್ದು, ಚಿಕಿತ್ಸೆಯ ಉದ್ದೇಶ ಮತ್ತು ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ನಂತರ ತಪಾಸಣೆ ನಡೆಸಿ ಚಿಕಿತ್ಸೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮುಂಜಾನೆ ಒಂದು ಗಂಟೆ ಯೋಗಾಭ್ಯಾಸದಲ್ಲಿ ಸೂರ್ಯ ನಮಸ್ಕಾರ, ಆಳವಾದ ವಿಶ್ರಾಂತಿ ತಂತ್ರಗಳ ಅಭ್ಯಾಸದ ಜೊತೆಗೆ, ಪ್ರಕೃತಿ ಚಿಕಿತ್ಸೆಯ ಭಾಗವಾಗಿ ಜಲ ಚಿಕಿತ್ಸೆ, ಅಂಡರ್ ವಾಟರ್ ಮಸಾಜ್, ಎನಿಮಾ, ಮಡ್ ಪ್ಯಾಕ್, ಡಯಟ್ ಥೆರಪಿ ಮಾಡಿಸುತ್ತಿದ್ದಾರೆ.

ಬೊಜ್ಜು ಕರಗಲು ಆಹಾರ ಪದ್ಧತಿಗಳನ್ನು ರೂಪಿಸಿ, ಹಸಿ ತರಕಾರಿ ಸೇವನೆಯಂತಹ ಪಥ್ಯ ಮಾಡಿಸಲಾಗುತ್ತಿದೆ. ಡೆಕ್ಸಾ ಫ್ಯಾಟ್ ಸ್ಕ್ಯಾನ್ ಮಾಡಿ ಪೊಲೀಸರಲ್ಲಿ ಆಗುವ ಬದಲಾವಣೆಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ.

'ಶಿಬಿರದಲ್ಲಿ ಭಾಗವಹಿಸಿದ ಬಳಿಕ ಉಲ್ಲಾಸ ಹೆಚ್ಚಿದೆ. ಆಯಾಸ ಕಡಿಮೆಯಾಗಿದೆ. ದೇಹ ಹಗುರವಾದ ಭಾವನೆ ಮೂಡಿದೆ. ಕೆಲಸದ ಸಮಯದಲ್ಲಿ ಹೆಚ್ಚು ಉತ್ಸಾಹದಿಂದ ಇರಲು ಸಾಧ್ಯವಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

> **ಕೊಬ್ಬಿನ ಪ್ರಮಾಣ ಹೆಚ್ಚಿರುವ 30 ಪೊಲೀಸ್ ಸಿಬ್ಬಂದಿಗೆ 10 ದಿನ ತರಬೇತಿ ನೀಡಲಾಗುತ್ತಿದೆ. ತರಬೇತಿ ಮುಗಿದ ಬಳಿಕ ಪರಿಣಾಮವನ್ನು ಅವಲೋಕಿಸುತ್ತೇವೆ**
> **ಕೆ.ಎಸ್.ಸುಂದರ್‌ರಾಜ್,**
> ಮೈಸೂರು ನಗರ ಡಿಸಿಪಿ

ಉದಯಪುರದಲ್ಲಿ ಹಸೆಮಣೆಗೆ ಏರಿದ ನಟ-ನಟಿ • ಅಭಿಮಾನಿಗಳ ಶುಭ ಹಾರೈಕೆ

ದಾಂಪತ್ಯಕ್ಕೆ ಕಾಲಿಟ್ಟ ವಿಜಯ್–ರಶ್ಮಿಕಾ ಜೋಡಿ

ಉದಯಪುರ (ಪಿಟಿಐ): ಇಲ್ಲಿನ ಹೊರವಲಯದಲ್ಲಿರುವ ಐಷಾರಾಮಿ ಹೋಟೆಲ್‌ನಲ್ಲಿ ಕುಟುಂಬ ಸದಸ್ಯರು ಮತ್ತು ಆಪ್ತೇಷ್ಟರು ಭಾಗವಹಿಸಿದ್ದ ಖಾಸಗಿ ಸಮಾರಂಭದಲ್ಲಿ ನಟರಾದ ವಿಜಯ್ ದೇವರಕೊಂಡ (36) ಮತ್ತು ರಶ್ಮಿಕಾ ಮಂದಣ್ಣ (29) ಗುರುವಾರ ವಿವಾಹವಾದರು.

ಈ ಜನಪ್ರಿಯ ಜೋಡಿಯು ತಮ್ಮ ವಿವಾಹದ ಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ಅಭಿಮಾನಿಗಳಿಂದ ಹಾರೈಕೆಗಳ ಮಹಾಪೂರವೇ ಹರಿದುಬಂದಿದೆ.

ಮದುವೆ ಉಡುಗೆಯಾಗಿ ರಶ್ಮಿಕಾ ಮಂದಣ್ಣ ಸಾಂಪ್ರದಾಯಿಕ ಚಿನ್ನಾಭರಣಗಳೊಂದಿಗೆ ಕೆಂಪು ಸೀರೆಯನ್ನು ಧರಿಸಿದ್ದರು. ವಿಜಯ್ ದೇವರಕೊಂಡ ಬಿಳಿ ಬಣ್ಣದ ಧೋತಿ ಮತ್ತು ಕೆಂಪು ಶಾಲು ಧರಿಸಿದ್ದರು.


'ಅವಳು ನನ್ನೊಂದಿಗಿದ್ದರೆ ನನ್ನ ಜೀವನ ಇನ್ನಷ್ಟು ಸುಂದರವಾಗಿರುತ್ತದೆ ಅಂತ ಅನಿಸುತ್ತಿತ್ತು. ಅವಳು ಎದುರಿಗಿದ್ದರೆ ಊಟ ಇನ್ನಷ್ಟು ರುಚಿಯಾಗಿರುತ್ತದೆ, ವ್ಯಾಯಾಮ ಮಾಡುವಾಗಲೂ ಮೋಜು, ತುಂಟತನ ಇರುತ್ತದೆ. ನಾನೆಲ್ಲೇ ಇರಲಿ, ಅವಳಿದ್ದರೆ ಅಲ್ಲಿ ಕುಟುಂಬ ಮತ್ತು ಶಾಂತತೆಯ ವಾತಾವರಣ ಇರುತ್ತದೆ. ಹೌದು, ನಾನು ನನ್ನ ಆತ್ಮೀಯ ಸ್ನೇಹಿತೆಯನ್ನೇ ಮಡದಿಯಾಗಿ ಪಡೆದುಕೊಂಡೆ' ಎಂದು ವಿಜಯ್ ದೇವರಕೊಂಡ ಇನ್‌ಸ್ಟಾಗ್ರಾಂ ಖಾತೆಗೆ ಅಪ್‌ಲೋಡ್ ಮಾಡಿರುವ ತಮ್ಮ ವಿವಾಹದ ಚಿತ್ರಗಳಿಗೆ ಶೀರ್ಷಿಕೆ ನೀಡಿದ್ದಾರೆ.

'ಈಗ ನಿಮಗೆ ನನ್ನ ಪತಿಯನ್ನು ಪರಿಚಯಿಸುತ್ತಿದ್ದೇನೆ, ಅವರೇ, ಡಿಯರ್ ಕಾಮ್ರೇಡ್, ಕೊ–ಸ್ಟಾರ್, ಮಿಸ್ಟರ್ ವಿಜಯ್ ದೇವರಕೊಂಡ..! ಎಂದು ರಶ್ಮಿಕಾ ಮಂದಣ್ಣ ವಿವಾಹದ ಚಿತ್ರಗಳನ್ನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ನಿಜವಾದ ಪ್ರೀತಿ ಮತ್ತು ಶಾಂತಿ ಹೇಗಿರುತ್ತದೆ ಎಂದು ನನಗೆ ಕಲಿಸಿದ, ದೊಡ್ಡ ಕನಸು ಕಾಣುವುದು ಸರಿ ಎಂದು ಹೇಳುತ್ತಿದ್ದ ವಿಜಯ್‌ನನ್ನು ಪಡೆದ ನಾನು ನಿಜಕ್ಕೂ ಧನ್ಯಗಳು. ನಿಮ್ಮ ಪತ್ನಿ ಎಂದು ಕರೆಯಿಸಿಕೊಳ್ಳಲು ಸಂತೋಷವಾಗುತ್ತಿದೆ. ನಿಮ್ಮ ಬಗ್ಗೆ ನನಗಿರುವ ಭಾವನೆಗಳನ್ನು ವರ್ಣಿಸಲು ಪದಗಳೇ ಸಾಲದು' ಎಂದು ರಶ್ಮಿಕಾ ಹೇಳಿದ್ದಾರೆ.

ವಿಜಯ್ ಮತ್ತು ರಶ್ಮಿಕಾ ಎರಡೂ ಕಡೆಯ ಕಟುಂಬಗಳ ಸಂಪ್ರದಾಯಗಳನ್ನು ಅನುಸರಿಸಿ ವಿವಾಹ ನಡೆಯಿತು. ವಿವಾಹ ಸಮಾರಂಭವು ಮೂರು ದಿನ ನಡೆಯಲಿದೆ. ವಿವಾಹ ನಡೆದ ಸ್ಥಳ ಮತ್ತು ಸುತ್ತಮುತ್ತ ಭಾರಿ ಭದ್ರತೆ ಕೈಗೊಳ್ಳಲಾಗಿತ್ತು. ಬೌನ್ಸರ್‌ಗಳು ಮತ್ತು ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ದೇವರಕೊಂಡ ಮತ್ತು ರಶ್ಮಿಕಾ ಜೋಡಿಯು ತೆಲುಗು ಚಿತ್ರ 'ಗೀತ ಗೋವಿಂದಂ' ಮತ್ತು 'ಡಿಯರ್ ಕಾಮ್ರೇಡ್'ನಲ್ಲಿ ಒಟ್ಟಿಗೆ ಕೆಲಸ ಮಾಡಿದ್ದಾರೆ.



ನಟರಾದ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಜೋಡಿಯು ರಾಜಸ್ಥಾನದ ಉದಯಪುರದ ಹೋಟೆಲ್‌ನಲ್ಲಿ ಗುರುವಾರ ವಿವಾಹವಾದರು – ಪಿಟಿಐ ಚಿತ್ರ

‘ತೀರ್ಪು ಬರೆಯುವುದೂ ಹೊರಗುತ್ತಿಗೆಗೆ’

ನ್ಯಾಯಮಂಡಳಿಗಳ ಕಾರ್ಯವೈಖರಿಗೆ ‘ಸುಪ್ರೀಂ’ ಅಸಮಾಧಾನ



ನವದೆಹಲಿ (ಪಿಟಿಐ): ದೇಶದಲ್ಲಿನ ಕೆಲ ನ್ಯಾಯಮಂಡಳಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ‘ಇವು ಯಾವುದೇ ರೀತಿಯ ಉತ್ತರದಾಯಿತ್ವದ ಇಲ್ಲದ ‘ಗೊಂದಲದ ಗೂಡುಗಳು’ ಹಾಗೂ ‘ಹೊರೆ’ಯಾಗಿ ಪರಿಣಮಿಸಿವೆ’ ಎಂದು ಗುರುವಾರ ಚಾಟಿ ಬೀಸಿದೆ.

‘ಹಣಕಾಸು ವಿವಾದಗಳಿಗೆ ಸಂಬಂಧಿಸಿದ ನ್ಯಾಯಮಂಡಳಿಯೊಂದರ ಸದಸ್ಯರು ತೀರ್ಪು ಬರೆಯುವ ಕಾರ್ಯವನ್ನು ಕೂಡ ಹೊರಗುತ್ತಿಗೆ ನೀಡಿದ್ದಾರೆ’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಅವರು ಇದ್ದ ಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮಂಡಳಿ ಅಧ್ಯಕ್ಷ ಹಾಗೂ ಸದಸ್ಯರ ಅಧಿಕಾರಾವಧಿ ವಿಸ್ತರಿಸುವಂತೆ ಕೋರಿ ಸಲ್ಲಿಸಲಾದ ಮೇಲ್ಮನವಿಯ ವಿಚಾರಣೆ ವೇಳೆ, ಪೀಠ ಈ ಮಾತು ಹೇಳಿದೆ.

ನ್ಯಾಯಮಂಡಳಿಗಳಿಗೆ ಸದಸ್ಯರ ನೇಮಕ ಹಾಗೂ ಅವರ ಅಧಿಕಾರಾವಧಿಗೆ ಸಂಬಂಧಿಸಿ ‘ನ್ಯಾಯಮಂಡಳಿ ಸುಧಾರಣೆಗಳ ಕಾಯ್ದೆ– 2021’ರಲ್ಲಿನ ಕೆಲ ಅವಕಾಶಗಳನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ನವೆಂಬರ್‌ನಲ್ಲಿ ರದ್ದುಗೊಳಿಸಿತ್ತು.

‘ನ್ಯಾಯ ಮಂಡಳಿಗಳನ್ನು ಕೇಂದ್ರ ಸರ್ಕಾರವೇ ರಚಿಸಿದೆ. ಯಾರಿಗೂ ಉತ್ತರದಾಯಿತ್ವ ಹೊಂದಿಲ್ಲ ಎಂಬಂತೆ ಅವು ಕಾರ್ಯನಿರ್ವಹಿಸುತ್ತಿವೆ. ಅವು ನಿಮಗೆ ಹಾಗೂ ನ್ಯಾಯಾಲಯಗಳಿಗೂ ತಲೆನೋವಾಗಿವೆ’ ಎಂದು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರನ್ನು ಉದ್ದೇಶಿಸಿ ಪೀಠ ಹೇಳಿತು.

‘ಈಗಿನ ವ್ಯವಸ್ಥೆ ಪ್ರಕಾರ, ಟೆಲಿಕಾಂ ವಿವಾದಗಳ ಪರಿಹಾರ ಮತ್ತು ಮೇಲ್ಮನವಿ ನ್ಯಾಯಮಂಡಳಿಯ (ಟಿಡಿಎಸ್‌ಎಟಿ) ಅಧ್ಯಕ್ಷರ ಅಧಿಕಾರ ಕೊನೆಗೊಂಡಾಗ ಅದರ ಸದಸ್ಯರೊಬ್ಬರು ನ್ಯಾಯ ಮಂಡಳಿಯ ಹಂಗಾಮಿ ಅಧ್ಯಕ್ಷರಾಗುತ್ತಾರೆ. ಹೀಗಾಗಿ, ಖಾಲಿ ಇರುವ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವುದಕ್ಕೆ ಹಾಗೂ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕು’ ಎಂದು ಪೀಠ ಸೂಚಿಸಿತು.

‘ಅರಾವಳಿ: ತಜ್ಞರ ಹೆಸರು ಸೂಚಿಸಿ’

ನವದೆಹಲಿ (ಪಿಟಿಐ): ಅರಾವಳಿ ಪರ್ವತ ಶ್ರೇಣಿಗಳ ವ್ಯಾಖ್ಯಾನ ಯಾವ ರೀತಿ ಇರಬೇಕು ಎಂಬ ಕುರಿತು ಪರಿಶೀಲನೆ ನಡೆಸುವ ಸಮಿತಿಗೆ ವಿಷಯ ತಜ್ಞರ ಹೆಸರು ಸೂಚಿಸುವಂತೆ ಕೇಂದ್ರ ಪರಿಸರ ಸಚಿವಾಲಯ ಮತ್ತು ಇತರ ಭಾಗೀದಾರರನ್ನು ಸುಪ್ರೀಂ ಕೋರ್ಟ್ ಗುರುವಾರ ಕೇಳಿಕೊಂಡಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು, ‘ಈ ಪ್ರದೇಶದಲ್ಲಿ ಕಾನೂನುಬದ್ಧ ಗಣಿಗಾರಿಕೆಯನ್ನು ಮಾತ್ರ ಅನುಮತಿಸಲಾಗುವುದು’ ಎಂದು ಹೇಳಿತು.

ಅರಾವಳಿ ಪರ್ವತ ಶ್ರೇಣಿಯ ವ್ಯಾಖ್ಯಾನ ಬದಲಿಸಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಹೊಸ ವ್ಯಾಖ್ಯಾನ ಹೇಗಿರಬೇಕು ಎಂಬುದನ್ನು ನಿರ್ಧರಿಸಲು ತಜ್ಞರ ಸಮಿತಿ ರಚಿಸುವುದಾಗಿ ಜನವರಿ 21ರಂದು ಹೇಳಿತ್ತು.

ಗುರುವಾರ ವಿಚಾರಣೆ ವೇಳೆ ಕಕ್ಷಿದಾರರ ಪರ ಹಾಜರಾದ ಹಿರಿಯ ವಕೀಲ ಮುಕುಲ್ ರೋಹಟಗಿ, ‘ಗಣಿಗಾರಿಕೆ ನಡೆಸುವ ಕಂಪನಿಯು ಗಣಿಗಾರಿಕೆ ಪರವಾನಗಿಯನ್ನು ಹೊಂದಿದ್ದು, ಸುದೀರ್ಘ ಹೋರಾಟದ ನಂತರ ಈ ಪ್ರದೇಶದಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದುಕೊಂಡಿದೆ. ಇದೀಗ, ನ್ಯಾಯಾಲಯದ ಆದೇಶದಿಂದಾಗಿ ಗಣಿಗಾರಿಕೆ ಸ್ಥಗಿತಗೊಂಡಿದೆ’ ಎಂದು ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, ‘ನಾವು ಕಾನೂನುಬದ್ಧ ಗಣಿಗಾರಿಕೆಗೆ ಮಾತ್ರ ಅವಕಾಶ ನೀಡುತ್ತೇವೆ. ಹೊಸ ವ್ಯಾಖ್ಯಾನ ಏನು ಎಂಬುದನ್ನು ತಜ್ಞರ ಸಮಿತಿ ನಮಗೆ ತಿಳಿಸಲಿ. ಆ ಬಳಿಕವಷ್ಟೇ ನಾವು ಎಲ್ಲ ಅಡೆತಡೆಗಳನ್ನು ದಾಟಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದರು.

ಈ ಪ್ರಕರಣದ ವಿಚಾರಣೆಯಲ್ಲಿ ತನಗೆ ಸಹಾಯ ಮಾಡುವಂತೆ ವಕೀಲ ಜಯ್ ಚೀಮಾ ಅವರನ್ನು ಪೀಠ ಕೇಳಿಕೊಂಡಿತು. ಹಿರಿಯ ವಕೀಲ ಕೆ. ಪರಮೇಶ್ವರ ಅವರು ಈಗಾಗಲೇ ಅಮಿಕಸ್ ಕ್ಯೂರಿಯಾಗಿ ಪೀಠಕ್ಕೆ ನೆರವಾಗುತ್ತಿದ್ದಾರೆ.

‘ಸಮಿತಿ ರಚಿಸಲಿಕ್ಕಾಗಿ ವಿಷಯ ತಜ್ಞರ ಹೆಸರನ್ನು ಅವರ ವ್ಯಕ್ತಿ ಪರಿಚಯದೊಂದಿಗೆ ನೀಡಲು ಪರಿಸರ ಸಚಿವಾಲಯವನ್ನು ಕೇಳಿಕೊಳ್ಳುತ್ತೇವೆ. ಕೆಲವು ತಜ್ಞರ ಹೆಸರು ಸೂಚಿಸುವಂತೆ ಹಿರಿಯ ವಕೀಲರನ್ನೂ ಕೋರಲಾಗಿದೆ’ ಎಂದು ಪೀಠ ಹೇಳಿತು.

‘ಪರವಾನಗಿ ಹೊಂದಿರುವ ಕಂಪನಿಗಳು ನಡೆಸುತ್ತಿದ್ದ ಗಣಿಗಾರಿಕೆ ಚಟುವಟಿಕೆಗಳೂ ಸ್ಥಗಿತಗೊಂಡಿದೆ ಎಂಬುದರ ಅರಿವು ನಮಗಿದೆ. ಕೆಲವೊಂದು ಪ್ರಾಥಮಿಕ ಸಮಸ್ಯೆಗಳನ್ನು ಹಂತಹಂತವಾಗಿ ಬಗೆಹರಿಸುವವರೆಗೂ ಯಥಾಸ್ಥಿತಿ ಕಾಯ್ದುಕೊಳ್ಳಬೇಕಾಗುತ್ತದೆ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ಚಿಟಿಕೆ ಸುದ್ದಿ

10 ಕೋಟಿ ದಾಟಿದ ಮೋದಿ ಇನ್‌ಸ್ಟಾಗ್ರಾಮ್ ಫಾಲೋವರ್ಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಇನ್‌ಸ್ಟಾಗ್ರಾಮ್ ಫಾಲೋವರ್ಸ್‌ಗಳ ಸಂಖ್ಯೆ 10 ಕೋಟಿ ದಾಟಿದೆ.

ಈ ಮೂಲಕ ಅವರು ಇಷ್ಟು ದೊಡ್ಡ ಸಂಖ್ಯೆಯ ಫಾಲೋವರ್ಸ್‌ಗಳನ್ನು ಹೊಂದಿರುವ ವಿಶ್ವದ ಮೊದಲ ನಾಯಕ ಮತ್ತು ರಾಜಕಾರಣಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

2014ರಲ್ಲಿ ಮೋದಿ ಅವರು ಇನ್‌ಸ್ಟಾಗ್ರಾಮ್ ಖಾತೆ ಆರಂಭಿಸಿದ್ದರು. ಜಾಗತಿಕ ನಾಯಕರಿಗೆ ಹೋಲಿಸಿದರೆ ಕಳೆದ 10 ವರ್ಷಗಳಲ್ಲಿ ಮೋದಿ ಅವರ ಖಾತೆಯು ಅತಿ ಹೆಚ್ಚು ಬಳಕೆಯಾದ ಡಿಜಿಟಲ್ ವೇದಿಕೆಯಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ವಿಶ್ವದ ಐವರು ಪ್ರಭಾವಿ ನಾಯಕರ ಫಾಲೋವರ್ಸ್‌ಗಿಂತಲೂ ಮೋದಿ ಅವರ ಫಾಲೋವರ್ಸ್ ಹೆಚ್ಚಿದ್ದಾರೆ. ಎರಡನೇ ಸ್ಥಾನದಲ್ಲಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಾಮಾಜಿಕ ಮಾಧ್ಯಮ ವೇದಿಕೆಗಿಂತಲೂ (4.32 ಕೋಟಿ ಫಾಲೋವರ್ಸ್) ಮೋದಿ ಅವರ ಇನ್‌ಸ್ಟಾಗ್ರಾಮ್ ಫಾಲೋವರ್ಸ್‌ಗಳ ಸಂಖ್ಯೆ ಎರಡುಪಟ್ಟು ಹೆಚ್ಚಿದೆ.

ಇಂಡೊನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂತೋ (1.50 ಕೋಟಿ), ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೋ ಲೂಲಾ ಡಾ ಸಿಲ್ವಾ (1.44 ಕೋಟಿ), ಟರ್ಕಿಯ ಅಧ್ಯಕ್ಷ ರಜಬ್ ತಯ್ಯಬ್ ಇರ್ದುಗನ್ (1.16 ಕೋಟಿ) ಮತ್ತು ಅರ್ಜೆಂಟಿನಾ ಅಧ್ಯಕ್ಷ ಜೇವಿಯರ್ ಮಾಯಿಲಿ ಅವರು 64 ಲಕ್ಷ ಫಾಲೋವರ್ಸ್‌ಗಳನ್ನು ಹೊಂದಿದ್ದಾರೆ.

ಭಾರತದಲ್ಲಿ ಮೋದಿ ಅವರ ನಂತರ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸುಮಾರು 1.61 ಕೋಟಿ ಫಾಲೋವರ್ಸ್ ಹೊಂದಿದ್ದಾರೆ. ಆನಂತರದ ಸ್ಥಾನದಲ್ಲಿರುವ ರಾಹುಲ್ ಗಾಂಧಿ ಅವರಿಗೆ ಅಂದಾಜು 1.26 ಕೋಟಿ ಫಾಲೋವರ್ಸ್‌ಗಳಿದ್ದಾರೆ.

ಚಿದಂಬರಂ ವಿಚಾರಣೆ: ಇ.ಡಿಗೆ ಅನುಮತಿ

ನವದೆಹಲಿ: ಏರ್‌ಸೆಲ್- ಮ್ಯಾಕ್ಸಿಸ್‌ಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಹಣಕಾಸು ಸಚಿವ ಪಿ ಚಿದಂಬರಂ ಅವರನ್ನು ವಿಚಾರಣೆಗೆ ಒಳಪಡಿಸಲು ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ.

ಅದರ ಬೆನ್ನಲ್ಲೇ ಈ ಪ್ರಕರಣದ ತ್ವರಿತ ವಿಚಾರಣೆ ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ವಿಶೇಷ ನ್ಯಾಯಾಲಯದ ಮೊರೆ ಹೋಗಿದೆ.

‘ಚಿದಂಬರಂ ಅವರನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಲಾಗಿತ್ತು. ಸರ್ಕಾರವು ಫೆಬ್ರುವರಿ 10ರಂದು ಅನುಮತಿ ನೀಡಿದೆ. ವಿಚಾರಣೆಗೆ ಅನುಮತಿ ನೀಡಿರುವ ಆದೇಶವನ್ನು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ವಿಚಾರಣೆ ತ್ವರಿತಗೊಳಿಸುವಂತೆ ಕೋರಲಾಗಿದೆ’ ಎಂದು ಇ.ಡಿ ತಿಳಿಸಿದೆ.

‘ಇ.ಡಿಯ ಪ್ರಾಸಿಕ್ಯೂಷನ್ ದೂರನ್ನು ವಿಶೇಷ ನ್ಯಾಯಾಲಯವು ಈ ಹಿಂದೆಯೇ ಪರಿಗಣನೆಗೆ ತೆಗೆದುಕೊಂಡಿತ್ತು. ಆದರೆ ಕೆಲವು ರೀತಿಯ ಪ್ರಕರಣಗಳಲ್ಲಿ ಸಂಬಂಧಪಟ್ಟವರ ವಿಚಾರಣೆ ನಡೆಸಲು ಸರ್ಕಾರದ ಅನುಮತಿ ಪಡೆಯುವುದನ್ನು ಸುಪ್ರೀಂ ಕೋರ್ಟ್ ಕಡ್ಡಾಯಗೊಳಿಸಿದೆ. ಆದ್ದರಿಂದ ಈ ಪ್ರಕರಣದ ವಿಚಾರಣೆಯಲ್ಲಿ ವಿಳಂಬವಾಗಿದೆ’ ಎಂದು ಹೇಳಿದೆ.

₹ 1,500 ಕೋಟಿ ಸೈಬರ್ ವಂಚನೆ ಮತ್ತೆ ಮೂವರ ಸೆರೆ

ರಾಜ್‌ಕೋಟ್ (ಪಿಟಿಐ): ₹ 1,500 ಕೋಟಿ ಮೊತ್ತದ ಸೈಬರ್ ವಂಚನೆ ಜಾಲಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ರಾಜ್‌ಕೋಟ್ ಜಿಲ್ಲೆಯಲ್ಲಿ ಮೂವರನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಬಂಧಿತರ ಸಂಖ್ಯೆ 9ಕ್ಕೆ ಏರಿದೆ ಎಂದು ಪೊಲೀಸ್ ಅಧಿಕಾರಿಗಳು ಗುರುವಾರ ತಿಳಿಸಸ ಸಿದ್ದಾರೆ.

ತೆಲಂಗಾಣದ ಅದಿಲುದ್ದೀನ್ ಮೊಹಮ್ಮದ್, ರಾಜ್‌ಕೋಟ್‌ನ ಮಿಹಿರ್ ರಂಗಾನಿ ಮತ್ತು ಹಿರೇನ್ ಲಿಂಬಾಸಿಯಾ ಬಂಧಿತರು. ಆರೋಪಿ ಅದಿಲುದ್ದೀನ್ ಹಣವನ್ನು ನಕಲಿ ಖಾತೆಗಳಿಗೆ ವರ್ಗಾಯಿಸುವ ಮತ್ತು ಆ ಹಣವನ್ನು ‘ಅಂಗಾಡಿಯಾ’ (ಗುಜರಾತ್ ಮತ್ತು ಮುಂಬೈ ನಡುವೆ ನಡೆಯುವ ಸಾಂಪ್ರದಾಯಿಕ ಕೊರಿಯರ್ ವ್ಯವಸ್ಥೆ) ಮೂಲಕ ವಾಪಸ್ ಪಡೆದುಕೊಳ್ಳುತ್ತಿದ್ದ. ಈತನನ್ನು ಬುಧವಾರ ಬಂಧಿಸಲಾಗಿದೆ’ ಎಂದು ಎಸ್‌ಪಿ ವಿಜಯ್ ಗುರ್ಜಾರ್ ತಿಳಿಸಿದ್ದಾರೆ.

‘ಇತರೆ ಇಬ್ಬರು ಬ್ಯಾಂಕ್ ಖಾತೆಗಳನ್ನು ಒದಗಿಸುವ, ಹಣ ತೆಗೆಸಿ ಕೊಡುವ ಮತ್ತು ಹಣ ವರ್ಗಾಯಿಸಲು ಸಹಕರಿಸುತ್ತಿದ್ದರು. ಫೆಬ್ರುವರಿ 13ರಂದು 6 ಮಂದಿಯನ್ನು ಬಂಧಿಸಲಾಗಿತ್ತು’ ಎಂದು ಅವರು ಹೇಳಿದ್ದಾರೆ. ‘ಜಿಎಸ್‌ಟಿ ಮತ್ತು ಟಿಡಿಎಸ್‌ನಿಂದ ತಪ್ಪಿಸಿಕೊಳ್ಳಲು ಇವರು ಎಪಿಎಂಸಿ ಬ್ಯಾಂಕ್ ಖಾತೆಗಳನ್ನು ಬಳಸುತ್ತಿದ್ದರು. ಖಾಸಗಿ ಬ್ಯಾಂಕ್‌ಗಳಲ್ಲಿ ಎಪಿಎಂಸಿಯ ಮೂಲಕ 15 ಖಾತೆಗಳನ್ನು ತೆರೆಸಿದ್ದರು’ ಎಂದರು.

‘ದಿ ಕೇರಳ ಸ್ಟೋರಿ–2’ ಚಿತ್ರ ಬಿಡುಗಡೆಗೆ ಹೈಕೋರ್ಟ್ ತಡೆ

ಕೊಚ್ಚಿ (ಪಿಟಿಐ): ‘ದಿ ಕೇರಳ ಸ್ಟೋರಿ–2’ ಸಿನಿಮಾ ಬಿಡುಗಡೆಗೆ ಕೇರಳ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ.

ಸೆನ್ಸಾರ್ ಮಂಡಳಿಯು ಚಲನಚಿತ್ರವನ್ನು ಪ್ರಮಾಣೀಕರಿಸುವಾಗ ಮಾರ್ಗಸೂಚಿಗಳನ್ನು ಮನದಲ್ಲಿ ಇಟ್ಟುಕೊಂಡಿಲ್ಲ ಎಂದು ಅದು ಬೇಸರ ವ್ಯಕ್ತಪಡಿಸಿದೆ.

ಸಿನಿಮಾ ಬಿಡುಗಡೆ ವಿರೋಧಿಸಿ ಸಲ್ಲಿಕೆಯಾದ ಎರಡು ಅರ್ಜಿಗಳ ಕುರಿತು ನ್ಯಾಯಮೂರ್ತಿ ಬೆಚು ಕುರಿಯನ್ ಥಾಮಸ್ ಅವರು ಆದೇಶ ಹೊರಡಿಸಿದರು.

‘ಇದೇ 27ರಂದು ಚಲನಚಿತ್ರ ಬಿಡುಗಡೆಗೆ ಚಿತ್ರ ತಂಡ ನಿರ್ಧರಿಸಿತ್ತು. ಚಲನಚಿತ್ರವು ಸಾಮಾಜಿಕ ಸಾಮರಸ್ಯಕ್ಕೆ ಭಂಗ ತರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ಮಾರ್ಗಸೂಚಿಗಳನ್ನು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಪಾಲಿಸಿಲ್ಲ. ಬದಲಿಗೆ ಅದನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿದೆ’ ಎಂದು ನ್ಯಾಯಮೂರ್ತಿ ಆದೇಶದಲ್ಲಿ ಹೇಳಿದ್ದಾರೆ.

ಅಶಾಂತಿ ಸೃಷ್ಟಿಸುವ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕದಡುವ, ಸಾಮಾಜಿಕ ಸಾಮರಸ್ಯ ಹಾಳುಮಾಡುವ ಪ್ರವೃತ್ತಿಯನ್ನು ಹೊಂದಿರುವ ವಿಷಯದ ಪ್ರಸರಣವು ಭಾರತ ಸಂವಿಧಾನದ 19(1)(ಎ) ವಿಧಿಯಡಿ ಪ್ರತಿಪಾದಿಸಲಾದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ನ್ಯಾಯಮೂರ್ತಿ ತಿಳಿಸಿದ್ದಾರೆ.

‘ದಿ ಕೇರಳ ಸ್ಟೋರಿ–2’ ಚಿತ್ರವನ್ನು ಫೆ.26ರಿಂದ 13 ದಿನಗಳವರೆಗೆ ಬಿಡುಗಡೆ ಮಾಡುವಂತಿಲ್ಲ. ಚಿತ್ರಕ್ಕೆ ನೀಡಲಾದ ಪ್ರಮಾಣಪತ್ರದ ವಿರುದ್ಧ ಅರ್ಜಿದಾರರಾದ ಶ್ರೀದೇವ್ ನಂಬೂದರಿ ಅವರು ಸಲ್ಲಿಸಿರುವ ಪರಿಷ್ಕರಣ ಅರ್ಜಿಯನ್ನು ಎರಡು ವಾರಗಳ ಒಳಗೆ ಪರಿಶೀಲಿಸಿ ಆದೇಶ ಹೊರಡಿಸುವಂತೆ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಮಣಿಪುರ: ಸಿಂಗ್ ತನಿಖಾ ಸಮಿತಿ ಅಧ್ಯಕ್ಷ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಲಬೀರ್ ಸಿಂಗ್ ಚೌಹಾಣ್ ಅವರನ್ನು, ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ಕುರಿತು ತನಿಖೆ ನಡೆಸುತ್ತಿರುವ ಸಮಿತಿಯ ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರವು ನೇಮಕ ಮಾಡಿದೆ.

‘ಇದೀಗ ಸಮಿತಿಯ ಅಧ್ಯಕ್ಷರಾಗಿರುವ ಗುವಾಹಟಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಅಜಯ್ ಲಂಬಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಫೆ.28ರಿಂದ ಈ ಅಧ್ಯಕ್ಷ ಸ್ಥಾನ ತೆರವಾಗಲಿದ್ದು, ಚೌಹಾಣ್ ಅವರನ್ನು ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿ ಆದೇಶಿಸಲಾಗಿದ್ದು, ಮಾ.1ರಂದು ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ’ ಎಂದು ಗೃಹ ವ್ಯವಹಾರಗಳ ಸಚಿವಾಲಯವು ಗುರುವಾರ ಪ್ರಕಟಿಸಿದೆ.

ವಿವಾದಿತ ಪಠ್ಯ ಪುಸ್ತಕ ನಿಷೇಧ

ಒಂದನೇ ಪುಟದಿಂದ...

ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಪಂಚೋಲಿ ಈ ಪೀಠದಲ್ಲಿದ್ದಾರೆ.

ನ್ಯಾಯಾಂಗಕ್ಕೆ ಸಂಬಂಧಿಸಿದ ಅಧ್ಯಾಯ ಕುರಿತಂತೆ ಎನ್‌ಸಿಇಆರ್‌ಟಿ ಬುಧವಾರ ಪೀಠಕ್ಕೆ ಅರುಹಿದ್ದ ವಿಚಾರವನ್ನು ಪ್ರಸ್ತಾಪಿಸಿದ ಸಿಜೆಐ ಸೂರ್ಯ ಕಾಂತ್, ‘ಪರಿಷತ್ತು ನೀಡಿರುವ ಈ ಮಾಹಿತಿಯೇ ದೊಡ್ಡದಾದ ಪಿತೂರಿ ಬಗ್ಗೆ ಹೇಳುತ್ತದೆ’ ಎಂದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಶಿಕ್ಷಣ ಸಚಿವಾಲಯ ಪರ ಬೇಷರತ್ ಕ್ಷಮೆಯಾಚಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, ‘ಎನ್‌ಸಿಇಆರ್‌ಟಿ ನೀಡಿರುವ ವಿವರಣೆಯಲ್ಲಿ ಕ್ಷಮೆ ಕೋರಿರುವ ಕುರಿತು ಒಂದೇ ಒಂದು ಶಬ್ದವೂ ಇಲ್ಲ. ಪಠ್ಯಪುಸ್ತಕದಲ್ಲಿನ ಅಧ್ಯಾಯವನ್ನು ಸಮರ್ಥಿಸುವ ಪ್ರಯತ್ನ ಮಾಡಿದೆ’ ಎಂದು ಹೇಳಿ, ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿದರು.

‘ಆಘಾತ ತಂದಿತ್ತು’: ನ್ಯಾಯಾಂಗ ಕುರಿತ ಅಧ್ಯಾಯವನ್ನು ಒಳಗೊಂಡ ಪಠ್ಯಪುಸ್ತಕವನ್ನು ಬಿಡುಗಡೆ ಮಾಡಿರುವ ಬಗ್ಗೆ ಪತ್ರಿಕೆಯೊಂದು ಲೇಖನ ಪ್ರಕಟಿಸಿರುವುದು ಆಘಾತ ತಂದಿತ್ತು ಎಂದು ಪೀಠ ಹೇಳಿದೆ.

‘ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನವನ್ನು ಎನ್‌ಸಿಇಆರ್‌ಟಿಯೇ ಬಿಡುಗಡೆ ಮಾಡಿದೆಯೆ ಎಂಬ ಬಗ್ಗೆ ಪರಿಶೀಲನೆ ನಡೆಸುವಂತೆ ನ್ಯಾಯಾಲಯದ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಲಾಗಿದೆ’ ಎಂದೂ ಹೇಳಿದೆ.

‘ಬೇಜವಾಬ್ದಾರಿ, ಅಜಾಗರೂಕತೆಯಿಂದ ಹಾಗೂ ಅವಹೇಳನಕಾರಿ ರೀತಿಯಲ್ಲಿ ಪಠ್ಯಪುಸ್ತಕ ರಚಿಸಿದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಬದಲು, ಎನ್‌ಸಿಇಆರ್‌ಟಿ ನಿರ್ದೇಶಕ ಪಠ್ಯಪುಸ್ತಕದಲ್ಲಿನ ವಿಷಯವನ್ನು ಸಮರ್ಥಿಸಿ ಪ್ರತಿಕ್ರಿಯೆ ಸಲ್ಲಿಸಿದ್ದಾರೆ’ ಎಂದು ಪೀಠ ಕಿಡಿಕಾರಿತು.

‘ಪಠ್ಯಪುಸ್ತಕ ಮರುರಚನೆ’

ಒಂದನೇ ಪುಟದಿಂದ...

‘ಕಣ್ತಪ್ಪಿನಿಂದಾಗಿ, ಈ ಅಧ್ಯಾಯದಲ್ಲಿ ಕೆಲ ಅಸಮರ್ಪಕ ಸಂಗತಿಗಳು ಹಾಗೂ ದೋಷಗಳು ನುಸುಳಿರುವುದು ಕಂಡುಬಂದಿದೆ’ ಎಂದು ಪರಿಷತ್ತಿನ ಅಧಿಕಾರಿಯೊಬ್ಬರು ಹೇಳಿದ್ದಾರೆ. ‘ಸಂವಿಧಾನ ಕುರಿತ ಅರಿವನ್ನು ಹೆಚ್ಚಿಸುವುದು, ಪ್ರಜಾತಾಂತ್ರಿಕ ಭಾಗೀದಾರಿಕೆ ಬಗ್ಗೆ ವಿದ್ಯಾರ್ಥಿಗಳಲ್ಲಿ ತಿಳಿವಳಿಕೆ ಮೂಡಿಸುವುದೇ ಹೊಸ ಪುಸ್ತಕಗಳ ಉದ್ದೇಶವಾಗಿದೆ. ನ್ಯಾಯಾಂಗ ಸೇರಿ ಯಾವುದೇ ಸಾಂವಿಧಾನಿಕ ಸಂಸ್ಥೆಯ ಅಧಿಕಾರ ಪ್ರಶ್ನಿಸುವುದಾಗಲಿ ಅಥವಾ ಅವಹೇಳನ ಮಾಡುವುದಾಗಲಿ ಪರಿಷತ್ತಿನ ಉದ್ದೇಶವಲ್ಲ’ ಎಂದೂ ತಿಳಿಸಿದ್ದಾರೆ.

ಹೊಣೆ ನಿಗದಿಗೆ ಮೋದಿ ಸೂಚನೆ

ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಪುಸ್ತಕದಲ್ಲಿನ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಅಧ್ಯಾಯವು ವಿವಾದಕ್ಕೀಡಾದ ಬೆನ್ನಲ್ಲೇ, ಈ ವಿಚಾರದಲ್ಲಿ ಸಂಬಂಧಪಟ್ಟವರ ವಿರುದ್ಧ ಹೊಣೆಗಾರಿಕೆ ನಿಗದಿ ಮಾಡಿ ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ. ಈ ಸಂಬಂಧ ಶಿಕ್ಷಣ ಸಚಿವಾಲಯಕ್ಕೆ ನಿರ್ದೇಶನ ನೀಡಿದ್ದಾರೆ ಎಂದು ತಿಳಿದು ಬಂದಿದೆ.

> ಕಳೆದ ದಶಕದಿಂದ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳ ಪರಿಷ್ಕರಣೆ ನಡೆಸುತ್ತಿದೆ. ಇದು ಆರ್‌ಎಸ್‌ಎಸ್ ಬೆಂಬಲಿತ ದುರುದ್ದೇಶಪೂರಿತ ಕ್ರಮವಾಗಿದೆ. ಈ ಕುರಿತು ಸಮಗ್ರ ತನಿಖೆ ಅಗತ್ಯ
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಇಂತಹ ಪಿತೂರಿಗೆ ಕಾರಣರಾದವರನ್ನು ಪತ್ತೆ ಮಾಡುವುದು ನ್ಯಾಯಾಂಗ ವ್ಯವಸ್ಥೆಯ ಮುಖ್ಯಸ್ಥನಾದ ನನ್ನ ಕರ್ತವ್ಯ. ಈ ಬಗ್ಗೆ ಸಮಗ್ರ ತನಿಖೆ ಅಗತ್ಯ ಹಾಗೂ ತಪ್ಪಿತಸ್ಥರ ತಲೆದಂಡ ಆಗಲೇಬೇಕು
> **ಸೂರ್ಯ ಕಾಂತ್,** ಮುಖ್ಯ ನ್ಯಾಯಮೂರ್ತಿ, ಸುಪ್ರೀಂ ಕೋರ್ಟ್

ನ್ಯಾಯಾಂಗದ ಬಗ್ಗೆ ಅಪಾರ ಗೌರವ: ಪ್ರಧಾನ್

ಜೆಮ್‌ಶೆಡ್‌ಪುರ: ಎನ್‌ಸಿಇಆರ್‌ಟಿ 8ನೇ ತರಗತಿ ಪಠ್ಯಪುಸ್ತಕದಲ್ಲಿ ‘ನ್ಯಾಯಾಂಗದಲ್ಲಿ ಭ್ರಷ್ಟಾಚಾರ’ ಕುರಿತ ಅಧ್ಯಾಯದ ಬಗ್ಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಈ ವಿವಾದಾತ್ಮಕ ಭಾಗ ಸಿದ್ಧಪಡಿಸಿದವರ ವಿರುದ್ಧ ಹೊಣೆಗಾರಿಕೆ ನಿಗದಿಪಡಿಸಿ, ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ನ್ಯಾಯಾಂಗದ ಬಗ್ಗೆ ಸರ್ಕಾರಕ್ಕೆ ಅಪಾರ ಗೌರವ ಇದೆ. ಅದಕ್ಕೆ ಅಗೌರವ ತೋರುವ ಯಾವುದೇ ಉದ್ದೇಶವನ್ನೂ ಹೊಂದಿಲ್ಲ’ ಎಂದು ಹೇಳಿದ್ದಾರೆ.

‘ಈ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು. ಈ ವಿಚಾರ ಗಮನಕ್ಕೆ ಬಂದ ತಕ್ಷಣವೇ ಪಠ್ಯ ಪುಸ್ತಕಗಳ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಹೇಳಿದ್ದಾರೆ.

ಹೋಳಿ ಸಂಭ್ರಮ...

ಪಿಟಿಐ ಚಿತ್ರ



ಹೋಳಿ ಹಬ್ಬ ಸಮೀಪಿಸುತ್ತಿರುವಂತೆ ಸಂಭ್ರಮ ಹೆಚ್ಚುತ್ತಿದ್ದು ಪಶ್ಚಿಮ ಬಂಗಾಳದ ನಾದಿಯಾದಲ್ಲಿ ಮಹಿಳೆಯರು ಬಣ್ಣಗಳಲ್ಲಿ ಮಿಂದೆದ್ದ ದೃಶ್ಯ ಗುರುವಾರ ಕಂಡುಬಂತು

ಕಾರ್ಮಿಕರ ಪ್ರತಿಭಟನೆ ವೇಳೆ ಹಿಂಸಾಚಾರ

ಅಹಮದಾಬಾದ್: ವೇತನ ಹೆಚ್ಚಿಸಬೇಕು, 12 ಗಂಟೆಗಳ ಕೆಲಸದ ಅವಧಿಯನ್ನು 8 ಗಂಟೆಗೆ ತಗ್ಗಿಸಬೇಕು ಎಂದು ಆಗ್ರಹಿಸಿ, ಸೂರತ್ ಸಮೀಪದ ಹಜೀರಾ ಕೈಗಾರಿಕಾ ಪ್ರದೇಶದಲ್ಲಿರುವ ಎಲ್‌ಆ್ಯಂಡ್ ಟಿ ಕಂಪನಿಯ ಉಕ್ಕು ತಯಾರಿಕಾ ಘಟಕದ ನೂರಾರು ಕಾರ್ಮಿಕರು ಗುರುವಾರ ನಡೆಸಿದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತು.

ಪ್ರತಿಭಟನಾಕಾರರು ಕಾರೊಂದಕ್ಕೆ ಬೆಂಕಿ ಹಚ್ಚಿ, ಹಲವು ವಾಹನಗಳನ್ನು ಹಾನಿಗೊಳಿಸಿದರು. ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಸಿಡಿಸಿ ಪ್ರತಿಭಟನಾಕಾರರನ್ನು ಚದುರಿಸಿದರು. ಹಲವು ಕಾರ್ಮಿಕರಿಗೆ ಗಾಯಗಳಾಗಿವೆ. ಪ್ರತಿಭಟನೆಯಲ್ಲಿ ತೊಡಗಿದ್ದ 20ಕ್ಕೂ ಹೆಚ್ಚು ಕಾರ್ಮಿಕರನ್ನು ಪೊಲೀಸರು ಬಂಧಿಸಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಿಸುವ ಪ್ರಕ್ರಿಯೆ ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ.

ಘಟನೆಗೆ ಕಾರಣವೇನು: ಉಕ್ಕು ಘಟಕದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ ಬಹುತೇಕರು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಒಡಿಶಾ ರಾಜ್ಯಗಳ ವಲಸೆ ಕಾರ್ಮಿಕರಾಗಿದ್ದಾರೆ. ಕಂಪನಿಯ ಭದ್ರತಾ ಸಿಬ್ಬಂದಿ ಕಾರ್ಮಿಕರೊಂದಿಗೆ ವಾಗ್ವಾದ ನಡೆಸಿ ಕೆಲವರನ್ನು ಥಳಿಸಿದರು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಮೆರವಣಿಗೆ ನಡೆಸಲು ಮುಂದಾದಾರು. ಭದ್ರತಾ ಸಿಬ್ಬಂದಿ ಮತ್ತೆ ಹಲ್ಲೆ ನಡೆಸಲು ಮುಂದಾದಾಗ ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತು ಎಂದು ಕಾರ್ಮಿಕರು ಹೇಳಿದ್ದಾರೆ. 12 ಗಂಟೆ ಕೆಲಸ ಮಾಡಿದರೆ ಕಾರ್ಮಿಕರಿಗೆ ಕೇವಲ ₹600ರಿಂದ ₹700 ವೇತನ ಪಾವತಿಸಲಾಗುತ್ತದೆ. ವೇತನವನ್ನು ಪರಿಷ್ಕರಣೆ ಮಾಡಬೇಕು ಎಂದು ಕಾರ್ಮಿಕರು ಒತ್ತಾಯಿಸಿದರು.

ಹಜೀರಾ ಕೈಗಾರಿಕಾ ಪ್ರದೇಶ ಸೂರತ್‌ನಿಂದ 25 ಕಿ.ಮೀ ದೂರದಲ್ಲಿದೆ. ಆರ್ಸೆಲರ್ ಮಿತ್ತಲ್ ಮತ್ತು ಜಪಾನಿನ ನಿಪ್ಪಾನ್ ಸ್ಟೀಲ್ ಕಂಪನಿಯ ಸಹಭಾಗಿತ್ವದ ಉಕ್ಕು ತಯಾರಿಕಾ ಘಟಕ ಇದಾಗಿದೆ. ‘ಕಾರ್ಮಿಕರು ವಾಹನಗಳಿಗೆ ಬೆಂಕಿ ಹಚ್ಚಿ, ಕಲ್ಲು ತೂರಾಟ ಆರಂಭಿಸಿದಾಗ ಪರಿಸ್ಥಿತಿ ನಿಯಂತ್ರಿಸಲು ಲಾಠಿ ಪ್ರಹಾರ, ಅಶ್ರುವಾಯು ಸಿಡಿಸಲಾಯಿತು’ ಎಂದು ಸೂರತ್‌ನ ಡಿಸಿಪಿ ಶೈಫಾಲಿ ಬರ್ವಾಲ್ ತಿಳಿಸಿದರು.

ರೈತರನ್ನು ಸಂಕಷ್ಟಕ್ಕೆ ತಳ್ಳಿದ ಪ್ರಧಾನಿ: ರಾಹುಲ್ ಗಾಂಧಿ

‘ಎಪ್‌ಸ್ಟೈನ್ ಫೈಲ್ಸ್‌ಗೆ ಹೆದರಿ ಒಪ್ಪಂದ’

ಕಣ್ಣೂರು (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ‘ಎಪ್‌ಸ್ಟೈನ್ ಫೈಲ್ಸ್’ ಬಳಸಿ ಪ್ರಧಾನಿ ಮೋದಿ ಅವರಿಗೆ ಬೆದರಿಕೆ ಹಾಕಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡಿದ್ದಾರೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪಿಸಿದ್ದಾರೆ.



ರಾಹುಲ್ ಗಾಂಧಿ

ಕೇರಳದ ಪೆರವೂರಿನಲ್ಲಿ ರೈತರ ಸಮಾವೇಶ ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ ಅವರು, ‘ರೈತರು ಭಾರತದ ಅಡಿಪಾಯ ಎನ್ನುವುದನ್ನು ಅರ್ಥ ಮಾಡಿಕೊಳ್ಳದೆ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿ ರೈತರನ್ನು ಸಂಕಷ್ಟಕ್ಕೆ ತಳ್ಳಿದೆ’ ಎಂದರು.

ಪ್ರಧಾನಿ ವಿರುದ್ಧ ಎರಡು ಅಸ್ತ್ರ: ‘ಪ್ರಧಾನಿ ಖೆಡ್ಡಕ್ಕೆ ಬಿದ್ದ ಎರಡು ವಿಚಾರಗಳನ್ನು ನಾನು ಪ್ರಸ್ತಾಪಿಸುತ್ತೇನೆ ಎನ್ನುವ ಕಾರಣಕ್ಕಾಗಿಯೇ ಸಂಸತ್ತಿನಲ್ಲಿ ನನಗೆ ಮಾತನಾಡಲು ಅವಕಾಶ ನೀಡಲಿಲ್ಲ’ ಎಂದು ರಾಹುಲ್ ಗಾಂಧಿ ಆರೋಪಿಸಿದರು.

‘35 ಲಕ್ಷ ಪುಟಗಳ ಎಪ್‌ಸ್ಟೈನ್ ಫೈಲ್ಸ್ ನಾನು ಪ್ರಸ್ತಾಪಿಸಲಿದ್ದ ಮೊದಲ ವಿಚಾರ. ಇದರಲ್ಲಿ ಭಾರತದ ಪ್ರಧಾನಿ ಬಗ್ಗೆಯೂ ಮಾಹಿತಿ ಇದೆ. ಅಮೆರಿಕ ಸರ್ಕಾರ ಇದನ್ನು ಗೋಪ್ಯವಾಗಿ ಇಟ್ಟಿದೆ. ಪ್ರಧಾನಿ ಗುರಿಯಾಗಿರಿಸಿಕೊಂಡೇ ಸಚಿವ ಹರ್ದೀಪ್ ಪುರಿ, ಉದ್ಯಮಿ ಅನಿಲ್ ಅಂಬಾನಿ ಬಗ್ಗೆ ಮಾಹಿತಿ ಬಿಡುಗಡೆ ಮಾಡಲಾಗಿದೆ’ ಎಂದರು.

‘ಅಮೆರಿಕದಲ್ಲಿ ಉದ್ಯಮಿ ಗೌತಮ್ ಅದಾನಿ ವಿರುದ್ಧ ದಾಖಲಾಗಿರುವ ಪ್ರಕರಣ ನನ್ನ ಎರಡನೇ ಅಸ್ತ್ರ. ಅದಾನಿಯೇ ಬಿಜೆಪಿ ಮತ್ತು ಪ್ರಧಾನಿಗೆ ಆರ್ಥಿಕ ಮೂಲ’ ಎಂದು ರಾಹುಲ್ ಆರೋಪಿಸಿದರು.

‘ನಾವು ಹೇಳಿದ್ದನ್ನು ಮಾಡದಿದ್ದರೆ, ಎಲ್ಲವನ್ನೂ ಬಯಲು ಮಾಡುತ್ತೇವೆ ಎಂದು ಅಮೆರಿಕದವರು ಪ್ರಧಾನಿಯನ್ನು ಬೆದರಿಸಿದ್ದರು. ತನ್ನ ಹಾಗೂ ಬಿಜೆಪಿಯ ಆರ್ಥಿಕ ಮೂಲವನ್ನು ರಕ್ಷಿಸಿಕೊಳ್ಳಲು ಮೋದಿ ನಮ್ಮ ರೈತರನ್ನೇ ಬಲಿ ಕೊಟ್ಟಿದ್ದಾರೆ’ ಎಂದರು.

‘ಯಾವುದೇ ಪ್ರಧಾನಿ ಅವಕಾಶ ನೀಡಿರಲಿಲ್ಲ’

‘ಅಮೆರಿಕದ ರೈತರ ಭೂಮಿ, ತಂತ್ರಜ್ಞಾನಕ್ಕೆ ಹೋಲಿಸಿದರೆ ಭಾರತದ ರೈತರು ಸಣ್ಣ ಪ್ರಮಾಣದ ಕೃಷಿಕರು. ನಮ್ಮ ಕೃಷಿ ಮಾರುಕಟ್ಟೆಯನ್ನು ಅಲ್ಲಿನ ರೈತರಿಗೆ ತೆರೆದರೆ ಅದು ಅಪರಾಧ ಎಸಗಿದಂತೆ’ ಎಂದು ರಾಹುಲ್ ಟೀಕಿಸಿದ್ದಾರೆ.

‘ಅಮೆರಿಕದ ಸೋಯಾಬೀನ್, ಜೋಳ ಮತ್ತು ಹಣ್ಣುಗಳನ್ನು ಭಾರತದಲ್ಲಿ ಮಾರಾಟ ಮಾಡಲು ಈ ಹಿಂದಿನ ಯಾವುದೇ ಪ್ರಧಾನಿ ಅವಕಾಶ ನೀಡಿರಲಿಲ್ಲ. ಹಸಿರು ಕ್ರಾಂತಿ ಮತ್ತು ಕ್ಷೀರ ಕ್ರಾಂತಿ ನಡೆದವು. ಆದರೆ ಈ ಸರ್ಕಾರ ಕೃಷಿಯ ತಳಹದಿಯನ್ನೇ ಸರ್ವನಾಶ ಮಾಡುತ್ತಿದೆ’ ಎಂದರು.

‘ಕೃಷಿ ವಿಚಾರದಲ್ಲಿ ಒಮ್ಮತ ಮೂಡದೆ ಭಾರತ–ಅಮೆರಿಕ ಒಪ್ಪಂದ ನಾಲ್ಕು ತಿಂಗಳಿನಿಂದಲೂ ಸ್ಥಗಿತಗೊಂಡಿತ್ತು. ಆದರೆ ಅಮೆರಿಕ ಅಧ್ಯಕ್ಷರು ಭಾರತದ ಪ್ರಧಾನಿಯನ್ನು ಹೆದರಿಸಿ, ಸಹಿ ಹಾಕಿಸಿಕೊಂಡಿದ್ದಾರೆ’ ಎಂದು ರಾಹುಲ್ ಆರೋಪಿಸಿದರು.

ತಮಿಳುನಾಡು ಒಂದೇ ಹಂತದ ಚುನಾವಣೆಗೆ ಮನವಿ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ವಿಧಾನಸಭಾ ಚುನಾವಣೆಯನ್ನು ಒಂದೇ ಹಂತದಲ್ಲಿ ನಡೆಸುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರಿಗೆ ಮನವಿ ಮಾಡಿದರು.

ಸಿಇಸಿ ಮತ್ತು ಚುನಾವಣಾ ಆಯುಕ್ತರಾದ ಸುಖ್ ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದರು.

‘ಒಂದೇ ಹಂತದಲ್ಲಿ ಚುನಾವಣೆ ನಡೆಸ ಬೇಕೆಂದು ಎಲ್ಲ ಪಕ್ಷಗಳು ಒತ್ತಾಯಿಸಿವೆ. ಆದರೆ, ರಾಜ್ಯದ ಹಬ್ಬಗಳನ್ನು ಗಮನಿಸಿ ಮತದಾನದ ದಿನವನ್ನು ನಿಗದಿಪಡಿಸಲಾಗುವುದು’ ಎಂದು ಸಿಇಸಿ ತಿಳಿಸಿದರು.

ಮತದಾರರ ವಯಸ್ಸಿನ ವಿವರಗಳನ್ನು ಪ್ರಕಟಿಸಲು ಜಿಲ್ಲಾ ಚುನಾವಣಾಧಿಕಾರಿಗಳು ನಿರಾಕರಿಸುತ್ತಿರುವುದಕ್ಕೆ ಆಡಳಿತಾರೂಢ ಡಿಎಂಕೆ ಆಕ್ಷೇಪಿಸಿದೆ. ಅಲ್ಲದೆ, ಏಕರೂಪದ ಮತ್ತು ಪ್ರಮಾಣಿತ ಮತದಾರರ ಪಟ್ಟಿಯನ್ನು ಪ್ರಕಟಿಸುವಂತೆ ಒತ್ತಾಯಿಸಿದೆ.

ಮಲಬಾರ್ ಗ್ರೂಪ್‌ನ ‘ಮೈಕ್ರೋ ಲರ್ನಿಂಗ್ ಸೆಂಟರ್’ ವಿಸ್ತರಣೆ

ಸಾಮಾಜಿಕ ಹೊಣೆಗಾರಿಕೆ ನಿಧಿಯ ಭಾಗವಾಗಿ ಬೀದಿ ಬದಿ ಮಕ್ಕಳ ಶಿಕ್ಷಣಕ್ಕಾಗಿ ಮಲಬಾರ್ ಗ್ರೂಪ್‌ನಿಂದ ‘ಮೈಕ್ರೋ ಲರ್ನಿಂಗ್ ಸೆಂಟರ್’ ವಿಸ್ತರಣೆ

ಬೆಂಗಳೂರು: ಸಾಮಾಜಿಕ ಹೊಣೆಗಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಮಲಬಾರ್ ಗ್ರೂಪ್, ಬೀದಿ ಬದಿಯ ಮಕ್ಕಳ ಪುನರ್ವಸತಿ ಮತ್ತು ಅವರನ್ನು ಮುಖ್ಯವಾಹಿನಿಯ ಶಿಕ್ಷಣಕ್ಕೆ ಮರಳಿ ತರುವ ಉದ್ದೇಶದಿಂದ ತನ್ನ 'ಮೈಕ್ರೋ ಲರ್ನಿಂಗ್ ಸೆಂಟರ್' ಯೋಜನೆಯನ್ನು ಮತ್ತಷ್ಟು ರಾಜ್ಯ ಹಾಗೂ ಪ್ರದೇಶಗಳಿಗೆ ವಿಸ್ತರಿಸುವುದಾಗಿ ಘೋಷಿಸಿದೆ.

ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳಿಂದಾಗಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮೂಲಭೂತ ಕಲಿಕಾ ಬೆಂಬಲ ಮತ್ತು ವ್ಯವಸ್ಥಿತ ಆರೈಕೆಯನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ವಿಸ್ತರಣೆಯ ಭಾಗವಾಗಿ, ಕೇರಳದ ಕೋಝಿಕ್ಕೋಡ್‌ನ ಕುಟ್ಟಿಕ್ಕಾಟೂರಿನಲ್ಲಿರುವ ಮಲಬಾರ್ ಗ್ರೂಪ್ ಕೇಂದ್ರ ಕಚೇರಿಯಲ್ಲಿ ರಾಜ್ಯ ಮತ್ತು ವಲಯ ಸಂಯೋಜಕರು ಹಾಗೂ ಸ್ವಯಂಸೇವಕರಿಗಾಗಿ ಒಂದು ವಾರದ ತರಬೇತಿ ಶಿಬಿರ ನಡೆಯುತ್ತಿದೆ.

ಸದ್ಯ ಭಾರತದ 18 ರಾಜ್ಯಗಳಲ್ಲಿ 1,534 ಮೈಕ್ರೋ ಲರ್ನಿಂಗ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, 64,000ಕ್ಕೂ ಹೆಚ್ಚು ಮಕ್ಕಳಿಗೆ ನೆರವಾಗುತ್ತಿವೆ.

ಹಸಿವು ಮುಕ್ತ ಜಗತ್ತಿನೆಡೆಗೆ ಒಂದು ಹೆಜ್ಜೆ: ಈ ಕೇಂದ್ರಗಳು ಮಲಬಾರ್ ಗ್ರೂಪ್‌ನ ಪ್ರಮುಖ ಸಾಮಾಜಿಕ ಯೋಜನೆಯಾದ ‘ಹಂಗರ್ ಫ್ರೀ ವರ್ಲ್ಡ್’ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಬೀದಿ ಬದಿಯಲ್ಲಿ ವಾಸಿಸುವ, ಬಾಲಕಾರ್ಮಿಕ ಪದ್ಧತಿಗೆ ಒಳಗಾದ ಅಥವಾ ಶಾಲೆಯಿಂದ ಅರ್ಧಕ್ಕೆ ಹೊರಬಂದ ಮಕ್ಕಳಿಗೆ ಇಲ್ಲಿ ಪೌಷ್ಟಿಕ ಆಹಾರ, ಮೂಲ ಶಿಕ್ಷಣ ಮತ್ತು ಔಪಚಾರಿಕ ಶಾಲೆಗೆ ಸೇರಲು ಅಗತ್ಯವಿರುವ ಸಹಾಯವನ್ನು ನೀಡಲಾಗುತ್ತದೆ.

'ಬೀದಿ ಬದಿಯ ಮಕ್ಕಳು ಎದುರಿಸುತ್ತಿರುವ ಕಠಿಣ ಪರಿಸ್ಥಿತಿಯನ್ನು ನಾವು ಹತ್ತಿರದಿಂದ ನೋಡಿದ್ದೇವೆ. ಅಂತಹ ಮಕ್ಕಳಿಗೆ ಆಹಾರ, ಶಿಕ್ಷಣ ಮತ್ತು ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಕಲ್ಪಿಸಿಕೊಡುವುದು ನಮ್ಮ ಜವಾಬ್ದಾರಿಯಾಗಿದೆ,' ಎಂದು ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹಮ್ಮದ್ ತಿಳಿಸಿದ್ದಾರೆ.

ಮಲಬಾರ್ ಗ್ರೂಪ್ ತನ್ನ ಲಾಭದ ಶೇ. 5 ರಷ್ಟನ್ನು ಸಾಮಾಜಿಕ ಸೇವಾ ಚಟುವಟಿಕೆಗಳಿಗೆ ಮೀಸಲಿಡುತ್ತದೆ.

- ‘ಹಂಗರ್ ಫ್ರೀ ವರ್ಲ್ಡ್’ ಕಾರ್ಯಕ್ರಮದ ಮೂಲಕ ಭಾರತ, ಜಾಂಬಿಯಾ ಮತ್ತು ಇಥಿಯೋಪಿಯಾದಲ್ಲಿ ಪ್ರತಿದಿನ 1,15,000 ಕ್ಕೂ ಹೆಚ್ಚು ಜನರಿಗೆ ಊಟ ಒದಗಿಸಲಾಗುತ್ತಿದೆ.
- ಅನಾಥ ಮತ್ತು ನಿರ್ಗತಿಕ ಮಹಿಳೆಯರಿಗಾಗಿ ‘ಗ್ರ್ಯಾಂಡ್ಮಾ ಹೋಮ್’ ಯೋಜನೆಯಡಿ ಆಶ್ರಯ ನೀಡಲಾಗುತ್ತಿದೆ.
- ಇದುವರೆಗೆ ಸಂಸ್ಥೆಯು ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ 376 ಕೋಟಿ ರೂ. ಗಳಿಗೂ ಹೆಚ್ಚು ಹೂಡಿಕೆ ಮಾಡಿದ್ದು, 18 ಲಕ್ಷಕ್ಕೂ ಹೆಚ್ಚು ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತಂದಿದೆ.
- ಮಲಬಾರ್ ಹಿನ್ನೆಲೆ: 1993ರಲ್ಲಿ ಸ್ಥಾಪನೆಯಾದ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಇಂದು ವಿಶ್ವದ 5ನೇ ಅತಿದೊಡ್ಡ ಜ್ಯುವೆಲ್ಲರಿ ರಿಟೇಲರ್ ಆಗಿ ಹೊರಹೊಮ್ಮಿದೆ. 14 ದೇಶಗಳಲ್ಲಿ 420ಕ್ಕೂ ಹೆಚ್ಚು ಶೋರೂಮ್‌ಗಳನ್ನು ಹೊಂದಿರುವ ಈ ಸಂಸ್ಥೆ, ವ್ಯವಹಾರದ ಜೊತೆಗೆ ಪರಿಸರ ಮತ್ತು ಸಾಮಾಜಿಕ ಸುಸ್ಥಿರತೆಗೂ ಆದ್ಯತೆ ನೀಡುತ್ತಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಭಾರತದ ಸೆಮಿ ಕನಸು ಜೀವಂತ

ಸೂಪರ್ 8ರ ಹಂತ: ಜಿಂಬಾಬ್ವೆ ವಿರುದ್ಧ 72 ರನ್ ಜಯ
ನಾಕೌಟ್ ರೇಸ್‌ನಿಂದ ಹೊರಬಿದ್ದ ಸಿಕಂದರ್ ಪಡೆ

ಚೆನ್ನೈ (ಪಿಟಿಐ): ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅಮೋಘ ಅರ್ಧಶತಕದೊಂದಿಗೆ ಲಯಕ್ಕೆ ಮರಳಿದರು. ಕೊನೆಯಲ್ಲಿ ಹಾರ್ದಿಕ್ ಪಾಂಡ್ಯ ಮತ್ತು ತಿಲಕ್ ವರ್ಮಾ ಅವರೂ ಮಿಂಚಿನ ಆಟವಾಡಿದರು. ಇದರೊಂದಿಗೆ ಟೂರ್ನಿಯ ಇತಿಹಾಸದಲ್ಲಿ ಎರಡನೇ ಅತ್ಯಧಿಕ ಮೊತ್ತ ದಾಖಲಿಸಿದ ಭಾರತ ತಂಡವು ಟಿ20 ವಿಶ್ವಕಪ್ ಸೂಪರ್ ಎಂಟರ ಪಂದ್ಯದಲ್ಲಿ ಗುರುವಾರ ಜಿಂಬಾಬ್ವೆ ವಿರುದ್ಧ ಸುಲಭ ಜಯ ಗಳಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ 72 ರನ್‌ಗಳಿಂದ ಜಯಗಳಿಸಿ ಸೆಮಿಫೈನಲ್‌ನ ಕನಸನ್ನು ಜೀವಂತವಾಗಿರಿಸಿಕೊಂಡಿತು. ಸೂಪರ್ ಎಂಟರ ಎ ಗುಂಪಿನಲ್ಲಿ ಭಾರತ ಸದ್ಯ ಮೂರನೇ ಸ್ಥಾನದಲ್ಲಿದೆ. ಮಾರ್ಚ್ 1ರಂದು ವೆಸ್ಟ್ ಇಂಡೀಸ್ ವಿರುದ್ಧ ನಡೆಯಲಿರುವ ಕೊನೆಯ ಪಂದ್ಯ ಉಭಯ ತಂಡಗಳಿಗೆ ನಿರ್ಣಾಯಕವಾಗಲಿದೆ. ಜಿಂಬಾಬ್ವೆ ಈ ಸೋಲಿನೊಂದಿಗೆ ನಾಕೌಟ್ ರೇಸ್‌ನಿಂದ ಹೊರಬಿತ್ತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ಅಭಿಷೇಕ್ (55;30ಎ, 4x4, 6x4), ಹಾರ್ದಿಕ್ (ಔಟಾಗದೇ 50;23ಎ, 4x2, 6x4) ಮತ್ತು ತಿಲಕ್ (ಔಟಾಗದೇ 44;16ಎ, 4x3, 6x4) ಅವರ ಬ್ಯಾಟಿಂಗ್ ಬಲದಿಂದ 4 ವಿಕೆಟ್‌ಗೆ 256 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ವಿಶ್ವಕಪ್‌ನಲ್ಲಿ ಭಾರತದ ಅತ್ಯಧಿಕ ಮೊತ್ತ ಇದಾಗಿದೆ. ಇದಕ್ಕೆ ಇತರ ಬ್ಯಾಟರ್‌ಗಳೂ ಉಪಯುಕ್ತ ಕಾಣಿಕೆ ನೀಡಿದರು.

ಕಠಿಣ ಗುರಿ ಬೆನ್ನಟ್ಟಿದ ಜಿಂಬಾಬ್ವೆ ತಂಡವು ಕೊನೆಯತನಕ ಹೋರಾಟ ತೋರಿ, ಸೋಲಿನ ಅಂತರವನ್ನು ಕಡಿಮೆ ಮಾಡಿಕೊಂಡಿತಷ್ಟೇ. ಆರಂಭಿಕ ಆಟಗಾರ ಬ್ರಿಯಾನ್ ಬೆನೆಟ್ (ಔಟಾಗದೇ 97; 59ಎ, 4x8, 6x6) ಅವರು ಅರ್ಹ ಶತಕ ತಪ್ಪಿಸಿಕೊಂಡರು. ಅವರು ನಾಯಕ ಸಿಕಂದರ್ ರಝಾ (31;21ಎ) ಜೊತೆ ಮೂರನೇ ವಿಕೆಟ್‌ಗೆ 72 ರನ್ ಸೇರಿಸಿ ಭಾರತದ ದಾಳಿಗೆ ಸಡ್ಡು ಹೊಡೆದರು. ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 184 ರನ್ ಗಳಿಸಿ ಹೋರಾಟ ಮುಗಿಸಿತು.

ಭಾರತದ ಪರ ಅರ್ಷದೀಪ್ ಸಿಂಗ್ 3 ವಿಕೆಟ್ ಪಡೆದರು. ಸ್ಪಿನ್ನರ್‌ಗಳಾದ ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿ ತಲಾ ಒಂದು ವಿಕೆಟ್ ಗಳಿಸಿದರು. ಮಧ್ಯಮ ವೇಗಿ ಶಿವಂ ದುಬೆ (2–0–46–1) ಬಲು ದುಬಾರಿ ಎನಿಸಿದರು.

ಅಭಿಷೇಕ್–ಹಾರ್ದಿಕ್ ಅಬ್ಬರ: ಹಾಲಿ ವಿಶ್ವಕಪ್ ಟೂರ್ನಿಯಲ್ಲಿ ರನ್‌ಗಳಿಗೆ ತಡಕಾಡಿದ್ದ ಅಭಿಷೇಕ್ ಮೇಲೆ ಎಲ್ಲರ ಚಿತ್ತ ನೆಟ್ಟಿತ್ತು. ಹೊಟ್ಟೆಕೆಟ್ಟು ಮೊದಲ ಪಂದ್ಯ ಕಳೆದುಕೊಂಡಿದ್ದ ಅಭಿಷೇಕ್, ನಂತರದ ನಾಲ್ಕು ಪಂದ್ಯಗಳಲ್ಲಿ ನಿರಾಸೆ ಮೂಡಿಸಿದ್ದರು. ಆದರೆ ಈ ಪಂದ್ಯದಲ್ಲಿ 25 ವರ್ಷದ ಆಟಗಾರನ ಬೀಸಾಟ ಕಳೆಗಟ್ಟಿತು. ಎರಡು ಜೊತೆಯಾಟಗಳಲ್ಲಿ ಭಾಗಿಯಾದರು. ಸಂಜು ಸ್ಯಾಮ್ಸನ್ (24) ಜೊತೆ 48 ರನ್ ಸೇರಿಸಿದ ಅವರು ಇಶಾನ್ (38) ಜೊತೆ 72 ರನ್ ಸೇರಿಸಿದರು. ಇದರಿಂದ ಇತರ ಆಟಗಾರರಿಗೆ ಪರಾಕ್ರಮ ಮೆರೆಯಲು ವೇದಿಕೆ ಸಿದ್ಧಗೊಂಡಿತು.

ರಿಂಕು ಬದಲು ಸ್ಥಾನ ಪಡೆದಿದ್ದ ಸ್ಯಾಮ್ಸನ್ ಮತ್ತು ಅಭಿಷೇಕ್ ಮೊದಲ ವಿಕೆಟ್‌ಗೆ 48 ರನ್ (3.4ಓವರ್) ಸೇರಿಸಿ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಮುಝರಾಬಾನಿ ಬೌಲಿಂಗ್‌ನಲ್ಲಿ ಚೆಂಡನ್ನು ಪುಲ್ ಮಾಡುವ ಯತ್ನದಲ್ಲಿ ಸಂಜು ಡೀಪ್‌ಮಿಡ್ ವಿಕೆಟ್‌ನಲ್ಲಿ ಕ್ಯಾಚಿತ್ತರು. ಅವರ ನಿರ್ಗಮನದ ನಂತರ ಅಭಿಷೇಕ್ ರನ್ ವೇಗ ಹೆಚ್ಚಿಸಿದರು. ಟಿನೊ ಮಪೊಸೊ, ಬ್ರಿಯಾನ್ ಬೆನೆಟ್ ಮತ್ತು ಎನ್‌ಗವಾರ ಬೌಲಿಂಗ್‌ನಲ್ಲಿ ಸಿಕ್ಸರ್‌ಗಳನ್ನು ಎತ್ತಿದರು. ಪವರ್ ಪ್ಲೇ ಕೊನೆಗೆ ಮೊತ್ತ 86 ಆಗಿತ್ತು.

ಅಭಿಷೇಕ್ ಪಾದ ಚಲನೆ, ಕಣ್ಣು–ಕೈ ಸಂಯೋಜನೆ ಎಂದಿನ ರೀತಿಗೆ ಮರಳಿತು. ಅರ್ಧಶತಕ ದಾಟಿದ ಕೂಡಲೇ ಅವರು ಸಿಕಂದರ್ ರಝಾ ಬೌಲಿಂಗ್‌ನಲ್ಲಿ ಭರ್ಜರಿ ಹೊಡೆತಕ್ಕೆ ಹೋಗಿ ಕ್ಯಾಚ್ ನೀಡಿದರು. ಆದರೆ ಜಿಂಬಾಬ್ವೆ ಸಂತಸ ಹೆಚ್ಚು ಹೊತ್ತು ಇರಲಿಲ್ಲ. ಭಾರತದ ಇತರ ಬ್ಯಾಟರ್‌ಗಳು ಟೂರ್ನಿಯಲ್ಲಿ ಇದೇ ಮೊದಲ ಬಾರಿ ಒಟ್ಟಾಗಿ ಉತ್ತಮ ಪ್ರದರ್ಶನ ನೀಡಿದರು.

ಜಿಂಬಾಬ್ವೆ ಫೀಲ್ಡರ್‌ಗಳೂ ಸುಲಭ ಕ್ಯಾಚುಗಳನ್ನು ನೆಲಕ್ಕೆ ಹಾಕಿದರು. 26 ರನ್ ಗಳಿಸಿದ್ದಾಗ ಇಶಾನ್ ಮತ್ತು ನಾಲ್ಕು ರನ್ ಗಳಿಸಿದ್ದಾಗ ನಾಯಕ ಸೂರ್ಯಕುಮಾರ್ ಯಾದವ್ (33) ಅವರು ಜೀವದಾನ ಪಡೆದರು. ಭಾರತ 9.1 ಓವರುಗಳಲ್ಲಿ 100 ರನ್ ಗಳಿಸಿದರೆ, ಮುಂದಿನ 100 ರನ್‌ಗಳು 7.3 ಓವರುಗಳಲ್ಲಿ ಪ್ರವಾಹದಂತೆ ಹರಿದು ಬಂದವು. ಕೊನೆಯಲ್ಲಿ ಹಾರ್ದಿಕ್ ಜೊತೆ ತಿಲಕ್ ಅಬ್ಬರಿಸಿದರು. ಕೊನೆಯ ಐದು ಓವರುಗಳಲ್ಲಿ 80 ರನ್‌ಗಳನ್ನು ಭಾರತ ಬಾಚಿಕೊಂಡಿತು.



440
ಎರಡು ತಂಡಗಳ ಒಟ್ಟು ರನ್. ಇದು ಟಿ20 ವಿಶ್ವಕಪ್‌ನ ಪಂದ್ಯವೊಂದರಲ್ಲಿ ದಾಖಲಾದ ಎರಡನೇ ಅತ್ಯಧಿಕ ಮೊತ್ತವಾಗಿದೆ



ಟಿ20 ವಿಶ್ವಕಪ್: ತಂಡವೊಂದರ ಅತ್ಯಧಿಕ ಮೊತ್ತಗಳು

ರನ್	ತಂಡ	ಎದುರಾಳಿ	ತಾಣ	ವರ್ಷ
6ಕ್ಕೆ 260	ಶ್ರೀಲಂಕಾ	ಕೆನ್ಯಾ	ಜೊಹಾನ್ಸ್‌ಬರ್ಗ್	2007
4ಕ್ಕೆ 256	ಭಾರತ	ಜಿಂಬಾಬ್ವೆ	ಚೆನ್ನೈ	2026
6ಕ್ಕೆ 254	ವೆಸ್ಟ್ ಇಂಡೀಸ್	ಜಿಂಬಾಬ್ವೆ	ವಾಂಖೆಡೆ	2026
5ಕ್ಕೆ 235	ಐರ್ಲೆಂಡ್	ಒಮಾನ್	ಕೊಲಂಬೊ	2026
8ಕ್ಕೆ 230	ಇಂಗ್ಲೆಂಡ್	ದಕ್ಷಿಣ ಆಫ್ರಿಕಾ	ವಾಂಖೆಡೆ	2016

ಸ್ಕೋರ್ ಕಾರ್ಡ್

ಭಾರತ: 20 ಓವರುಗಳಲ್ಲಿ 4 ವಿಕೆಟ್‌ಗೆ 256
ಸಂಜು ಸಿ ಬರ್ಲ್ ಬಿ ಮುಝರಾಬಾನಿ 24 (15ಎ, 4x1, 6x2)
ಅಭಿಷೇಕ್ ಸಿ ಬರ್ಲ್ ಬಿ ಮಪೋಸ 55 (30ಎ, 4x4, 6x4)
ಇಶಾನ್ ಸಿ ಎನ್‌ಗವಾರ ಬಿ ರಝಾ 38 (24ಎ, 4x4, 6x1)
ಸೂರ್ಯ ಸಿ ಮುಸೆಕಿವ ಬಿ ಎನ್‌ಗವಾರ 33 (13ಎ, 4x3, 6x2)
ಹಾರ್ದಿಕ್ ಔಟಾಗದೇ 50 (23ಎ, 4x2, 6x4)
ತಿಲಕ್ ವರ್ಮಾ ಔಟಾಗದೇ 44 (16ಎ, 4x3, 6x4)
ಇತರೆ: 12 (ಲೆಗ್‌ಬೈ 4, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1–48 (ಸಂಜು ಸ್ಯಾಮ್ಸನ್, 3.4), 2–120 (ಇಶಾನ್ ಕಿಶನ್, 10.4), 3–150 (ಅಭಿಷೇಕ್ ಶರ್ಮಾ, 12.5), 4–172 (ಸೂರ್ಯಕುಮಾರ್ ಯಾದವ್, 14.5)
ಬೌಲಿಂಗ್: ರಿಚರ್ಡ್ ಎನ್‌ಗವಾರ 4–0–62–1; ಬ್ಲೆಸಿಂಗ್ ಮುಝರಾಬಾನಿ 4–0–43–1; ತಿನೊತೆಂಡ ಮಪೋಸ 2–0–40–1; ಬ್ರಾಡ್ ಇವಾನ್ಸ್ 4–0–52–0; ಸಿಕಂದರ್ ರಝಾ 3–0–29–1; ಬ್ರಿಯಾನ್ ಬೆನೆಟ್ 2–0–16–0; ರಿಯಾನ್ ಬರ್ಲ್ 1–0–10–0.

ಜಿಂಬಾಬ್ವೆ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 184
ಬ್ರಿಯಾನ್ ಬೆನೆಟ್ ಔಟಾಗದೇ 97 (59ಎ, 4x8, 6x6)
ಮರುಮಣಿ ಸಿ ಇಶಾನ್ ಬಿ ಅಕ್ಷರ್ 20 (20ಎ, 6x2)
ಡಿಯಾನ್ ಸಿ ತಿಲಕ್ ಬಿ ವರುಣ್ 6 (9ಎ)
ಸಿಕಂದರ್ ಸಿ ಅಭಿಷೇಕ್ ಬಿ ಅರ್ಷದೀಪ್ 31 (21ಎ, 4x2, 6x2)
ರಿಯಾನ್ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 0 (2ಎ)
ಟೋನಿ ಬಿ ಅರ್ಷದೀಪ್ 11 (6ಎ, 4x2)
ತಶಿಂಗಾ ಸಿ ಸ್ಯಾಮ್ಸನ್ ಬಿ ದುಬೆ 7 (4ಎ, 6x1)
ಇತರೆ: 11 (ಬೈ 1, ಲೆಗ್‌ಬೈ 1, ನೋಬಾಲ್ 2, ವೈಡ್ 7)
ವಿಕೆಟ್ ಪತನ: 1-44 (ಟ್ಯಾಡಿವಾನಾಶೆ ಮರುಮಣಿ, 6.2), 2-72 (ಡಿಯಾನ್ ಮೈಯರ್ಸ್, 9.3), 3-144 (ಸಿಕಂದರ್ ರಜಾ, 16.2), 4-144 (ರಿಯಾನ್ ಬರ್ಲ್, 16.4), 5-162 (ಟೋನಿ ಮುನಿಯೊಂಗಾ, 18.2), 6-173 (ತಶಿಂಗಾ ಮುಸೆಕಿವಾ, 19.3)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–24–3, ಹಾರ್ದಿಕ್ ಪಾಂಡ್ಯ 3–0–21–0, ಜಸ್‌ಪ್ರೀತ್ ಬೂಮ್ರಾ 3–0–21–0, ವರುಣ್ ಚಕ್ರವರ್ತಿ 4–0–35–1, ಅಕ್ಷರ್ ಪಟೇಲ್ 4–0–35–1, ಶಿವಂ ದುಬೆ 2–0–46–1
ಪಂದ್ಯದ ಆಟಗಾರ: ಹಾರ್ದಿಕ್ ಪಾಂಡ್ಯ

ಫಲಿತಾಂಶ: ಭಾರತಕ್ಕೆ 72 ರನ್‌ಗಳ ಜಯ

ವೆಸ್ಟ್ ಇಂಡೀಸ್‌ಗೆ ಒಂಬತ್ತು ವಿಕೆಟ್‌ಗಳ ಸೋಲು
ಸೆಮಿಫೈನಲ್‌ಗೆ ದಕ್ಷಿಣ ಆಫ್ರಿಕಾ

ಅಹಮದಾಬಾದ್ (ಪಿಟಿಐ): ಅಧಿಕಾರಯುತ ಆಟವಾಡಿದ ದಕ್ಷಿಣ ಆಫ್ರಿಕಾ ತಂಡ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಗುರುವಾರ 9 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಸದೆಬಡಿಯಿತು. ಅಜೇಯ ಓಟ ಮುಂದುವರಿಸಿದ ಹರಿಣಗಳ ಪಡೆಯು ಸೆಮಿಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು.

ದಕ್ಷಿಣ ಆಫ್ರಿಕಾದ ವೇಗದ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡಿದ ನಂತರ, ಬ್ಯಾಟರ್‌ಗಳು ವಿಂಡೀಸ್ ಬೌಲರ್‌ಗಳನ್ನು ಮನಸಾರೆ ದಂಡಿಸಿದರು. ಟೂರ್ನಿಯಲ್ಲಿ ಸತತ ಆರನೇ ಗೆಲುವನ್ನು ದಾಖಲಿಸಿದರು. ಇದರೊಂದಿಗೆ ವೆಸ್ಟ್ ಇಂಡೀಸ್ ಗೆಲುವಿನ ಓಟಕ್ಕೂ ತಡೆಬಿತ್ತು. ಅದರ ನೆಟ್ ರನ್ ರೇಟ್ 5.350 ರಿಂದ 1.791ಕ್ಕೆ ಇಳಿಯಿತು. ಒಂದನೇ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ ತಂಡವು ನಾಕೌಟ್‌ಗೆ ಮುನ್ನಡೆದ ಕಾರಣ ಉಳಿದ ಒಂದು ಸ್ಥಾನಕ್ಕೆ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವೆ ಪೈಪೋಟಿಯಿದೆ.

ಜಿಂಬಾಬ್ವೆ ವಿರುದ್ಧ ಅಬ್ಬರಿಸಿದ್ದ ವೆಸ್ಟ್ ಇಂಡೀಸ್ ಬ್ಯಾಟರ್‌ಗಳು ಈ ಪಂದ್ಯದಲ್ಲಿ ಪರದಾಡಿದರು. ಕೊನೆಯಲ್ಲಿ ರೊಮಾರಿಯೊ ಶೆಫರ್ಡ್ (ಔಟಾಗದೇ 52) ಮತ್ತು ಜೇಸನ್ ಹೋಲ್ಡರ್ (49) ಅವರ ಆಟದಿಂದಷ್ಟೇ 8 ವಿಕೆಟ್‌ಗೆ 176 ರನ್‌ಗಳ ಗೌರವದ ಮೊತ್ತ ಗಳಿಸಲು ಸಾಧ್ಯವಾಯಿತು. ಆದರೆ ಈ ಮೊತ್ತ ಲೆಕ್ಕಕ್ಕೆ ಇಲ್ಲದಂತೆ ಆಡಿದ ಹರಿಣಗಳ ಪಡೆಯ ನಾಯಕ ಏಡನ್ ಮರ್ಕರಂ (ಔಟಾಗದೇ 82), ಕ್ವಿಂಟನ್ ಡಿಕಾಕ್ (47, 24ಎ, 4x4, 6x4) ಮತ್ತು ರಿಯಾನ್ ರಿಕೆಲ್ಟನ್ (ಔಟಾಗದೇ 45) ಕೇವಲ 16.1 ಓವರುಗಳಲ್ಲಿ ತಂಡವನ್ನು (1 ವಿಕೆಟ್‌ಗೆ 177 ರನ್) ಗೆಲುವಿನ ದಡ ಸೇರಿಸಿದರು.

ಪವರ್ ಪ್ಲೇ ಅವಧಿಯಲ್ಲೇ 69 ರನ್ ಬಾರಿಸಿದ ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ತಂಡವನ್ನು ಅಧೀರಗೊಳಿಸಿತು. ಮರ್ಕರಂ ಮತ್ತು ಕ್ವಿಂಟನ್ ಮೊದಲ ವಿಕೆಟ್‌ಗೆ ಕೇವಲ 7.5 ಓವರುಗಳಲ್ಲಿ 95 ರನ್ ಸೇರಿಸಿದರು.

ಮರ್ಕರಂ ಮತ್ತು ರಿಕೆಲ್ಟನ್ ಮುರಿಯದ ಎರಡನೇ ವಿಕೆಟ್‌ಗೆ 82 ರನ್ ಸೇರಿಸಿದರು. 46 ಎಸೆತಗಳ ಇನಿಂಗ್ಸ್‌ನಲ್ಲಿ ಮರ್ಕರಂ ಏಳು ಸಿಕ್ಸರ್, ನಾಲ್ಕು ಬೌಂಡರಿಗಳನ್ನು ಬಾರಿಸಿದರು. ರಿಕೆಲ್ಟನ್ 28 ಎಸೆತಗಳ ಇನಿಂಗ್ಸ್‌ನಲ್ಲಿ 4 ಬೌಂಡರಿ, ಎರಡು ಸಿಕ್ಸರ್‌ಗಳನ್ನು ಬಾರಿಸಿದರು.

ಇದಕ್ಕೆ ಮೊದಲು, ಕಗಿಸೊ ರಬಾಡ (22ಕ್ಕೆ2) ಮತ್ತು ಲುಂಗಿ ಎನ್‌ಗಿಡಿ (30ಕ್ಕೆ3) ಅವರ ವೇಗದ ದಾಳಿಗೆ ವೆಸ್ಟ್ ಇಂಡೀಸ್ ಕುಸಿಯಿತು. ಇವರಿಬ್ಬರು ಬೌನ್ಸ್ ಮತ್ತು ಲೆಂತ್‌ಗಳಿಂದ ಬ್ಯಾಟರ್‌ಗಳನ್ನು ಗಲಿಬಿಲಿಗೊಳಿಸಿದರು. ಒಂದು ಹಂತದಲ್ಲಿ ಕೆರೀಬಿಯನ್ ತಂಡ 11ನೇ ಓವರಿನಲ್ಲಿ 83 ರನ್ನಿಗೆ 7 ವಿಕೆಟ್‌ಗಳನ್ನು ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿತ್ತು.

ಆದರೆ ಹೋಲ್ಡರ್ ಮತ್ತು ಶೆಫರ್ಡ್ ಅವರು ಎಂಟನೇ ವಿಕೆಟ್‌ಗೆ ದಾಖಲೆಯ 89 ರನ್ (50 ಎಸೆತಗಳಲ್ಲಿ) ಸೇರಿಸಿದ್ದರಿಂದ, ಎದುರಾಳಿಯನ್ನು ಅಲ್ಪ ಮೊತ್ತಕ್ಕೆ ಉರುಳಿಸುವ ದಕ್ಷಿಣ ಆಫ್ರಿಕಾದ ಲೆಕ್ಕಾಚಾರ ಈಡೇರಲಿಲ್ಲ.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 8 ವಿಕೆಟ್‌ಗೆ 176 (ಜೇಸನ್ ಹೋಲ್ಡರ್ 49, ರೊಮಾರಿಯೊ ಶೆಫರ್ಡ್ ಔಟಾಗದೇ 52; ಕಗಿಸೊ ರಬಾಡ 22ಕ್ಕೆ2, ಲುಂಗಿ ಎನ್‌ಗಿಡಿ 30ಕ್ಕೆ3, ಕಾರ್ಬಿನ್ ಬಾಷ್ 31ಕ್ಕೆ2); ದಕ್ಷಿಣ ಆಫ್ರಿಕಾ: 16.1 ಓವರುಗಳಲ್ಲಿ 1 ವಿಕೆಟ್‌ಗೆ 177 (ಏಡನ್ ಮರ್ಕರಂ ಔಟಾಗದೇ 82, ಕ್ವಿಂಟನ್ ಡಿಕಾಕ್ 47, ರಿಯಾನ್ ರಿಕೆಲ್ಟನ್ ಔಟಾಗದೇ 45). ಪಂದ್ಯದ ಆಟಗಾರ: ಏಡನ್ ಮರ್ಕರಂ



ದಕ್ಷಿಣ ಆಫ್ರಿಕಾ ನಾಯಕ ಮರ್ಕರಂ (ಬಲಗಡೆ) ಮತ್ತು ರಿಯಾನ್ ರಿಕೆಲ್ಟನ್ ಎಎಫ್‌ಪಿ ಚಿತ್ರ

ಸೂಪರ್ 8ರ ಅಂಕಪಟ್ಟಿ (ಒಂದನೇ ಗುಂಪು)

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ದಕ್ಷಿಣ ಆಫ್ರಿಕಾ	2	2	0	0	4	2.890
ವೆಸ್ಟ್ ಇಂಡೀಸ್	2	1	1	0	2	1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475

ಇಂಗ್ಲೆಂಡ್‌ಗೆ ಕಿವೀಸ್ ಸ್ಪಿನ್ ಪರೀಕ್ಷೆ

ಕೊಲಂಬೊ (ಪಿಟಿಐ): ಆತ್ಮವಿಶ್ವಾಸದಲ್ಲಿರುವ ಇಂಗ್ಲೆಂಡ್ ತಂಡದವರು, ಟಿ20 ವಿಶ್ವಕಪ್ ಸೂಪರ್ ಎಂಟರ ಘಟ್ಟದ ಪಂದ್ಯದಲ್ಲಿ ಶುಕ್ರವಾರ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಅಮೋಘ ಲಯದಲ್ಲಿರುವ ಹ್ಯಾರಿ ಬ್ರೂಕ್ ಅವರನ್ನು ಒಳಗೊಂಡಂತೆ ಇಂಗ್ಲೆಂಡ್ ಬ್ಯಾಟರ್‌ಗಳ ಪಡೆಗೆ, ಮಿಚೆಲ್ ಸ್ಯಾಂಟ್ನರ್ ಅವರನ್ನು ಒಳಗೊಂಡ ನ್ಯೂಜಿಲೆಂಡ್‌ನ ಸ್ಪಿನ್ ವಿಭಾಗದಿಂದ ಪರೀಕ್ಷೆ ಎದುರಾಗಲಿದೆ.

ಸೂಪರ್ ಎಂಟರ ಹಂತದಲ್ಲಿ ಸತತ ಎರಡು ಪಂದ್ಯಗಳನ್ನು ಗೆದ್ದಿರುವ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದೆ. ಲಂಕಾ ವಿರುದ್ಧ ದೊಡ್ಡ ಗೆಲುವಿನಿಂದ ಸೆಮಿಫೈನಲ್‌ನತ್ತ ದಾಪುಗಾಲಿಟ್ಟಿರುವ ನ್ಯೂಜಿಲೆಂಡ್ ಪಾಲಿಗೆ ಈ ಪಂದ್ಯ ಮಹತ್ವದ್ದು.

ಇಂಗ್ಲೆಂಡ್ ಎದುರು ಸೋತ ನಂತರ ಪಾಕಿಸ್ತಾನದ ನಿವ್ವಳ ರನ್‌ದರ -0.461ಕ್ಕೆ ಕುಸಿದಿದೆ. ಅದು ನಾಲ್ಕರ ಘಟ್ಟಕ್ಕೇರುವ ಹಾದಿ ದುರ್ಗಮವಾಗಿದೆ. ನ್ಯೂಜಿಲೆಂಡ್ ಈ ಪಂದ್ಯದಲ್ಲಿ ದೊಡ್ಡ ಅಂತರದಿಂದ ಸೋತರೆ, ಜೊತೆಗೆ ಕೊನೆಯ ಪಂದ್ಯದಲ್ಲಿ ತಾನು ಲಂಕಾ ವಿರುದ್ಧ ಭಾರಿ ಗೆಲುವು ಸಾಧಿಸಿದರೆ ಮಾತ್ರ ಪಾಕ್ ರನ್‌ರೇಟ್ ಸುಧಾರಿಸಿ ಅವಕಾಶ ತೆರೆದುಕೊಳ್ಳಲಿದೆ.

ಸ್ಪಿನ್ ದಾಳಿಯನ್ನು ಸಮರ್ಥವಾಗಿ ಎದುರಿಸಬಲ್ಲ ತಂಡ ತಾನೆಂಬುದನ್ನು ನ್ಯೂಜಿಲೆಂಡ್, ಲಂಕಾ ವಿರುದ್ಧ ಅದರ ನೆಲದಲ್ಲೇ ನಿರೂಪಿಸಿದೆ. ಬ್ರೂಕ್, ವಿಲ್ ಜಾಕ್ಸ್ ಅವರು ಪಾಕ್ ಸ್ಪಿನ್ನರ್‌ಗಳಾದ ಸೈಮ್ ಅಯೂಬ್, ಮೊಹಮ್ಮದ್ ನವಾಝ್, ಶದಾಬ್ ಖಾನ್ ಅವರನ್ನು ವಿಶ್ವಾಸದಿಂದ ಆಡಿದ್ದರು. ಸ್ಪಿನ್‌ಗೆ ನೆರವಾಗುವ ಪ್ರೇಮದಾಸ ಕ್ರೀಡಾಂಗಣದಲ್ಲಿ ಸ್ಯಾಂಟ್ನರ್, ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಕೋಲ್ ಮೆಕ್‌ಕೊಂಚಿ ಅವರು ಎಷ್ಟರ ಮಟ್ಟಿಗೆ ಯಶಸ್ಸು ಪಡೆಯುತ್ತಾರೆ ಎಂಬುದು ನ್ಯೂಜಿಲೆಂಡ್ ಪಾಲಿಗೆ ನಿರ್ಣಾಯಕ.

ಇಂಗ್ಲೆಂಡ್ ನಾಯಕ ಬ್ರೂಕ್ ಒಳ್ಳೆಯ ಲಯದಲ್ಲಿದ್ದಾರೆ. ಪಾಕಿಸ್ತಾನ ವಿರುದ್ಧ ಅವರ ಶತಕದ ಆಟ ಇಂಗ್ಲೆಂಡ್ ತಂಡದ ಗೆಲುವಿಗೆ ಕಾರಣವಾಗಿತ್ತು. ಆದರೆ ಜೋಸ್ ಬಟ್ಲರ್ ಅವರಿಂದ ಈ ಟೂರ್ನಿಯಲ್ಲಿ ಒಳ್ಳೆಯ ಇನಿಂಗ್ಸ್ ಬಂದಿಲ್ಲ. ಇಂಗ್ಲೆಂಡ್ ಸ್ಪಿನ್ ದಾಳಿಯೂ ಉತ್ತಮವಾಗಿದ್ದು ಆಫ್ ಸ್ಪಿನ್ನರ್ ಜಾಕ್ಸ್ ಮತ್ತು ಎಡಗೈ ಸ್ಪಿನ್ನರ್ ಲಿಯಾಂ ಡಾಸನ್ ಪರಿಣಾಮಕಾರಿ ಆಗಿದ್ದಾರೆ.



ಹ್ಯಾರಿ ಬ್ರೂಕ್

ಇಂದಿನ ಪಂದ್ಯ
ಇಂಗ್ಲೆಂಡ್ V/s ನ್ಯೂಜಿಲೆಂಡ್
ತಾಣ: ಕೊಲಂಬೊ, ರಾತ್ರಿ 7
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ನಬಿ ದಾಳಿಗೆ ತಡಬಡಾಯಿಸಿದ ಆತಿಥೇಯರು: ಮಯಂಕ್ ಶತಕದ ಆಸರೆ
ಸಂಕಷ್ಟದ ಹಾದಿಯಲ್ಲಿ ಕರ್ನಾಟಕ

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ಇಲ್ಲಿಯ ನೃಪತುಂಗ ಬೆಟ್ಟದಂತೆ ಭಾಸವಾಗುತ್ತಿರುವ ಮೊದಲ ಇನಿಂಗ್ಸ್ ಮೊತ್ತದ ಸವಾಲನ್ನು ಬೆನ್ನತ್ತಿರುವ ಅತಿಥೇಯ ಕರ್ನಾಟಕ ತಂಡಕ್ಕೆ ಜಮ್ಮು–ಕಾಶ್ಮೀರದ ವೇಗಿ ಅಕೀಬ್ ನಬಿ ದಾರ್ ಆಘಾತ ನೀಡಿದರು. ಆದರೆ ಈ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಅನುಭವಿ ಮಯಂಕ್ ಅಗರವಾಲ್ ಅವರು ಗಳಿಸಿದ ದಿಟ್ಟ ಶತಕದಿಂದಾಗಿ ಮುನ್ನಡೆಯ ಸಣ್ಣದೊಂದು ಆಸೆ ಉಳಿದಿದೆ.

ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಮೂರನೇ ದಿನದಾಟದಲ್ಲಿ ಪ್ರವಾಸಿ ಬಳಗವು 584 ರನ್ ಗಳಿಸಿ ಆಲೌಟ್ ಆಯಿತು. ಒಟ್ಟು 786 ನಿಮಿಷಗಳ ಇನಿಂಗ್ಸ್ ಆಡುವ ಮೂಲಕ ಪಾರಸ್ ಡೋಗ್ರಾ ತಂಡವು ಬೃಹತ್ ಮೊತ್ತ ಪೇರಿಸಿತು.

ಪ್ರತ್ಯುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡಕ್ಕೆ ನಬಿ (32ಕ್ಕೆ3) ಒಂದರ ಹಿಂದೆ ಒಂದು ಆಘಾತ ನೀಡಿದರು. ಇದರಿಂದಾಗಿ ಕರ್ನಾಟಕವು ದಿನದಾಟದ ಮುಕ್ತಾಯಕ್ಕೆ 69 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 220 ರನ್ ಗಳಿಸಿದೆ. ಮಯಂಕ್ (ಔಟಾಗದೇ 130; 207ಎ, 4X17) ಮತ್ತು ಕೃತಿಕ್ ಕೃಷ್ಣ (ಔಟಾಗದೇ 27; 75ಎ, 4X2) ಕ್ರೀಸ್‌ನಲ್ಲಿದ್ದಾರೆ. ಇನಿಂಗ್ಸ್ ಬಾಕಿ ಚುಕ್ತಾ ಮಾಡಲು ಇನ್ನೂ 364 ರನ್ ಗಳಿಸುವ ಕಠಿಣ ಸವಾಲು ಆತಿಥೇಯರ ಮೇಲೆ ಇದೆ. ಮಯಂಕ್ ಮತ್ತು ಕೃತಿಕ್ ಮೇಲೆ ಭರವಸೆಯ ನೋಟ ನೆಟ್ಟಿದೆ. ಕೇವಲ ಎರಡು ದಿನಗಳು ಮಾತ್ರ ಉಳಿದಿರುವ ಪಂದ್ಯವು ಡ್ರಾದಲ್ಲಿ ಮುಕ್ತಾಯವಾದರೆ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ ತಂಡವು ಟ್ರೋಫಿಗೆ ಮುತ್ತಿಕ್ಕಲಿದೆ.

ಅಕೀಬ್ ಆಘಾತ– ಮಯಂಕ್ ಚೇತರಿಕೆ: ಹುಬ್ಬಳ್ಳಿಗೆ ಬರುವ ಮುನ್ನ ಈ ಋತುವಿನಲ್ಲಿ 55 ವಿಕೆಟ್‌ಗಳನ್ನು ಗಳಿಸಿದ್ದ 29 ವರ್ಷದ ಬಲಗೈ ವೇಗಿ ನಬಿ ಹಾಗೂ ಭಾರತ ಟೆಸ್ಟ್ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರ ನಡುವಿನ ಪೈಪೋಟಿಯೆಂದೇ ಬಿಂಬಿತವಾಗಿತ್ತು. ಆದರೆ ನಬಿ ತಮ್ಮ ನಿಖರ ದಾಳಿಯ ಮೂಲಕ ರಾಹುಲ್ (13 ರನ್) ಅವರನ್ನು 12ನೇ ಓವರ್‌ನಲ್ಲಿಯೇ ಪೆವಿಲಿಯನ್‌ಗೆ ಕಳಿಸಿದರು. ಕಳೆದ ಎರಡೂವರೆ ದಿನಗಳಿಂದ ರಾಹುಲ್ ಬ್ಯಾಟಿಂಗ್ ನೋಡಲು ತವಕಿಸಿದ್ದ ಅಭಿಮಾನಿಗಳು ನಿರಾಶರಾದರು. ನಾಲ್ಕು ಸಾವಿರಕ್ಕೂ ಹೆಚ್ಚು ಜನರಿದ್ದ ಗ್ಯಾಲರಿ ಸ್ತಬ್ಧವಾಯಿತು. ಅವರಲ್ಲದೇ ಕರುಣ್ ನಾಯರ್ ಮತ್ತು ಈ ಋತುವಿನಲ್ಲಿ 950 ರನ್ ಗಳಿಸಿರುವ ಆರ್. ಸ್ಮರಣ್ ಅವರ ವಿಕೆಟ್‌ಗಳನ್ನು ನಬಿ ತಮ್ಮ ಬುಟ್ಟಿಗೆ ಹಾಕಿಕೊಂಡರು. ಕರ್ನಾಟಕದ ಬೌಲರ್‌ಗಳು ವಿಕೆಟ್ ಗಳಿಸಲು ಕಷ್ಟಪಟ್ಟಿದ್ದ ಪಿಚ್‌ನಲ್ಲಿ ಮಿಂಚಿದರು. ಇನ್ನೊಂದೆಡೆ ನಾಯಕ ದೇವದತ್ತ (11 ರನ್) ಕೂಡ ಸುನಿಲ್ ಕುಮಾರ್ ಬೌಲಿಂಗ್‌ನಲ್ಲಿ ಅಬ್ದುಲ್ ಸಮದ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಇದರಿಂದಾಗಿ 57 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡ ಆತಿಥೇಯರು ಸಂಕಷ್ಟಕ್ಕೀಡಾದರು. ದೇವದತ್ತ ಅವರು ನಬಿಗೆ ಎರಡು ಬೌಂಡರಿ ಹೊಡೆದಿದ್ದರು. ಅವರನ್ನು ಬಿಟ್ಟರೆ ನಬಿ ಎಸೆತದಲ್ಲಿ ಮಯಂಕ್ ಮಾತ್ರ ಒಂದು ಬೌಂಡರಿ ಬಾರಿಸಿದರು. ಅವರ 27 ಎಸೆತಗಳನ್ನು ಎದುರಿಸಿದ ಮಯಂಕ್ 14 ರನ್ ಗಳಿಸಿದರು.

ಮಯಂಕ್ ತಾವೆದುರಿಸಿದ 9ನೇ ಎಸೆತದಲ್ಲಿ ಖಾತೆ ತೆರೆದರು. ಶ್ರೇಯಸ್ ಗೋಪಾಲ್ (27; 83ಎ, 4X1) ಅವರೊಂದಿಗೆ ಐದನೇ ವಿಕೆಟ್ ಜೊತೆಯಾಟದಲ್ಲಿ 105 ರನ್ (188ಎ) ಸೇರಿಸಿ ಒಂದಿಷ್ಟು ಚೇತರಿಕೆ ನೀಡಿದರು. ಆದರೆ ಚಹಾ ವಿರಾಮದ ನಂತರ ಯುದ್ಧವೀರ್ ಸಿಂಗ್ ಚರಕ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಶ್ರೇಯಸ್ ಬಿದ್ದರು. ಜೊತೆಯಾಟ ಮುರಿಯಿತು.

ಮಯಂಕ್ ಮತ್ತು ವಿಕೆಟ್‌ಕೀಪರ್–ಬ್ಯಾಟರ್ ಕೃತಿಕ್ ಕೃಷ್ಣ ಎಚ್ಚರಿಕೆಯಿಂದ ಆಟ ಮುಂದುವರಿಸಿದರು. 154 ಎಸೆತಗಳಲ್ಲಿ ಶತಕ ಪೂರ್ಣಗೊಳಿಸಿದ ಮಯಂಕ್ ಸಂಭ್ರಮಿಸಿದರು. ತಂಡದ ಮೊತ್ತವನ್ನು ದ್ವಿಶತಕದ ಗಡಿ ದಾಟಿಸಿದರು. ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. 63ನೇ ಓವರ್‌ನಲ್ಲಿ ಮಯಂಕ್ ಅವರಿಗೆ ವಿಕೆಟ್‌ಕೀಪರ್ ಕನ್ಹಯ್ಯಾ ವಾಧ್ವಾನ್ ಅವರು ಕ್ಯಾಚ್ ಕೈಚೆಲ್ಲಿ ಜೀವದಾನ ಕೊಟ್ಟರು.

ಹೋದ ನವೆಂಬರ್‌ನಲ್ಲಿ ಇದೇ ಮೈದಾನದಲ್ಲಿ ಲೀಗ್ ಹಂತದಲ್ಲಿ ಚಂಡೀಗಢ ವಿರುದ್ಧದ ಪಂದ್ಯವು ನಡೆದಿತ್ತು. ಆಗ ಮಯಂಕ್ ನಾಯಕರಾಗಿದ್ದರು. ಈ ಪಂದ್ಯದಲ್ಲಿ ಪಡಿಕ್ಕಲ್ ನಾಯಕತ್ವ ವಹಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಮ್ಮು ಮತ್ತು ಕಾಶ್ಮೀರ: 173.1 ಓವರ್‌ಗಳಲ್ಲಿ 584 (ಬುಧವಾರ 6 ವಿಕೆಟ್‌ಗೆ 527) (ಸಾಹಿಲ್ ಲೋತ್ರಾ 72, ಅಬಿದ್ ಮುಷ್ತಾಕ್ 28, ಯುದ್ಧವೀರ್ ಸಿಂಗ್ 30; ಪ್ರಸಿದ್ಧ ಕೃಷ್ಣ 98ಕ್ಕೆ 5). ಕರ್ನಾಟಕ: 69 ಓವರ್‌ಗಳಲ್ಲಿ 5 ವಿಕೆಟ್‌ಗೆ 220 (ಮಯಂಕ್ ಅಗರವಾಲ್ ಔಟಾಗದೇ 130, ಶ್ರೇಯಸ್ ಗೋಪಾಲ್ 27, ಕೃತಿಕ್ ಕೃಷ್ಣ ಔಟಾಗದೇ 27; ಅಕೀಬ್ ನಬಿ 32ಕ್ಕೆ 3).



ಶತಕ ದಾಖಲಿಸಿದ ಮಯಂಕ್ ಅಗರವಾಲ್
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಮುಖ್ಯಾಂಶಗಳು
- ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಮಯಂಕ್ ಅಗರವಾಲ್ 21ನೇ ಶತಕ
- ಮಯಂಕ್–ಶ್ರೇಯಸ್ ಗೋಪಾಲ್ ಶತಕದ ಜೊತೆಯಾಟ
- ವೇಗಿ ಪ್ರಸಿದ್ಧಕೃಷ್ಣಗೆ ಐದು ವಿಕೆಟ್‌ಗಳ ಗೊಂಚಲು



ಯಶಸ್ಸು ಪಡೆಯುವ ವಿಶ್ವಾಸವಿತ್ತು: ನಬಿ

• ಸತೀಶ ಬಿ.

ಹುಬ್ಬಳ್ಳಿ: ಈ ಸಲದ ರಣಜಿ ಋತುವಿನಲ್ಲಿ ಜಮ್ಮು–ಕಾಶ್ಮೀರದ ವೇಗಿ ಅಕೀಬ್ ನಬಿ ದಾರ್ ದೂಳೆಬ್ಬಿಸಿದ್ದಾರೆ. ಇಲ್ಲಿಯವರೆಗೆ ಒಟ್ಟು 58 ವಿಕೆಟ್ ಗಳಿಸಿದ್ದಾರೆ. ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೂ ನಡುಕ ಹುಟ್ಟಿಸಿದ್ದಾರೆ.

ಪಂದ್ಯದ ಮೂರನೇ ದಿನದಾಟದಲ್ಲಿ ಗುರುವಾರ ಕರ್ನಾಟಕ ತಂಡದ ಪ್ರಮುಖ ಮೂರು ವಿಕೆಟ್ ಕಿತ್ತ ಅವರು, ಸುದ್ದಿಗಾರರೊಂದಿಗೆ ಮಾತನಾಡಿದರು.

ಕ್ರೀಸ್‌ನಲ್ಲಿ ಯಾವ ಬ್ಯಾಟರ್ ಇದ್ದಾರೆ ಎಂಬುದಕ್ಕೆ ಗಮನ ಕೊಡದೆ ಉತ್ತಮ ಲೈನ್ ಮತ್ತು ಲೆಂಗ್ತ್‌ನಲ್ಲಿ ಬೌಲಿಂಗ್ ಮಾಡಿದೆ. ವಿಕೆಟ್ ಪಡೆಯುವ ವಿಶ್ವಾಸ ಇತ್ತು. ತಂಡದ ಯೋಜನೆಯೂ ಅದೇ ಆಗಿತ್ತು ಎಂದು ನಬಿ ಹೇಳಿದರು.

ಲೈನ್ ಮತ್ತು ಲೆಂಗ್ತ್ ಕಾಪಾಡಿಕೊಂಡರೆ ಎಷ್ಟು ಉತ್ತಮ ಬ್ಯಾಟರ್ ಇದ್ದರೂ ವಿಕೆಟ್ ಪಡೆಯಬಹುದು. ಪ್ರತಿ ವಿಕೆಟ್ ಸಹ ಮಹತ್ವದ್ದಾಗಿದೆ ಎಂದರು.

‘ನಮ್ಮ ತಂಡ 584 ರನ್ ಗಳಿಸಿದ್ದು, ಉತ್ತಮ ಮೊತ್ತವಾಗಿದೆ. ಪಿಚ್ ಬ್ಯಾಟರ್‌ಗಳಿಗೆ ನೆರವು ನೀಡುತ್ತಿದೆ. ಉತ್ತಮ ಜಾಗದಲ್ಲಿ ಬೌಲಿಂಗ್ ಮಾಡುವುದರಿಂದ ಬ್ಯಾಟರ್‌ಗಳಿಗೆ ಕಷ್ಟವಾಗುತ್ತದೆ. ಹೊಸ ಚೆಂಡಿನಲ್ಲಿ ವೇಗಿಗಳಿಗೆ ಹೆಚ್ಚು ನೆರವು ಸಿಗುವ ಸಾಧ್ಯತೆ ಇದೆ. ಸ್ಪಿನ್ನರ್‌ಗಳಿಗೂ ಯಶಸ್ಸು ಸಿಗುತ್ತಿದೆ. ನಾಲ್ಕನೇ ದಿನದಲ್ಲಿ (ಶುಕ್ರವಾರ) ಮೊದಲ ಅವಧಿ ಮಹತ್ವದ್ದಾಗಿದೆ’ ಎಂದು ಹೇಳಿದರು.

ಬ್ಯಾಟಿಂಗ್ ಸುಧಾರಿಸುವತ್ತ ಭಾರತದ ವನಿತೆಯರ ಚಿತ್ತ


ಸ್ಮೃತಿ ಮಂದಾನ

ಹೋಬಾರ್ಟ್ (ಪಿಟಿಐ): ಭಾರತ ತಂಡವು, ಮಹಿಳಾ ಏಕದಿನ ಸರಣಿಯ ಎರಡನೇ ಪಂದ್ಯ ಶುಕ್ರವಾರ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದ್ದು, ಬ್ಯಾಟರ್‌ಗಳಿಂದ ಸುಧಾರಿತ ಆಟದ ನಿರೀಕ್ಷೆಯಲ್ಲಿದೆ. ಮೊದಲ ಪಂದ್ಯದಲ್ಲಿ ಸೋತಿರುವ ಕಾರಣ ಸರಣಿ ಗೆಲ್ಲಬೇಕಾದರೆ ಈ ಪಂದ್ಯ ವಿಶ್ವ ಚಾಂಪಿಯನ್ ಭಾರತದ ಪಾಲಿಗೆ ನಿರ್ಣಾಯಕ.

ಟಿ20 ಸರಣಿಯನ್ನು 2–1 ರಿಂದ ಗೆದ್ದುಕೊಂಡ ಉತ್ಸಾಹದಲ್ಲಿದ್ದ ಭಾರತ ತಂಡವು, ಬ್ರಿಸ್ಬೇನ್‌ನಲ್ಲಿ ನಡೆದ ಏಕದಿನ ಸರಣಿಯ ಮೊದಲ ಪಂದ್ಯವನ್ನು ಆರು ವಿಕೆಟ್‌ಗಳಿಂದ ಸೋತಿತ್ತು. ಭಾರತ ತಂಡ, ಇದುವರೆಗೆ ಆಸ್ಟ್ರೇಲಿಯಾ ವಿರುದ್ಧ ದ್ವಿಪಕ್ಷೀಯ ಏಕದಿನ ಸರಣಿಯನ್ನು ಗೆದ್ದೇ ಇಲ್ಲ. ಈ ಮಾದರಿಯಲ್ಲಿ ಭಾರತ ಎದುರಿನ ಹಣಾಹಣಿಯಲ್ಲಿ ಆಸ್ಟ್ರೇಲಿಯಾ ಪ್ರಾಬಲ್ಯ ಮೆರೆದಿದ್ದು, ಎಲ್ಲ 11 ದ್ವಿಪಕ್ಷೀಯ ಸರಣಿಗಳನ್ನು ಗೆದ್ದುಕೊಂಡಿದೆ. 2025ರ ಸೆಪ್ಟೆಂಬರ್‌ನಲ್ಲಿ ಕೊನೆಯ ಬಾರಿ ನಡೆದ ಸರಣಿಯನ್ನು ಆಸ್ಟ್ರೇಲಿಯಾ 2–1 ರಿಂದ ಜಯಿಸಿತ್ತು.

ಮೊದಲ ಪಂದ್ಯದಲ್ಲಿ ಸ್ಮೃತಿ ಮಂದಾನ (58), ನಾಯಕಿ ಹರ್ಮನ್‌ಪ್ರೀತ್ ಕೌರ್ (53) ಮತ್ತು ಕಶ್ವಿ ಗೌತಮ್ (43) ಬಿಟ್ಟರೆ ಭಾರತದ ಇತರ ಬ್ಯಾಟರ್‌ಗಳು ಆಸ್ಟ್ರೇಲಿಯಾದ ಶಿಸ್ತುಬದ್ಧ ದಾಳಿಯೆದುರು ಬೇರೂರಿ ಆಡಲು ವಿಫಲರಾಗಿದ್ದರು. ಆರಂಭ ಆಟಗಾರ್ತಿಯರಾದ ಪ್ರತೀಕಾ ರಾವಲ್, ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ನಿರಾಶೆ ಮೂಡಿಸಿದ್ದರು. ಎರಡನೇ ಪಂದ್ಯದಲ್ಲಿ ಇವರಿಂದ ಭಾರತ ಉತ್ತಮ ಆಟ ನಿರೀಕ್ಷಿಸುತ್ತಿದೆ. ಒಂದೆಡೆ ಭಾರತ ಒತ್ತಡದಲ್ಲಿದ್ದರೆ, ಇನ್ನೊಂದು ಕಡೆ ಆಸ್ಟ್ರೇಲಿಯಾ ಈ ಪಂದ್ಯವನ್ನೂ ಗೆದ್ದು ನಾಯಕಿ ಅಲಿಸಾ ಹೀಲಿ ಅವರಿಗೆ ಪರಿಪೂರ್ಣ ರೀತಿ ಬೀಳ್ಕೊಡುಗೆ ನೀಡುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.20, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಿಲಿಯರ್ಡ್ಸ್ ಮನುದೇವ್, ಕ್ಷಿತಿಜ್‌ಗೆ ಜಯ


ಮನುದೇವ್ ಅವರ ಆಟದ ಶೈಲಿ
ಚಿತ್ರ: ಫಕ್ರುದ್ದೀನ್ ಎಚ್

ಮಂಗಳೂರು: ಬೆಂಗಳೂರಿನ ಮನುದೇವ್ ಅವರು ಕಾಸ್ಮೊಪಾಲಿಟನ್ ಕ್ಲಬ್ ಆಶ್ರಯದಲ್ಲಿ ಇಲ್ಲಿ ಗುರುವಾರ ಆರಂಭಗೊಂಡ ರಾಜ್ಯಮಟ್ಟದ ಆಹ್ವಾನಿತ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಸಾಧಿಸಿದರು.

ಕಾಸ್ಮೊಪಾಲಿಟನ್ ಕ್ಲಬ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಅವರು ಯೋಗೀಶ್ ಕುಮಾರ್ ವಿರುದ್ಧ 150-43ರಲ್ಲಿ ಜಯ ಗಳಿಸಿದರು. ಮೇಹುಲ್ ವಿರುದ್ಧ ಆರ್. ಸಂತೋಷ್ 150–118ರಲ್ಲಿ ಗೆಲುವು ದಾಖಲಿಸಿದರು. ಬೆಂಗಳೂರಿನ 13 ವರ್ಷದ ಆಟಗಾರ ಮಹಮ್ಮದ್ ಮುಸ್ತಫ ವಿರುದ್ಧ ಎಂ.ಯೋಗೇಶ್ ಕುಮಾರ್ 150–78ರಲ್ಲಿ ಜಯ ಸಾಧಿಸಿದರು.

ಆರ್.ಸಂತೋಷ್ 200–150ರಲ್ಲಿ ಕ್ಷಿತಿಜ್ ಗರ್ಗ್ ಅವರನ್ನು ಮಣಿಸಿದರು. ಸ್ನೂಕರ್‌ನಲ್ಲಿ ಆರ್.ಸಂತೋಷ್ 2–0ಯಿಂದ (75-32, 63-08) ಆಹಿಲ್ ವಿರುದ್ಧ ಜಯ ಗಳಿಸಿದರು.

ಬಿಎಫ್‌ಸಿಗೆ ಪಂಜಾಬ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತವರಿನಲ್ಲಿ ಅಜೇಯ ಓಟ ಮುಂದುವರಿಸುವ ಛಲದಲ್ಲಿರುವ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಪಂಜಾಬ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ಕಂಠೀರವ ಕ್ರೀಡಾಂಗಣದಲ್ಲಿ ತನ್ನ ಮೊದಲೆರಡು ಪಂದ್ಯಗಳನ್ನು ಆಡಿದ್ದ ಬಿಎಫ್‌ಸಿ ತಂಡವು ಒಂದನ್ನು ಗೆದ್ದರೆ, ಮತ್ತೊಂದರಲ್ಲಿ ಡ್ರಾ ಸಾಧಿಸಿದೆ. ಜಮ್ಶೆಡ್‌ಪುರ ಎಫ್‌ಸಿ ವಿರುದ್ಧ 1–0ಯಿಂದ ಸೋತಿರುವ ಪಂಜಾಬ್ ತಂಡವು ಹಾಲಿ ಋತುವಿನಲ್ಲಿ ಗೆಲುವಿನ ಖಾತೆ ತೆರೆಯುವ ನಿರೀಕ್ಷೆಯಲ್ಲಿದೆ.

ನಾರ್ತ್‌ಈಸ್ಟ್ ಯುನೈಟೆಡ್ ವಿರುದ್ಧದ ಪಂದ್ಯವು 1-1ರಲ್ಲಿ ಡ್ರಾಗೊಂಡ ಬಳಿಕ ಚೆಟ್ರಿ ಪಡೆಯು ಗೆಲುವಿನ ಹಾದಿಗೆ ಮರಳಲು ಎದುರು ನೋಡುತ್ತಿದೆ. ಇದಕ್ಕೂ ಮೊದಲು ಬಿಎಫ್‌ಸಿ ತಂಡವು 2–0ಯಿಂದ ಸ್ಪೋರ್ಟಿಂಗ್ ಡೆಲ್ಲಿ ವಿರುದ್ಧ ಜಯದೊಂದಿಗೆ ಋತುವಿನ ಅಭಿಯಾನ ಆರಂಭಿಸಿತ್ತು.

‘ಎದುರಾಳಿ ತಂಡ ಯಾವುದೇ ಆಗಿರಲಿ, ಮೈದಾನದಲ್ಲಿ ಸಂಪೂರ್ಣ ಹೋರಾಟ ನೀಡುವುದು ಮುಖ್ಯ. ತಂಡದ ಆಟಗಾರರು ಪ್ರತಿ ಪಂದ್ಯವನ್ನು ಕೊನೆಯ ಪಂದ್ಯದಂತೆ ಭಾವಿಸಿ, ರಕ್ಷಣೆ ಮತ್ತು ದಾಳಿಯಲ್ಲಿ ಹೋರಾಟ ನಡೆಸಲಿದ್ದಾರೆ’ ಎಂದು ಬಿಎಫ್‌ಸಿ ತಂಡದ ಮುಖ್ಯ ಕೋಚ್ ರೆನೆಡಿ ಸಿಂಗ್ ಹೇಳಿದ್ದಾರೆ.

ಇಂದಿನ ಪಂದ್ಯ
ಈಸ್ಟ್ ಬೆಂಗಾಲ್ V/s ಜೆಮ್ಷೆಡ್‌ಪುರ
ತಾಣ: ಕೋಲ್ಕತ್ತ, ಸಂಜೆ 5
ಬೆಂಗಳೂರು ಎಫ್‌ಸಿ V/s ಪಂಜಾಬ್ ಎಫ್‌ಸಿ
ತಾಣ: ಬೆಂಗಳೂರು, ಸಂಜೆ 7.30
ಲೈವ್: ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್‌ಕೋಡ್


ಅಭ್ಯಾಸ ನಡೆಸಿದ ಬೆಂಗಳೂರು ಎಫ್‌ಸಿ ತಂಡದ ಆಟಗಾರರು

ಕೇರಂ: ಪವನ್‌ಗೆ ಎರಡು ಪದಕ

ಬೆಂಗಳೂರು: ಬೆಂಗಳೂರಿನ ಪ್ರಾದೇಶಿಕ ಕ್ರೀಡಾ ಮಂಡಳಿಯನ್ನು ಪ್ರತಿನಿಧಿಸಿದ, ಕೇಂದ್ರ ಅಬಕಾರಿ ಮತ್ತು ಕಸ್ಟಮ್ಸ್ ಇಲಾಖೆಯ ಪವನ್ ಅಲ್ಲಾಡ ಅವರು ನವದೆಹಲಿಯಲ್ಲಿ ಈ ತಿಂಗಳ 17 ರಿಂದ 24ರವರೆಗೆ ನಡೆದ ಅಖಿಲ ಭಾರತ ಸಿವಿಲ್ ಸೇವೆಗಳ ಕೇರಂ ಟೂರ್ನಿಯಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡರು. ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಮತ್ತು ತಂಡ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು.

